**ಸಂಪುಟ:** 05 **ಸಂಚಿಕೆ:** 59 **ಪುಟಗಳು:** 08 **ಮಂಗಳವಾರ** 13 ಮೇ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ

ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಾಲ್ಕು ವಿಷಯಗಳನ್ನು ಅನುಸರಿಸಿದರೆ - ದೊಡ್ಡ ಗುರಿಯನ್ನು ಹೊಂದಿರುವುದು, ಜ್ಞಾನವನ್ನು ಸಂಪಾದಿಸುವುದು, ಕಠಿಣ ಪರಿಶ್ರಮ ಮತ್ತು ಪರಿಶ್ರಮ - ಆಗ ಏನನ್ನಾದರೂ ಸಾಧಿಸಬಹುದು.

# ಅರಸೀಕೆರೆಯ ಹೆಮ್ಮೆಯ ಸೈನಿಕನಿಗೆ ಕರ್ತವ್ಯಕ್ಕೆ ಕರೆ

• **ಉಮೇಶ್ ಬಾಣಾವರ ಉದಯವಾಹಿನಿ ಅರಸೀಕೆರೆ**

ಪಂಜಾಬ್ ರಾಜ್ಯದ ಫಿರೋಜ್‌ಪುರ್ ಎಂಬಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪರಮೇಶ್ ವಿಶ್ವಕರ್ಮ ಅವರು, ಈ ತಿಂಗಳ 27 ರ ತನಕ ರಜೆಯಲ್ಲಿದ್ದರು. ರಜೆಯಲ್ಲಿ ಬಂದ ನಂತರವಷ್ಟೇ ಕದನ ಪ್ರಾರಂಭವಾಯಿತು. ನಂತರ ಮನೆಯಲ್ಲಿ ಸದಾ ತಮ್ಮ ಪತ್ನಿ ಮತ್ತು ಮಕ್ಕಳೊಂದಿಗೆ 'ನನಗೆ ಕರೆ ಬಂದಿಲ್ಲ ಮತ್ತು ನಾನು ಈ ಸಂದರ್ಭದಲ್ಲಿ ರಜೆ ತೆಗೆದುಕೊಂಡಿದ್ದು ಸರಿಯಲ್ಲ' ಎಂದು ಸದಾ ಚಡಪಡಿಸುತ್ತಲೇ ಇದ್ದರು. ಭಾನುವಾರ ಸಂಜೆ ಪಂಜಾಬ್ ರಾಜ್ಯದ ಫಿರೋಜ್‌ಪುರ್ ಎಂಬಲ್ಲಿಂದ ಕೂಡಲೇ ತಾವು ಕರ್ತವ್ಯಕ್ಕೆ ಹಾಜರಾಗುವಂತೆ ದೂರವಾಣಿ ಮತ್ತು ವ್ಯಾಟ್ಸಪ್ ಸಂದೇಶದಿಂದ ಕರೆ ಬಂದಿತು.

ಇದರಿಂದ ಕೂಡಲೇ ಕರ್ತವ್ಯ ನಿರತರಾಗಿ ಹೊರಟ ಅರಸಿಕೆರೆಯ ಹೆಮ್ಮೆಯ ಸೈನಿಕ ಪರಮೇಶ್‌ರವರಿಗೆ ಅರಸೀಕೆರೆ ನಗರದ ನಾಗರೀಕರು, ಸಂಘ ಸಂಸ್ಥೆಗಳ ಮುಖಂಡರು ನಗರದ ಬಸ್‌ಸ್ಟ್ಯಾಂಡ್ ಹಿಂಭಾಗದ ಗಣಪತಿ ದೇವಾಲಯದಿಂದ ರೈಲ್ವೆ ನಿಲ್ದಾಣದ ಹೊರಗೆ ಮೆರವಣಿಗೆ ಮಾಡುವ ಮೂಲಕ ಬೀಳ್ಕೊಡುಗೆ ನೀಡಿದರು.

ಪತ್ನಿ ರೂಪ ಶಿಕ್ಷಕರಾಗಿದ್ದು, ಪುತ್ರ ಪುನೀತ್ ವಿಶ್ವಕರ್ಮ



**ದೇಶ ರಕ್ಷಣೆಯಲ್ಲಿ 27 ವರ್ಷಗಳ ನಿರಂತರ ಸೇವೆ**

ಇಂಜಿನಿಯ ರಿಂಗ್ ಮುಗಿಸಿದ್ದು, ಪುತ್ರಿ ದೀಪಿಕಾ ವಿಶ್ವಕರ್ಮ ದ್ವಿತೀಯ ಪಿಯುಸಿ ಓದುತ್ತಿದ್ದಾರೆ. ಪರಮೇಶ್ ವಿಶ್ವಕರ್ಮ ರವರ ಕುಟುಂಬದ ಸದಸ್ಯರನ್ನು ಉದಯವಾಹಿನಿ ಪತ್ರಿಕೆ ಮಾತನಾಡಿಸಿದಾಗ, ಎಲ್ಲಾರೂ ಹೆಮ್ಮೆಯಿಂದ ಪರಮೇಶ್ ವಿಶ್ವಕರ್ಮರ ದೇಶ ಸೇವೆಯ ಬಗ್ಗೆ ಪ್ರಶಂಶಿಸಿದರು. ಕಳೆದ ಒಂದು ವಾರದಿಂದಲೂ ಸಹ ಭಾರತ ಪಾಕಿಸ್ತಾನ ಕದನ ಪ್ರಾರಂಭವಾದಾಗಿನಿಂದ ನಾನು ಈ ಕದನದಲ್ಲಿ ಭಾಗವಹಿಸಲೇಬೇಕು. ನನಗೆ ಸೇನೆಯಿಂದ ದೂರವಾಣಿ ಬರದೇ ಇದ್ದುದ್ದರಿಂದ ಬೇಸರವಾಗಿದೆ ಎಂದು ಚಡಪಡಿಸುತ್ತಿದ್ದರೆಂದು ಕುಟುಂಬದವರೆಲ್ಲರೂ ಸಹ ತಿಳಿಸಿದರು. ಪರಮೇಶ್ ವಿಶ್ವಕರ್ಮ ರವರು ಸೇನೆಗೆ ಸೇರಿದ ಸಮಯದಲ್ಲಿ ಕಾರ್ಗಿಲ್ ಯುದ್ಧ ನಡೆಯುತ್ತಿತ್ತು ಆ ಸಮಯದಲ್ಲಿ ತರಬೇತಿಯಲ್ಲಿದ್ದು ಈಗ ನನ್ನ ಜೀವನದಲ್ಲಿಯೂ ಸಹ ಕದನದಲ್ಲಿ ಭಾಗಿಯಾಗುವ ಸಂದರ್ಭ ಬಂದೊದಗಿರುವುದು ನನ್ನ ಜೀವನದ ಪುಣ್ಯ ಎಂದು ಪರಮೇಶ್ ವಿಶ್ವಕರ್ಮರವರು ತಮ್ಮ ಕುಟುಂಬದವರೊಂದಿಗೆ ಚರ್ಚಿಸಿದ್ದಾಗಿ ಉದಯವಾಹಿನಿ ಪತ್ರಿಕೆಗೆ ತಿಳಿಸಿದರು.

ದೇಶದ ಪ್ರತಿಯೊಬ್ಬ ಸೈನಿಕನು ಸೇನೆಗೆ ಸೇರಿದ ನಂತರ ತನ್ನ ಜೀವನದಲ್ಲಿ ಒಮ್ಮೆಯಾದರೂ ಸಹ ಕದನದಲ್ಲಿ ಪಾಲ್ಗೊಳ್ಳಬೇಕೆಂಬ ಧ್ಯೇಯವಿರುತ್ತದೆ. ಆ ಸುಸಂದರ್ಭ ನಮ್ಮ ಪತಿಗೆ ಒದಗಿ ಬಂದಿರುವುದು ನಮ್ಮ ಕುಟುಂಬದ ಪುಣ್ಯವು ಸಹ ಆಗಿದೆ ಎಂದು ಪತ್ನಿ ರೂಪ ರವರು ಹೆಮ್ಮೆಯಿಂದ ನುಡಿದರು.

**ಭಾರತೀಯ ಗಡಿ ಪ್ರದೇಶಗಳಾದ ಪಂಜಾಬ್, ರಾಜಸ್ಥಾನ, ಜಮ್ಮು ಕಾಶ್ಮೀರ, ಮಣಿಪುರ, ವೆಸ್ಟ್ ಬೆಂಗಾಲ್, ಕೊಯಂಬತ್ತೂರು ಹಾಗೂ ಒಡಿಸ್ಸಾ ನಕ್ಸಲ್ ಏರಿಯಾ ಹಾಗೂ ಹಾಲಿ ಪಂಜಾಬ್ ಪ್ರಾಂತ್ಯದ ಪಾಕಿಸ್ತಾನ-ಭಾರತ ಗಡಿಯಲ್ಲಿ ಸುಮಾರು 27 ವರ್ಷಗಳ ನಿರಂತರ ಸೇವೆ ಸಲ್ಲಿಸಿರುವ ಪರಮೇಶ್ ವಿಶ್ವಕರ್ಮ ಅವರಿಗೆ ತಮಿಳುನಾಡು ಸರ್ಕಾರದ ಏಷ್ಯಾ ಇಂಟರ್‌ನ್ಯಾಷನಲ್ ಕಲ್ಚರ್ ಅಕಾಡೆಮಿ ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸಿದೆ. ಇದಲ್ಲದೆ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಹಲವಾರು ಸಂಘ ಸಂಸ್ಥೆಗಳು ಪರಮೇಶ್ ವಿಶ್ವಕರ್ಮರವರ ನಿರಂತರ ಸೇವೆಗೆ ಅಭಿನಂದನೆ ಸಲ್ಲಿಸಿವೆ.**

**ಕರ್ತವ್ಯಕ್ಕೆ ಹಾಜರಾಗುವಂತೆ ದೂರವಾಣಿ ಮುಖಾಂತರ ಮತ್ತು ವ್ಯಾಟ್ಸಪ್ ಸಂದೇಶದ ಮುಖಾಂತರ ಕರೆ ಬಂದಿದ್ದರಿಂದ ನಮ್ಮ ಕುಟುಂಬಕ್ಕೆ ಸಂತೋಷವಾಗಿದೆ. ಈ ಕದನ ಯಾವುದೇ ಕಾರಣಕ್ಕೂ ನಿಲ್ಲಬಾರದು ಪಾಕಿಸ್ತಾನ-ಭಾರತದ ಕದನದಲ್ಲಿ ನಮ್ಮ ಭಾರತ ಜಯಗಳಿಸುತ್ತದೆ ಆದ್ದರಿಂದ ಯಾವುದೇ ಕಾರಣಕ್ಕೂ ಈ ಕದನ ನಿಲ್ಲಬಾರದು.**

**-ಶ್ರೀಮತಿ ರೂಪ ಪರಮೇಶ್**

## ಸೀಟ್ ಬ್ಲಾಕಿಂಗ್ ಹಗರಣದ ತನಿಖೆಯ ವರದಿ ಈವರೆಗೂ ಕೈಸೇರಿಲ್ಲ: ಸಚಿವ

• **ಉದಯವಾಹಿನಿ, ಬೆಂಗಳೂರು**

2024-25ನೇ ಸಾಲಿನಲ್ಲಿ ನಡೆದ ಸೀಟ್ ಬ್ಲಾಕಿಂಗ್ ಹಗರಣದ ತನಿಖೆಯ ವರದಿ ಇಲ್ಲಿಯವರೆಗೂ ಕೈಸೇರಿಲ್ಲ. ಪೊಲೀಸ್ ಕಮಿಷನರ್ ಬಿ. ದಯಾನಂದ ಅವರಿಂದ ಮಾಹಿತಿ ಪಡೆಯಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಗರಣದ ನಂತರ ಪೊಲೀಸರು ಕೆಲವರನ್ನು ಬಂಧಿಸಿದ್ದರು. ಅವರು ಜಾಮೀನು ಪಡೆದು ಹೊರಬಂದಿದ್ದಾರೆ. ಹಗರಣದಲ್ಲಿ ಹೆಸರಿಸಲಾದ ಕಾಲೇಜುಗಳ ಪಾತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಈ ಕುರಿತು ಸಂಪೂರ್ಣ ಮಾಹಿತಿ ಪಡೆಯಲಾಗುವುದು ಎಂದರು. ಹಗರಣದಲ್ಲಿ ಪ್ರಮುಖವಾಗಿ ಹೆಸರು ಕೇಳಿ ಬಂದಿದ್ದ ಬಿಎಂಎಸ್ ಕಾಲೇಜು ಶೈಕ್ಷಣಿಕ ವರ್ಷದಲ್ಲಿ ಉಳಿಕೆಯಾದ ಯಾವ ಸೀಟು ಭರ್ತಿ ಮಾಡಿಲ್ಲ ಎಂದು ಮಾಹಿತಿ ನೀಡಿದೆ. ಸೀಟ್ ಬ್ಲಾಕಿಂಗ್ ದಂಧೆಯಲ್ಲಿ ಭಾಗಿಯಾದ ಇತರೆ ಕಾಲೇಜುಗಳ ಪಾತ್ರದ ಬಗ್ಗೆ ವರದಿ ನೀಡಲು ಪೊಲೀಸರಿಗೆ ಏಕೆ ಸಾಧ್ಯವಾಗಲಿಲ್ಲ ಎಂಬ ಮಾಹಿತಿ ಬೇಕಿದೆ ಎಂದು ಹೇಳಿದರು.

## ಕೊನೆಗೂ ಬೆಂಗಳೂರು ಕಸ ವಿಲೇವಾರಿ ಸಂಸ್ಕರಣಾ ಘಟಕಕ್ಕೆ ಜಾಗ ಅಂತಿಮ

• **ಉದಯವಾಹಿನಿ, ಬೆಂಗಳೂರು**

ನಗರದ ಕಸವನ್ನು ವಿಲೇವಾರಿ ಮಾಡಲು ಸಂಸ್ಕರಣಾ ಘಟಕವನ್ನು ಸ್ಥಾಪಿಸಲು, ರಾಜ್ಯ ಸರ್ಕಾರ ಬಿಬಿಎಂಪಿಗೆ ಷರತ್ತುಬದ್ಧ ಅನುಮತಿಯನ್ನು ನೀಡಿದೆ. ನಗರದ ಹೊರವಲಯದಲ್ಲಿ ಈ ಘಟಕ ತಲೆ ಎತ್ತಲಿದೆ ಮತ್ತು ಸರ್ಕಾರ ಭೂಮಿ ಖರೀದಿಸಲು ಅನುಮತಿಯನ್ನು ನೀಡಿದೆ. 38 ಎಕರೆ 18 ಗುಂಟೆ ಜಮೀನು ಬಿಬಿಎಂಪಿ ಖರೀದಿಸಲಿದೆ. ಟೆರಾ ಫರ್ಮಾ ಬಯೋಟೆಕ್ನಾಲಜೀಸ್ ಲಿಮಿಟೆಡ್ ಎಂಬ ಖಾಸಗಿ ಕಂಪೆನಿಯಿಂದ ಭೂಮಿಯನ್ನು ಖರೀದಿಸಲು ನಿರ್ಧರಿಸಲಾಗಿದೆ. ಈ ಕಂಪೆನಿಯ ಜೊತೆಗಿನ ಕಸ ಸಂಸ್ಕರಣೆ ಒಪ್ಪಂದವನ್ನು ಸುಮಾರು 10 ವರ್ಷಗಳ ಹಿಂದೆ ರದ್ದು ಪಡಿಸಲಾಗಿತ್ತು ಎನ್ನುವುದು ಗಮನಿಸಬೇಕಾದ ವಿಚಾರ. ಬಿಬಿಎಂಪಿಯು ಕಸ ಸಂಸ್ಕರಣೆಗೆ ನೇರವಾಗಿ ಖಾಸಗಿ ಕಂಪೆನಿಯಿಂದ ಜಮೀನು ಖರೀದಿಸುತ್ತಿರುವುದು ಇದೇ ಮೊದಲು. ಈ ಹಿಂದೆ, ಸರ್ಕಾರೀ ಜಾಗದಲ್ಲಿ ಮಾತ್ರ ಇಂತಹ ಘಟಕವನ್ನು ಸ್ಥಾಪಿಸಲಾಗುತ್ತಿತ್ತು. ಬಿಬಿಎಂಪಿಗೆ ನೀಡುವ ಜಮೀನಿಗೆ ಪರಿಹಾರವನ್ನು ನಿಗದಿ ಪಡಿಸುವ ಜವಾಬ್ದಾರಿಯನ್ನು ಬೆಂಗಳೂರು ಗ್ರಾಮಾಂತರದ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.

## ಪಾಕಿಸ್ತಾನ ನಕ್ಷೆಯಲ್ಲಿ ಕಾಶ್ಮೀರ ಕಾಂಗ್ರೆಸ್ ವಿರುದ್ಧ ಅಶೋಕ ಟೀಕೆ

• **ಉದಯವಾಹಿನಿ, ಬೆಂಗಳೂರು**

'ಕಾಶ್ಮೀರ ಪಾಕಿಸ್ತಾನಕ್ಕೆ ಸೇರಿದ್ದು ಎಂದು ಬಿಂಬಿಸುವ ನಕ್ಷೆಯನ್ನು 'ಎಕ್ಸ್' ಮೂಲಕ ಹಂಚಿಕೊಂಡಿರುವ ಕರ್ನಾಟಕ ಕಾಂಗ್ರೆಸ್ ಮತ್ತೊಮ್ಮೆ ಪಾಕಿಸ್ತಾನದ ಮೇಲೆ ತನಗೆ ಎಷ್ಟು ಪ್ರೀತಿ ಇದೆ ಎಂಬುದನ್ನು ತೋರಿಸಿಕೊಂಡಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ. 'ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್‌ನ ಸಾಮಾಜಿಕ ಜಾಲತಾಣದ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡ ಬಳಿಕ, ಆ ನಕ್ಷೆಯನ್ನು ಹಿಂದಕ್ಕೆ ಪಡೆದಿದ್ದಾರೆ. ಕರ್ನಾಟಕ ಕಾಂಗ್ರೆಸ್ ಪಕ್ಷದ ಐ.ಟಿ ಸೆಲ್ ಪಾಕಿಸ್ತಾನಿ ಉಗ್ರರ ಸ್ಲೀಪರ್ ಸೆಲ್ ಎನ್ನುವುದರಲ್ಲಿ ಅನುಮಾನವೇ ಇಲ್ಲ' ಎಂದು ಹರಿಹಾಯ್ದಿದ್ದಾರೆ. 'ಆಪರೇಷನ್ ಸಿಂಧೂರ ಕಾರ್ಯಾಚರಣೆಗೂ ಮೊದಲೇ ಪಾಕಿಸ್ತಾನದ ಜತೆ ಯುದ್ಧ ಬೇಡ ಎಂದು ಪಾಕಿಸ್ತಾನದ ಪರ ವಕಾಲತ್ತು ವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಜನಾಕ್ರೋಶ ನೋಡಿ ಉಲ್ಟಾ ಹೊಡೆದರು. ಆಪರೇಷನ್ ಸಿಂಧೂರದ ಮೂಲಕ ಉಗ್ರರ ನೆಲೆಗಳನ್ನು ಧ್ವಂಸ ಮಾಡುತ್ತಿದ್ದಂತೆ 'ಎಕ್ಸ್' ಮೂಲಕ ಶಾಂತಿಯ ಜಪ ಮಾಡಿ ಜನರ ಕೈಯಲ್ಲಿ ಉಗಿಸಿಕೊಂಡ ಕಾಂಗ್ರೆಸ್ ಪಕ್ಷ ಅನಿವಾರ್ಯವಾಗಿ 'ಎಕ್ಸ್'ನಿಂದ ಸಂದೇಶ ತೆಗೆದು ಹಾಕಿತ್ತು' ಎಂದಿದ್ದಾರೆ.

# ಭಾರತೀಯರ ರಕ್ತ ಕುದಿಯುತ್ತಿದೆ

## ಇದಕ್ಕೊಂದು ಅಂತ್ಯ ಹಾಡೋಣ !

## ನಿಮ್ಮ ನ್ಯೂಕ್ಲಿಯರ್ ಬ್ಲ್ಯಾಕ್‌ಮೇಲ್‌ಗೆ ನಾವು ಬೆದರಲ್ಲ

## ಪಾಕ್‌ಗೆ ಮೋದಿ ಎಚ್ಚರಿಕೆ



### ದೇಶದ ತಾಯಿ, ಸೋದರಿ, ಮಗಳಿಗೆ ಈ ಪರಾಕ್ರಮ ಸರ್ಮಪಣೆ

**ಆಪರೇಷನ್ ಸಿಂಧೂರ್‌ನಲ್ಲಿ ಶೌರ್ಯ ಪ್ರದರ್ಶಿಸಿದ ಸೈನಿಕರಿಗೆ ನಮನ ಸಲ್ಲಿಸುವ ಮೂಲಕ ಪ್ರಧಾನಿ ಮೋದಿ ತಮ್ಮ ಭಾಷಣವನ್ನು ಪ್ರಾರಂಭಿಸಿದರು."ನಮ್ಮ ಸಶಸ್ತ್ರ ಪಡೆಗಳಿಗೆ ನಾನು ನಮಸ್ಕರಿಸುತ್ತೇನೆ. ನಮ್ಮ ಧೈರ್ಯಶಾಲಿ ಸೈನಿಕರು ಆಪರೇಷನ್ ಸಿಂಧೂರ್ ಸಮಯದಲ್ಲಿ ಶೌರ್ಯವನ್ನು ಪ್ರದರ್ಶಿಸಿದರು ಮತ್ತು ಯಶಸ್ಸನ್ನು ಸಾಧಿಸಿದರು" ಎಂದು ಮೋದಿ ತಮ್ಮ ಭಾಷಣವನ್ನು ಆರಂಭಿಸಿದ್ರು. ಜೊತೆಗೆ ಪ್ರಧಾನಿ ಮೋದಿ ದೇಶದ ತಾಯಿ, ಸೋದರಿ, ಮಗಳಿಗೆ ಈ ಪರಾಕ್ರಮವನ್ನು ಅರ್ಪಣೆ ಮಾಡಿದ್ರು. "ನನಗೆ ವೈಯಕ್ತಿಕವಾಗಿ ನೋವುಂಟು ಮಾಡಿದೆ" ಈ ವಿಜಯವನ್ನು ದೇಶದ ತಾಯಂದಿರು, ಸಹೋದರಿಯರು ಮತ್ತು ಹೆಣ್ಣುಮಕ್ಕಳಿಗೆ ಸಮರ್ಪಿಸಲಾಗಿದೆ. ಸೈನ್ಯವು ಕಷ್ಟಪಟ್ಟು ಕೆಲಸ ಮಾಡಿತು. ಪಹಲ್ಗಾಮ್‌ನಲ್ಲಿ ಅಮಾಯಕರ ಮೇಲೆ ನಡೆದ ಗುಂಡಿನ ದಾಳಿಯು ನನಗೆ ವೈಯಕ್ತಿಕವಾಗಿ ನೋವುಂಟು ಮಾಡಿದೆ. ಅಮಾಯಕ ಜನರನ್ನು ಅವರ ಕುಟುಂಬಗಳ ಮುಂದೆಯೇ ಕೊಲ್ಲಲಾಯಿತು. ಭಯೋತ್ಪಾದಕರಿಗೆ ಭಾರೀ ಹೊಡೆತ ನೀಡಲಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು.**

**ಯಾರ ಮಧ್ಯಸ್ಥಿಕೆ ಒಪ್ಪಲ್ಲ**



**1** ಆಪರೇಷನ್ ಸಿಂಧೂರ್ ಕುರಿತು ಪ್ರಧಾನಿ ಮೋದಿ ದೇಶವನ್ನು ಉದ್ದೇಶಿಸಿ ಮಾತು.

**2** ನೀರು ರಕ್ತ ಒಟ್ಟಿಗೆ ಹರಿಯಲ್ಲ ಎಂಬ ಖಡಕ್ ಸಂದೇಶ ನೀಡದ ಮೋದಿ.

**3** ಉಗ್ರವಾದ ಬಿಡುವವರೆಗೂ ಸಿಂಧೂ ನದಿ ಸೇರಿ ಉಪ ನದಿಗಳಿಂದ ಒಂದು ಹನಿ ನೀರು ಹರಿಯಲ್ಲ ಎಂಬುದು ಪ್ರಧಾನಿ ಮಾತಿನ ಅರ್ಥ.



**ರಕ್ತ ಮತ್ತು ನೀರು ಒಟ್ಟಿಗೆ ಹರಿಯಲು ಸಾಧ್ಯವಿಲ್ಲ**

**ಪಾಕ್‌ಗೆ ಮೋದಿ ಕಠಿಣ ಎಚ್ಚರಿಕೆ**

**ಭಾರತದ ಸೇನಾ ಶಕ್ತಿ ಜಗತ್ತಿಗೆ ಗೊತ್ತಾಗಿದೆ**

### ಭಾರತೀಯ ಹೆಣ್ಮಕ್ಕಳ ಸಿಂದೂರ ಅಳಿಸಿದರೆ ಪರಿಣಾಮ ಏನೆಂತ ಉಗ್ರರಿಗೆ ತೋರಿಸಿದ್ದೇವೆ

• **ಉದಯವಾಹಿನಿ, ನವದೆಹಲಿ**

ನ್ಯೂಕ್ಲಿಯರ್ ಬ್ಲ್ಯಾಕ್‌ಮೇಲ್‌ಗೆ ನಾವು ಬೆದರುವುದಿಲ್ಲ ಎಂದು ಪ್ರಧಾನಿ ಮೋದಿ ಸ್ಪಷ್ಟವಾಗಿ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದಾರೆ. ದೇಶವನ್ನು ಉದ್ದೇಶಿಸಿ ಮಾತನಾಡಿ, ಭಾರತ ಯಾವುದೇ ರೀತಿಯ ಪರಮಾಣು ಬೆದರಿಕೆ ಸಹಿಸುವುದಿಲ್ಲ. ಭಾರತದ ಸರ್ಜಿಕಲ್ ದಾಳಿಗಳು ಪಾಕಿಸ್ತಾನದ ಯುದ್ಧ ಸಿದ್ಧತೆಗಳನ್ನು ಛಿದ್ರಗೊಳಿಸಿವೆ. ಪಾಕಿಸ್ತಾನ ಯುದ್ಧಕ್ಕೆ ಸಿದ್ಧವಾಯಿತು. ಭಾರತ ಬಹಾವಲ್ಪುರ್ ಮತ್ತು ಮುರಿಡ್ಕೆಯಲ್ಲಿನ ಭಯೋತ್ಪಾದಕ ಕೇಂದ್ರಗಳನ್ನು ನಾಶಮಾಡುವ ಮೂಲಕ ಅವರ ಹೃದಯವನ್ನು ಹೊಡೆದು ಹಾಕಿತು ಎಂದರು. ಭಾರತ ನಮ್ಮ ಮೇಲೆ ದಾಳಿ ನಡೆಸಿದರೆ ನಾವು ಪರಮಾಣು ಅಸ್ತ್ರ ಬಳಕೆ ಮಾಡುತ್ತೇವೆ ಎಂದು ಪಾಕಿಸ್ತಾನ ಎಚ್ಚರಿಕೆ ನೀಡುತ್ತಿತ್ತು. ಈಗ ಮೋದಿಯವರು ನಿಮ್ಮ ಅಣ್ವಸ್ತ್ರ ಬೆದರಿಕೆಗೆ ನಾವು ಜಗ್ಗಲ್ಲ, ಬಗ್ಗಲ್ಲ. ನಾವು ಯಾವ ರೀತಿ ಪ್ರತಿಕ್ರಿಯೆ ನೀಡಬೇಕೋ ನಾವು ಅದೇ ರೀತಿಯ ಪ್ರತಿಕ್ರಿಯೆ ನೀಡುತ್ತೇವೆ ಎಂದು ಹೇಳುವ ಮೂಲಕ ಭಾರತ ಎಲ್ಲಾದ್ದಕ್ಕೂ ಸಿದ್ಧವಿದೆ ಎಂಬ ಸಂದೇಶ ಕಳುಹಿಸಿದರು. ನಾವು ಮೊದಲು ಅಣ್ವಸ್ತ್ರ ಬಳಕೆ ಮಾಡುವುದಿಲ್ಲ. ಆದರೆ ನಮ್ಮ ಮೇಲೆ ದಾಳಿ ನಡೆಸಿದರೆ ನಾವು ಅಣ್ವಸ್ತ್ರ ಬಳಕೆಗೆ ಹಿಂಜರಿಕೆ ಮಾಡುವುದಿಲ್ಲ ಎಂಬ ನೀತಿ ಭಾರತ ಅಳವಡಿಸಿಕೊಂಡಿದೆ. ಭಾರತೀಯ ಮಹಿಳೆಯರ ಸಿಂದೂರ ಅಳಿಸಿದರೆ ಏನಾಗುತ್ತದೆ ಎನ್ನುವ ಪಾಠ ಗೊತ್ತಾಗಿದೆ. ಸಿಂದೂರ ಎನ್ನುವುದು ಸಾಮಾನ್ಯದ ಸಂಗತಿ ಅಲ್ಲ. ಆಪರೇಷನ್ ಸಿಂದೂರ್ ನ್ಯಾಯದ ಅಖಂಡ ಪ್ರತಿಜ್ಞೆ ಆಗಿದೆ. ವೈರಿಗಳು ಆಪರೇಷನ್ ಸಿಂದೂರ ಇಷ್ಟು ಕಟುವಾಗಿರುತ್ತದೆ ಎಂದು ಎಣಿಸಿರಲಿಲ್ಲ ಎಂದು ನರೇಂದ್ರ ಮೋದಿ ಹೇಳಿದ್ದಾರೆ. ಭಯೋತ್ಪಾದಕರ ವಿರುದ್ಧ ಟೀಕಾ ಪ್ರಹಾರ ನಡೆಸಿದರು.

ಭಾರತೀಯ ಹೆಣ್ಮಕ್ಕಳ ಸಿಂದೂರ ಅಳಿಸಿದರೆ ಏನು ಪರಿಣಾಮ ಆಗುತ್ತದೆ ಎಂಬುದು ಎಲ್ಲಾ ಉಗ್ರ ಸಂಘಟನೆಗಳಿಗೂ ಗೊತ್ತಾಗಿದೆ. ನಮ್ಮ ಸೇನಾಪಡೆಗಳು ಉಗ್ರರ ಶಿಬಿರಗಳ ಮೇಲೆ ನಿಖರ ದಾಳಿ ನಡೆಸಿವೆ. ದೇಶ ಒಗ್ಗಟ್ಟಾಗಿದ್ದಾಗ ಇಂತ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬಹುದು ಎಂದು ಮೋದಿ ಹೇಳಿದರು. ಭಯೋತ್ಪಾದನೆ ಮತ್ತು ಮಾತುಕತೆ ಒಟ್ಟಿಗೆ ಇರಲು ಸಾಧ್ಯವಿಲ್ಲ. ಭಯೋತ್ಪಾದನೆ ಮತ್ತು ವ್ಯಾಪಾರ ಒಟ್ಟಿಗೆ ಇರಲು ಸಾಧ್ಯವಿಲ್ಲ. ನೀರು ಮತ್ತು ರಕ್ತ ಒಟ್ಟಿಗೆ ಇರಲು ಸಾಧ್ಯವಿಲ್ಲ. ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸುವುದಾದರೆ ಅದು ಭಯೋತ್ಪಾದನೆಯ ವಿಚಾರವಾಗಿ ಇರುತ್ತದೆ. ಪಿಒಕೆ ವಿಚಾರವಾಗಿ ಇರುತ್ತದೆ ಎಂದು ಮೋದಿ ಸ್ಪಷ್ಟಪಡಿಸಿದರು.

**ಸಿಂಧೂ ಜಲ ಒಪ್ಪಂದ ರದ್ದು ಮಾಡಿದ್ದ ಭಾರತ:** ಸದ್ಯ ಭಾರತದಲ್ಲಿ ಹುಟ್ಟುವ ಸಿಂಧೂ ನದಿ, ಅದರ ಉಪ ನದಿಗಾಳದ ಜೇಲಂ, ಚೆನಾಬ್ ನದಿಗಳಿಂದ ಪಾಕಿಸ್ತಾನಕ್ಕೆ ನೀರು ಹರಿಸಲಾಗುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ಸಿಂಧೂ ಜಲ ಒಪ್ಪಂದವನ್ನು ಉಭಯ ರಾಷ್ಟ್ರಗಳು ಮಾಡಿಕೊಂಡಿವೆ. ಪಹಲ್ಗಾಮ್ ದಾಳಿಯ ಬಳಿಕ ಭಾರತ ಸರ್ಕಾರವು ಪಾಕಿಸ್ತಾನದ ವಿರುದ್ಧ ತೆಗೆದುಕೊಂಡ ನಿರ್ಣಯಗಳಲ್ಲಿ ಸಿಂಧೂ ಜಲ ಒಪ್ಪಂದವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಕಳೆದ ಮೂರು ವಾರಗಳಿಂದ ಪಾಕಿಸ್ತಾನಕ್ಕೆ ಒಂದು ಹನಿ ನೀರನ್ನು ಹರಿಸಿಲ್ಲ. ಪಾಕಿಸ್ತಾನವು ಇದೇ ರೀತಿ ಉಗ್ರರಿಗೆ ಬೆಂಬಲ ನೀಡಿ ಅವರ ಭಯೋತ್ಪಾದನಾ ಕೃತ್ಯದಿಂದ ನಮ್ಮ ಭಾರತದ ಜನರ ರಕ್ತ ಹರಿಸುತ್ತಲೇ ಇದ್ದರೆ ನಾವು ಕೂಡ ನಮ್ಮ ನೀರು ಪಾಕಿಸ್ತಾನಕ್ಕೆ ಹರಿಸಲು ಸಾಧ್ಯವಾಗುವಿಲ್ಲ ಎಂಬ ಅರ್ಥದಲ್ಲಿ ಪ್ರಧಾನಿ ಮೋದಿ ನೀರು ಮತ್ತು ರಕ್ತವು ಒಟ್ಟಿಗೆ ಹರಿಯಲ್ಲ ಎಂದು ಹೇಳಿದ್ದಾರೆ.

**ಸೇನೆಗೆ ಸೆಲ್ಯೂಟ್**

**ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತ ಪಾಕಿಸ್ತಾನ , ಪಾಕ್ ಆಕ್ರಮಿತ ಕಾಶ್ಮೀರದ ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿತ್ತು. ಇದಕ್ಕೆ ಪಾಕಿಸ್ತಾನ ಸೇನೆ ಭಾರತದ ಮೇಲೆ ದಾಳಿ ಮಾಡುವ ದುಸ್ಸಾಹಸಕ್ಕೆ ಕೈ ಹಾಕಿತು. ಇದಕ್ಕೆ ಭಾರತ ತಕ್ಕ ತಿರುಗೇಟನ್ನು ನೀಡಿದೆ. ಪಾಕಿಸ್ತಾನದ ಸುಮಾರು 10 ವಾಯುನೆಲೆಗಳ ಮೇಲೆ ಭಾರತ ದಾಳಿ ನಡೆಸಿದ್ದು, ಪಾಕಿಸ್ತಾನವನ್ನು ಕದನ ವಿರಾಮ ಮಾಡಿಕೊಳ್ಳುವಂತೆ ಒತ್ತಡ ಹಾಕುವಲ್ಲಿ ಯಶಸ್ವಿಯಾಗಿತ್ತು. ಎರಡು ದಿನದ ಬಳಿಕ ಪ್ರಧಾನಿ ನರೇಂದ್ರ ಮೋದಿ ಮಾತನಾಡುತ್ತಿದ್ದು, ಸೇನೆಯ ಪರಾಕ್ರಮವನ್ನು ಹಾಡಿ ಹೊಗಳಿದ್ದು, ಮೂರು ಪಡೆಗಳಿಗೆ ಸೆಲ್ಯೂಟ್ ಹೇಳಿದ್ದಾರೆ.**

# ಆಸ್ತಿ ಮಾರಾಟ ಮಾಡಿಕೊಳ್ಳಬೇಡಿ ರಾಮನಗರ ಜನತೆಗೆ ಡಿಕೆ ಶಿವಕುಮಾರ್ ಕರೆ

■ ನಮ್ಮ ಜಿಲ್ಲೆ, ನಮ್ಮ ಸ್ವಾಭಿಮಾನ. ಬೆಂಗಳೂರಿಗೆ ನಾವು ಹೋಗುವುದು ತಪ್ಪಿ ನಮ್ಮನ್ನೇ ಬಳಸಿಕೊಳ್ಳುವ ಕಾಲ ಮುಂದಕ್ಕೆ ಬರಬೇಕು

• **ಉದಯವಾಹಿನಿ, ಹೊಸದಿಲ್ಲಿ**

ಭೂಮಿ ಮೌಲ್ಯ ಹೆಚ್ಚಾಗುತ್ತದೆ, ಜೀವನ ಬದಲಾಗುತ್ತೆ. ಆಸ್ತಿ ಮಾರಾಟ ಮಾಡಿಕೊಳ್ಳಬೇಡಿ ರಾಮನಗರ ಜನತೆಗೆ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕರೆ ಕೊಟ್ಟಿದ್ದಾರೆ.

ಇತ್ತೀಚೆಗೆ ರಾಮನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಡಿಕೆ ಶಿವಕುಮಾರ್, ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಕರೆಯಲು ಮುಂದಾಗಿದ್ದೇವೆ. ಏಕೆಂದರೆ ಇಲ್ಲಿನ ಭೂಮಿ ಮೌಲ್ಯ ಹೆಚ್ಚಾಗಲಿದೆ, ಜನರ ಬದುಕು ಬದಲಾಗಲಿದೆ. ಇದು ನಮ್ಮ ಜಿಲ್ಲೆ, ನಮ್ಮ ಸ್ವಾಭಿಮಾನ. ಬೆಂಗಳೂರಿಗೆ ನಾವು ಹೋಗುವುದು ತಪ್ಪಿ ನಮ್ಮನ್ನೇ ಬಳಸಿಕೊಳ್ಳುವ ಕಾಲ ಮುಂದಕ್ಕೆ ಬರಬೇಕು. ಸುರೇಶ್ ಅವರು ಸ್ಪರ್ಧಿಸುವ ಕ್ಷೇತ್ರವನ್ನು ಬೆಂಗಳೂರು ಗ್ರಾಮಾಂತರ ಕ್ಷೇತ್ರ ಎಂದು ಏಕೆ ಕರೆಯಲಾಗುತ್ತದೆ. ನಮ್ಮ ಹೆಸರನ್ನು ಬಿಟ್ಟು ಕೊಡುವುದಿಲ್ಲ ಎಂದು ಹೇಳಿದರು.

**ಯೋಜನೆಗೆ ಭೂಮಿ ನೀಡಿದ ರೈತರಿಗೆ ನಾಲ್ಕುಪಟ್ಟು ಪರಿಹಾರ:** ಗ್ರೇಟರ್ ಬೆಂಗಳೂರು ಎಂದು ಮಾಡಲು ಹೊರಟಿದ್ದೇವೆ. ಇದನ್ನು ಕೈ ಬಿಡಿ ಎಂದು ದೇವೆಗೌಡರು, ಸಂಸದ ಮಂಜುನಾಥ್ ಅವರು ಪತ್ರ ಬರೆದಿದ್ದರು. ಈ ಹಿಂದೆ ಇದಕ್ಕೆ ಸಹಿ ಹಾಕಿದವರು ಕುಮಾರಸ್ವಾಮಿ. ಆದರೆ ಅವರಿಗೆ ಇದನ್ನು ಮುಂದುವರೆಸಲು ಆಗುವುದಿಲ್ಲ. ಈಗ ನಾನೇಕೆ ಅದನ್ನು ಡಿನೋಟಿಫಿಕೇಷನ್ ಮಾಡಲಿ. ಕೇಸನ್ನು ಹಾಕಿಸಿಕೊಳ್ಳಲು ನಾನು ತಯಾರಿಲ್ಲ. ರೈತರಿಗೆ ನಾಲ್ಕು ಪಟ್ಟು ಪರಿಹಾರ ದೊರೆಯುವಂತೆ ಮಾಡುತ್ತೇನೆ. ಯೋಗೇಶ್ವರ್, ಇಕ್ಬಾಲ್ ಅವರೆಲ್ಲಾ ಸೇರಿ ನಿಮ್ಮ ಬದುಕನ್ನು ಭದ್ರ ಮಾಡುತ್ತೇವೆ ಎಂದರು. (ಕನಕಪುರ - ಬೆಂಗಳೂರು ಹೆದ್ದಾರಿ ಅಭಿವೃದ್ಧಿ ಬಗ್ಗೆ ಡಿಕೆ ಶಿವಕುಮಾರ್) ಗ್ರೇಟರ್ ಬೆಂಗಳೂರು ಮೂಲಕ ಬೆಂಗಳೂರಿಗೆ ಹೊಸ ರೂಪ ನೀಡಲಾಗುತ್ತಿದೆ. ಎರಡು ಮೂರು ದಿನಗಳಲ್ಲಿ ಇದು ಚಾಲನೆಯಾಗಲಿದೆ. ಇದಾದ ತಕ್ಷಣ ಬೆಂಗಳೂರಿನಲ್ಲಿ ಸ್ವಚ್ಚತಾ ಅಭಿಯಾನ ಮಾಡಲಾಗುವುದು. ಪಾಲಿಕೆಯ ಸಹಾಯವಾಣಿ ನೀಡಿ ಬೆಂಗಳೂರಿನಲ್ಲಿ ಎಲ್ಲಿ ಕಸ ಇದೆ ಎಂದು ಸಾರ್ವಜನಿಕರು ಹೇಳಿದರೂ ಪಾಲಿಕೆ ವತಿಯಿಂದ ಅದನ್ನು ಸ್ವಚ್ಛಗೊಳಿಸಲಾಗುವುದು. ಆಮೂಲಕ ಸ್ವಚ್ಛ ಬೆಂಗಳೂರು ರೂಪಿಸಲಾಗುವುದು'' ಎಂದರು. ನಾವು ಕೊಟ್ಟ ಮಾತಿನಂತೆ ಯೋಜನೆಗಳನ್ನು ನೀಡುತ್ತಾ ಬಂದಿದ್ದೇವೆ. ಕೊಟ್ಟ ಭರವಸೆಗಳನ್ನು ಸರಿಯಾಗಿ ಈಡೇರಿಸಿಕೊಂಡು ಬಂದಿರುವ ಸರ್ಕಾರ ಇದ್ದರೆ ಅದು ಕಾಂಗ್ರೆಸ್ ಸರ್ಕಾರ ಮಾತ್ರ. ಈ ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ನಿಮ್ಮ ಖಾತೆಗೆ 15 ಲಕ್ಷ ಹಾಕುತ್ತೇವೆ, ಅಚ್ಛೇದಿನ ಕೊಡುತ್ತೇವೆ ಎಂದು ಹೇಳಿದ್ದರಲ್ಲಾ ಕೊಟ್ಟರಾ? ಬಿಜೆಪಿ ಸರ್ಕಾರದಲ್ಲಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿ, ಆದಾಯ ಪಾತಾಳಕ್ಕೆ ಕುಸಿದ ಕಾರಣ ನಾವು ಈ ಗ್ಯಾರಂಟಿ ಯೋಜನೆ ನೀಡಿದ್ದೇವೆ. ಬೆಲೆ ಏರಿಕೆ ಮಧ್ಯೆ ನಿಮ್ಮ ಜೀವನ ಸುಗಮವಾಗಿ ಸಾಗಬೇಕು ಎಂದು ಈ ಯೋಜನೆ ನೀಡಿದ್ದೇವೆ ಎಂದರು.

**ಭೂಮಿ ಮೌಲ್ಯ ಹೆಚ್ಚಾಗಿ, ಜೀವನ ಬದಲಾಗುತ್ತೆ**





**ಬೆಂಗಳೂರಿಗೆ ಹೊಸ ರೂಪ ನೀಡಲಾಗುವುದು**

''ಕೆಲವೇ ದಿನಗಳಲ್ಲಿ ಗ್ರೇಟರ್ ಬೆಂಗಳೂರು ಅಸ್ತಿತ್ವಕ್ಕೆ ಬರಲಿದೆ. ನಂತರ ಸ್ವಚ್ಛತಾ ಅಭಿಯಾನದ ಮೂಲಕ ನಗರದಲ್ಲಿ ಕಸ ವಿಲೇವಾರಿ ಮಾಡಿ ಸ್ವಚ್ಛ ಬೆಂಗಳೂರು ನಿರ್ಮಿಸಲಾಗುವುದು. ಆ ಮೂಲಕ ಬೆಂಗಳೂರಿಗೆ ಹೊಸ ರೂಪ ನೀಡಲಾಗುವುದು'' ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ತಿಳಿಸಿದರು. ಪುಲಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ 4 ಎಂಎಲ್ ಡಿ ಸಾಮರ್ಥ್ಯದ ಜಲಾಗಾರ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಡಿಸಿಎಂ ಡಿಕೆ. ಶಿವಕುಮಾರ್ ಅವರು ಸೋಮವಾರ ಮಾತನಾಡಿದರು.

**ನಂಬಿಕೆ ನಕ್ಷೆ ಯೋಜನೆ ಜಾರಿ**

**ಇಂದು ಶಂಕುಸ್ಥಾಪನೆ ಮಾಡಿರುವ ಯೋಜನೆ ಸುಮಾರು 30 ಸಾವಿರ ಮನೆಗಳು, 2.50 ಲಕ್ಷ ಜನರಿಗೆ ನೀರು ಪೂರೈಸಲಿದೆ. ಈ ಕ್ಷೇತ್ರದಲ್ಲಿ ರಸ್ತೆಗೆ 130 ಕೋಟಿ, ಮೇಲ್ಸೇತುವೆಗೆ 43 ಕೋಟಿ, 320 ಕೋಟಿ ಇತರೆ ವಾರ್ಡ್ ಅಭಿವೃದ್ಧಿಗೆ, 650 ಕೋಟಿ ವೆಚ್ಚದಲ್ಲಿ ಹೊಸ ಫ್ಲೈಓವರ್, ನಿಮ್ಮ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ನಿಮ್ಮ ಮನೆಬಾಗಿಲಿಗೆ ಉಚಿತವಾಗಿ ರವಾನಿಸಲಾಗುವುದು. ಇದನ್ನು ಸದ್ಯದಲ್ಲೇ ದೊಡ್ಡ ಆಂದೋಲನದ ರೀತಿಯಲ್ಲಿ ಮಾಡಲಾಗುವುದು. 50X80 ವಿಸ್ತೀರ್ಣದಲ್ಲಿ ಮನೆ ನಿರ್ಮಿಸಲು ಪ್ಲಾನ್ ಅನುಮತಿ ಪಡೆಯಲು ಕಚೇರಿಗೆ ಅಲೆಯುವುದನ್ನು ತಪ್ಪಿಸಲು ನಂಬಿಕೆ ನಕ್ಷೆ ಯೋಜನೆ ಜಾರಿ ಮಾಡಲಾಗುವುದು ಎಂದು ಹೇಳಿದರು.**

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,688/Gram24ct ₹8,880/Gram22ct | ಬೆಳ್ಳಿ: ₹97.90/Gram

## ಸುಧೀಂದ್ರನಗರ ರಾಯರ ಮಠದಲ್ಲಿ ಟಿಟಿಡಿ ಕಾರ್ಯಕ್ರಮ

• ಉದಯವಾಹಿನಿ ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ಮತ್ತು ಶ್ರೀ ರಾಘವೇಂದ್ರ ಸೇವಾ ಸಮಿತಿ, ಸುಧೀಂದ್ರನಗರ ಇವುಗಳ ಸಂಯುಕ್ತಾಶ್ರಯದಲ್ಲಿ ಮೇ 13 ರಿಂದ 16ರ ವರೆಗೆ ಜರುಗುವ ಕಾರ್ಯಕ್ರಮಗಳು ಈ ರೀತಿ ಇವೆ:



ಭಜನಾ ಕಾರ್ಯಕ್ರಮ (ಪ್ರತಿದಿನ ಸಂಜೆ 6 ರಿಂದ 7) : ಮೇ 13ರಂದು- ವಿದ್ಯಾರಣ್ಯಪುರದ ಶ್ರೀ ಸುಶಮೀಂದ್ರ ಭಜನಾ ಮಂಡಳಿ, ಮೇ 14ರಂದು-ರಾಜಾಜಿನಗರದ ಶ್ರೀ ಸಮೀರ ಭಜನಾ ಮಂಡಳಿ, ಮೇ 15ರಂದು ಈಜುಕೊಳದ ಬಡಾವಣೆಯ ಶ್ರೀ ವಿಜಯ ವಿಠ್ಠಲ ಭಜನಾ ಮಂಡಳಿ. ಪ್ರವಚನ ಕಾರ್ಯಕ್ರಮ (ಪ್ರತಿದಿನ ಸಂಜೆ 7 ರಿಂದ 8) ಮೇ 13 ರಿಂದ 16ರ ವರೆಗೆ ಶ್ರೀ ಬಿ.ವಿ. ಕೃಷ್ಣಮೂರ್ತಿಯವರಿಂದ ಭಾಗವತ ಸಾರೋದ್ಧಾರ ವಿಷಯವಾಗಿ ಧಾರ್ಮಿಕ ಪ್ರವಚನ. ಹರಿನಾಮ ಸಂಕೀರ್ತನೆ : ಮೇ 16, ಶುಕ್ರವಾರ ಸಂಜೆ 6-30ಕ್ಕೆ. ಗಾಯನ ಶ್ರೀಮತಿ ರಂಜಿತಾ ಪ್ರಸಾದ್, ಕೀಬೋರ್ಡ್ : ಶ್ರೀ ಟಿ.ಎಸ್. ರಮೇಶ್, ತಬಲಾ : ಶ್ರೀ ಶ್ರೀನಿವಾಸ ಕಾಖಂಡಕಿ. ಕಾರ್ಯಕ್ರಮ ನಡೆಯುವ ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

## ಬಿಜೆಪಿಯ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣ: ತೆನ್ನಿರಾ ಮೈನಾ ಹೇಳಿಕೆ ದಾಖಲು

• ಉದಯವಾಹಿನಿ ಬೆಂಗಳೂರು

ಕೊಡಗು ಜಿಲ್ಲೆಯ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣ ಸಂಬಂಧ ಆರೋಪಿ ತೆನ್ನಿರಾ ಮೈನಾ ಅವರು ಹೆಣ್ಣೂರು ಪೊಲೀಸ್ ಠಾಣೆಗೆ ಹಾಜರಾಗಿ ಹೇಳಿಕೆ ನೀಡಿದರು. ಮೃತ ವಿನಯ್ ಸೋಮಯ್ಯ ಆತ್ಮಹತ್ಯೆಗೂ ಮೊದಲು ತನ್ನ ವಿರುದ್ಧ ರಾಜಕೀಯ ಪ್ರೇರಿತ ಎಫ್‌ಐಆರ್ ದಾಖಲಿಸಿ ಕಿರುಕುಳ ನೀಡಲಾಗುತ್ತಿದೆ ಎಂದು ಕೊಡಗಿನ ಶಾಸಕರಾದ ಮಂಥರ್ ಗೌಡ, ಎ.ಎಸ್.ಪೊನ್ನಣ್ಣ, ಕೊಡಗು ಕಾಂಗ್ರೆಸ್ ಮುಖಂಡ ತೆನ್ನೀರಾ ಮೈನಾ ಹೆಸರು ಉಲ್ಲೇಖಿಸಿ ಮರಣಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ಹೆಣ್ಣೂರು ಠಾಣೆ ಪೊಲೀಸರು ತೆನ್ನಿರಾಗೆ ವಿಚಾರಣೆಗೆ ಹಾಜರಾಗುವಂತೆ ಎರಡು ಬಾರಿ ನೋಟಿಸ್ ನೀಡಿದ್ದರು. ಆತ್ಮಹತ್ಯೆಗೂ ತನಗೂ ಸಂಬಂಧವಿಲ್ಲ: ನನಗೂ ಮೃತ ವಿನಯ್ ಸೋಮಯ್ಯಗೂ ವೈಯಕ್ತಿಕ ದ್ವೇಷ ಇಲ್ಲ. ವಿನಯ್ ಅಡ್ಮಿನ್ ಆಗಿದ್ದ ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಕುರಿತು ಅಪಹಾಸ್ಯ ಮಾಡುವ ಪೋಸ್ಟ್ ಹಂಚಿಕೊಂಡಿದ್ದರು. ಹಾಗಾಗಿ ವಿನಯ್ ಸೋಮಯ್ಯ ಸೇರಿ ಗ್ರೂಪ್‌ನ ಮೂವರು ಸದಸ್ಯರ ವಿರುದ್ಧ ಮಡಿಕೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದೆ.

## ಮಹಿಳಾ ಸಹೋದ್ಯೋಗಿಗಳ ಭಾವಚಿತ್ರ ದುರ್ಬಳಕೆ; ಮಾಜಿ ಉದ್ಯೋಗಿ ಬಂಧನ

• ಉದಯವಾಹಿನಿ ಬೆಂಗಳೂರು

ಕಂಪನಿಯ ಮಹಿಳಾ ಸಹೋದ್ಯೋಗಿಗಳ ಭಾವಚಿತ್ರಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತಿದ್ದ ಮಾಜಿ ಉದ್ಯೋಗಿಯನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಜಕ್ಕೂರು ನಿವಾಸಿ ಆಶಿಶ್ ಮೊನ್ನಪ್ಪ (31) ಎಂಬಾತನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮಡಿಕೇರಿಯ ಆಶಿಶ್ ಮೊನ್ನಪ್ಪ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಜಕ್ಕೂರಿನ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ. ಯುವತಿಯರ ಭಾವಚಿತ್ರಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.ಜಕ್ಕೂರು ನಿವಾಸಿ ಆಶಿಶ್ ಮೊನ್ನಪ್ಪ (31) ಎಂಬಾತನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮಡಿಕೇರಿಯ ಆಶಿಶ್ ಮೊನ್ನಪ್ಪ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಜಕ್ಕೂರಿನ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ. ಯುವತಿಯರ ಭಾವಚಿತ್ರಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

## ವ್ಯಕ್ತಿತ್ವ ರೂಪಿಸುವ ತಾಯಿ: ಮಮತಾ

• ಉದಯವಾಹಿನಿ ಬೆಂಗಳೂರು

ಪ್ರತಿಯೊಂದು ಮಗುವನ್ನು ಸಮಾಜದಲ್ಲಿ ಉತ್ತಮ ವ್ಯಕ್ತಿಯನ್ನಾಗಿ ರೂಪಿಸುವಲ್ಲಿ ತಾಯಿಯ ಪಾತ್ರ ದೊಡ್ಡದು ಎಂದು ರಾಜ್ಯ ಮಾಹಿತಿ ಆಯುಕ್ತ ಬಿ.ಆರ್. ಮಮತಾ ಹೇಳಿದರು. ಪರಿವರ್ತನಂ ಟ್ರಸ್ಟ್ ಹಾಗೂ ಮಾಯಾ ಫೌಂಡೇಶನ್ ಹಮ್ಮಿಕೊಂಡಿದ್ದ ತಾಯಂದಿರ ದಿನಾಚರಣೆ ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಪ್ರಕೃತಿಯಲ್ಲಿ ಇರುವ ಎಲ್ಲಾ ರೀತಿಯ ಜೀವಿಗಳಲ್ಲೂ ತನ್ನ ಮಗುವಿಗಾಗಿ ಸದಾ ಮಿಡಿಯುವ ಜೀವವೆಂದರೆ ಅದು ತಾಯಿ. ಮಗುವಿನ ಆರೈಕೆಗಾಗಿ ತನ್ನೆಲ್ಲಾ ಸರ್ವಸ್ವವನ್ನು ಮುಡಿಪಾಗಿಡುತ್ತಾಳೆ. ತನ್ನ ಕರುಳಿನ ಕುಡಿಗೆ ಸಣ್ಣ ಕೆಡುಕಾಗದಂತೆ ಜೋಪಾನ ಮಾಡುತ್ತಾಳೆ' ಎಂದು ತಿಳಿಸಿದರು. ತಾಯಂದಿರ ದಿನಾಚರಣೆ ಪ್ರಯುಕ್ತ ಪತ್ರಿಕೋದ್ಯಮದ ಸಾಧಕರು, ಕ್ರೀಡಾ ಸಾಧಕರು ಸೇರಿದಂತೆ ವಿವಿಧ ಕ್ಷೇತ್ರದ ಸಾಧಕಿಯರನ್ನು, ಗರ್ಭಿಣಿಯರನ್ನು ಸನ್ಮಾನಿಸಲಾಯಿತು. ಕರ್ನಾಟಕ ಜಾನಪದ ಅಕಾಡೆಮಿ ಬಾನಂದೂರು ಕೆಂಪಯ್ಯ, ಮಾಯಾ ಫೌಂಡೇಶನ್‌ನ ಸಂಸ್ಥಾಪಕಿ ರಮ್ಯಾ ಎಂ.ಕೆ., ಪರಿವರ್ತನಂ ಟ್ರಸ್ಟ್ ಸಂಸ್ಥಾಪಕ ವಿನೋದ್ ಚೆನ್ನಕೃಷ್ಣ ಹಾಗೂ ವಿಧಾನಪರಿಷತ್ ಸದಸ್ಯ ಶರವಣ ಉಪಸ್ಥಿತರಿದ್ದರು.

# ಫ್ಲೈ ಓವರ್ ಕಾಮಗಾರಿ ಈಸಿ ಮಾಡಲು ಟ್ರಂಪ್ ಮಧ್ಯಸ್ಥಿಕೆಗೆ ಒತ್ತಾಯ

### ಭಾರತ - ಪಾಕ್ ನಡುವಿನ ಕದನ ವಿರಾಮಕ್ಕೆ ಟ್ರಂಪ್ ಪಾತ್ರ ಚರ್ಚೆಯಲ್ಲಿರುವ ಹೊತ್ತಿನಲ್ಲಿ ಟ್ವೀಟ್ ವೈರಲ್

• ಉದಯವಾಹಿನಿ ಬೆಂಗಳೂರು

ಭಾರತ, ಪಾಕಿಸ್ತಾನದ ನಡುವೆ ಉದ್ವಿಗ್ನತೆ, ಕದನ ವಿರಾಮ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಸ್ಥಿಕೆ, ಬ್ರಹ್ಮೋಸ್ ಸುದ್ದಿಯ ಸುತ್ತ ಬಿಸಿಬಿಸಿ ಚರ್ಚೆ ನಡೆಯುತ್ತಿರಬೇಕಾದರೆ, ವಿಚಿತ್ರ ಪೋಸ್ಟ್ ಒಂದು ಸಾರ್ವಜನಿಕ ವಲಯದಲ್ಲಿ ಭಾರೀ ತಮಾಷೆಗೆ ಕಾರಣವಾಗಿದೆ. ಬೆಂಗಳೂರಿನ ಟ್ರಾಫಿಕ್, ಮಳೆ ಬಂದಾಗ ನಗರದ ಅವಾಂತರ ಆವಾಗಾವಾಗ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗುತ್ತಲೇ ಇರುತ್ತದೆ. ಈಗ, ನಗರದ ಮೂಲಭೂತ ಸೌಕರ್ಯದ ಬಗ್ಗೆ ವ್ಯಕ್ತಿಯೊಬ್ಬರು ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಧ್ಯ ಪ್ರವೇಶಿಸಬೇಕೆಂದು ಒತ್ತಾಯಿಸಿದ್ದಾರೆ.

ಹಾಸ್ಯಾಸ್ಪದ ಟ್ವೀಟ್ ಅನ್ನು ಗಮನಿಸಿದ ಉದ್ಯಮಿ ಟಿ.ವಿ. ಮೋಹನದಾಸ್ ಪೈ ಅವರು ಚರ್ಚೆಯನ್ನು ಮುಂದುವರಿಸಿ, ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಗಮನ ಸೆಳೆಯುವ ಕೆಲಸವನ್ನು ಮಾಡಿದ್ದಾರೆ. ಟ್ವೀಟ್ ಮಾಡಿರುವ ವ್ಯಕ್ತಿಯು, ವರುಷಗಳಿಂದ ಕುಂಟುತ್ತಾ, ತೆವಳುತ್ತಾ ಸಾಗುತ್ತಿರುವ ನಗರದ ಹೃದಯ ಭಾಗದಲ್ಲಿರುವ ಈಜಿಪುರ ಫ್ಲೈಓವರ್ ಅನ್ನು



ಉದಯವಾಹಿನಿ ಚಿತ್ರ

ಉಲ್ಲೇಖಿಸಿದ್ದಾರೆ. ಈಜಿಪುರ ಫ್ಲೈಓವರ್ ವಿಳಂಬಗೊಳ್ಳುತ್ತಿದೆ, ಇದರಿಂದ ನಾಗರೀಕರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಇದರ ಜೊತೆಗೆ, ನಮ್ಮ ಮೆಟ್ರೋದ ಹಳದಿ ಮಾರ್ಗವನ್ನು ಶೀಘ್ರವಾಗಿ ಮುಗಿಸಲು ಬಿಬಿಎಂಪಿ ಮತ್ತು ಬಿಎಂಆರ್‌ಸಿಎಲ್ ಜೊತೆಗೆ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತುಕತೆ ನಡೆಸಬೇಕೆಂದು, ವ್ಯಕ್ತಿ ಒತ್ತಾಯಿಸಿದ್ದಾರೆ.

ಅವರು ಮಾಡಿರುವ ಟ್ವೀಟ್, ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗುತ್ತಿದೆ. ಟ್ವೀಟ್ ಮಾಡಿರುವ ವ್ಯಕ್ತಿ ಅದನ್ನು ಡೊನಾಲ್ಡ್ ಟ್ರಂಪ್ ಅವರ ಅಧಿಕೃತ ಟ್ವಿಟ್ಟರ್ ಹ್ಯಾಂಡಲ್‌ಗೆ ಟ್ಯಾಗ್ ಮಾಡಿರುವುದು ವಿಶೇಷ. ಭಾರತ - ಪಾಕಿಸ್ತಾನದ ನಡುವಿನ ಕದನ ವಿರಾಮಕ್ಕೆ ಟ್ರಂಪ್ ಪಾತ್ರ, ಚಚೆಯಲ್ಲಿರುವ ಹೊತ್ತಿನಲ್ಲಿ, ಈ ಸಿಕ್ಕಾಪಟ್ಟೆ ವೈರಲ್ ಆಗುತ್ತಿದೆ. ಇಷ್ಟಕ್ಕೂ ಮುಗಿಸದ ವ್ಯಕ್ತಿ, ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧವನ್ನು ನಿಲ್ಲಿಸುವುದು ದೊಡ್ಡ ಕೆಲಸವಲ್ಲ. ಅವರು ವಿಶ್ವದ ಬಲಿಷ್ಠ ನಾಯಕ ಎಂದು ತೋರಿಸಲು ಆ ರೀತಿ ಮಾಡಿರಬಹುದು. ಈಜಿಪುರ ಮತ್ತು ನಮ್ಮ ಮೆಟ್ರೋ ಕಾಮಗಾರಿಯನ್ನು ಬೇಗ ಮುಗಿಸಿ, ಅವರ ಸಾಮರ್ಥ್ಯವನ್ನು ತೋರಿಸಲಿ ಎಂದು ವ್ಯಂಗ್ಯವಾಗಿ ಸವಾಲು ಹಾಕಿದ್ದಾರೆ. ಅದಕ್ಕೆ ತರಹೇವಾರಿ ಕಾಮೆಂಟುಗಳು ಬಂದಿದ್ದು, 'ಕದನ ವಿರಾಮ ಬೇಕಾದರೆ ನಡೆಯಬಹುದು, ಆದರೆ ಮೇಲ್ಸೇತುವೆ ಕಟ್ಟಲು ಸಾಧ್ಯವಿಲ್ಲ'. ಇನ್ನೊಂದು ಕಾಮೆಂಟು,' ನೀವೇ ಬಿಬಿಎಂಪಿ ಜೊತೆ ಮಾತನಾಡಿ, ಜಾಗತಿಕ ನಾಯಕರಾಗಿ' ಎನ್ನುವ ವ್ಯಂಗ್ಯ ಕಾಮೆಂಟುಗಳೂ ಬಂದಿವೆ.

**ಏನ್ ಕರ್ಮ ಮಾರಾಯಾ!**


**ಈ ಹಿಂದೆ, ಎಕ್ಸ್ ಬಳಕೆದಾರ ಆಶಯ್ ಸಚ್ದೇವ್, ಸ್ಟ್ಯಾಂಡ್ ಅಪ್ ಕಾಮಿಡಿಯಿನ ಕುನಾಲ್ ಕಾಮ್ರಾ ಮತ್ತು ಮಹಾರಾಷ್ಟ್ರ ಡಿಸಿಎಂ ಏಕನಾಥ್ ಶಿಂಧೆ ನಡುವಿನ ತಿಕ್ಕಾಟ ತಾರಕಕ್ಕೇರಿದ್ದಾಗ, ಈಜಿಪುರ ಫ್ಲೈಓವರ್ ಕೆಳಗೆ ನಿಮ್ಮ ಶೋ ನಡೆಸಿ ಎನ್ನುವ ಆಫರ್ ಅನ್ನು ಕಾಮ್ರಾಗೆ ನೀಡಿದ್ದರು. ಡೊನಾಲ್ಟ್ ಟ್ರಂಪ್‌ಗೆ ಬರೆದ ಟ್ವೀಟ್‌ನಲ್ಲಿ, ನೀವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜೊತೆ ಮಾತನಾಡಿ ಈಜಿಪುರ ಮೇಲ್ಸೇತುವೆ ಕೆಲಸವನ್ನು ಬೇಗ ಮುಗಿಸಲು ಸಹಾಯ ಮಾಡಬಹುದೇ ಒಂದು ವೇಳೆ ನಿಮ್ಮ ಮಧ್ಯಸ್ಥಿಕೆಯಲ್ಲಿ ಕೆಲಸ ಬೇಗ ಮುಗಿದರೆ, ಅದಕ್ಕೆ 'ಮಗಾ ಟ್ರಂಪ್ ಮೇಲ್ಸೇತುವೆ' ಎಂದು ಹೆಸರಿಡುತ್ತೇವೆ ಎಂದು ಬರೆದುಕೊಂಡಿದ್ದಾರೆ. ಜೊತೆಗೆ, ಬಿಎಂಆರ್‌ಸಿಎಲ್ ಜೊತೆ ಮಾತನಾಡಿ ನಮ್ಮ ಮೆಟ್ರೋ ಹಳದಿ ಮಾರ್ಗದ ಕೆಲಸವನ್ನು ಬೇಗ ಮುಗಿಸಲು ಸಹಾಯ ಮಾಡಿ ಎಂದೂ ವಿನಂತಿಸಿಕೊಂಡಿದ್ದಾರೆ.**

# ಈ ವರ್ಷ ಶಾಲಾ ಶುಲ್ಕ ಶೇ.10ಕ್ಕಿಂತ ಹೆಚ್ಚು ಏರಿಕೆ

• ಉದಯವಾಹಿನಿ ಬೆಂಗಳೂರು

ನಗರದ ಖಾಸಗಿ ಶಾಲೆಗಳು 2025-26 ರ ಶೈಕ್ಷಣಿಕ ವರ್ಷಕ್ಕೆ ಸಜ್ಜಾಗುತ್ತಿವೆ, ಇದರ ಬೆನ್ನಲ್ಲೇ ಗಮನಾರ್ಹ ಸಂಖ್ಯೆಯ ಪೋಷಕರು ಶಾಲೆಗಳ ತೀವ್ರ ಶುಲ್ಕ ಏರಿಕೆಯಿಂದ ಹೈರಾಣಾಗಿದ್ದಾರೆ ಎಂದು ಸಮೀಕ್ಷೆಯೊಂದು ಬಹಿರಂಗಪಡಿಸಿದೆ, ಇದು ಪೋಷಕರ ಮೇಲೆ ಆರ್ಥಿಕ ಹೊರೆಯನ್ನು ಹೆಚ್ಚಿಸುತ್ತದೆ.

ಲೋಕಲ್ ಸರ್ಕಲ್ಸ್ ನಡೆಸಿದ ಸಮೀಕ್ಷೆಯ ಪ್ರಕಾರ, ಬೆಂಗಳೂರಿನ ಶೇ. 48 ರಷ್ಟು ಪೋಷಕರು ಶಾಲಾ ಶುಲ್ಕದಲ್ಲಿ ಶೇ.10ಕ್ಕಿಂತ ಅಥವಾ ಅದಕ್ಕಿಂತ ಹೆಚ್ಚು ಶುಲ್ಕ ಹೆಚ್ಚಳವಾಗಲಿದೆ ಎಂದು ವರದಿ ಮಾಡಿದ್ದಾರೆ. ಶೇ. ತಮ್ಮ ಶಾಲೆಗಳು ಇನ್ನೂ ಪರಿಷ್ಕೃತ ಶುಲ್ಕವನ್ನು ಘೋಷಿಸಿಲ್ಲ ಎಂದು 46 ರಷ್ಟು ಜನರು ಹೇಳಿದ್ದಾರೆ, ಇದು ಅನೇಕರನ್ನು ಅನಿಶ್ಚಿತತೆಗೆ ದೂಡಿದೆ. ನಗರದ 2,711 ಪೋಷಕರ ಪ್ರತಿಕ್ರಿಯೆಗಳನ್ನು ಆಧರಿಸಿದ ಸಂಶೋಧನೆಗಳು, ಈಗಾಗಲೇ ಹೆಚ್ಚುತ್ತಿರುವ ಜೀವನ ವೆಚ್ಚ ಮತ್ತು ಶಿಕ್ಷಣ ಸಂಬಂಧಿತ ವೆಚ್ಚಗಳನ್ನು ಎದುರಿಸುತ್ತಿರುವ ಕುಟುಂಬಗಳಿಗೆ ಆತಂಕಕಾರಿ ಚಿತ್ರಣವನ್ನು ಚಿತ್ರಿಸುತ್ತವೆ. 21% ಜನರು ಹೆಚ್ಚಳವು 20% ಮತ್ತು 30%ರ ನಡುವೆ ಇದೆ ಎಂದು ಹೇಳಿದರೆ, ಸುಮಾರು 19% ಜನರು 10-20% ಹೆಚ್ಚಳವನ್ನು ಕಂಡಿದ್ದಾರೆ ಮತ್ತು ಒಂದು ಸಣ್ಣ ಭಾಗವು 5-10% ಹೆಚ್ಚಳವನ್ನು ವರದಿ ಮಾಡಿದೆ. ಶುಲ್ಕದಲ್ಲಿ ಯಾವುದೇ ಬದಲಾವಣೆಯಾಗಿಲ್ಲ ಎಂದು ಕೇವಲ 2% ಜನರು ಹೇಳಿದ್ದಾರೆ, ಆದರೆ ಯಾರೂ 5% ಕ್ಕಿಂತ ಕಡಿಮೆ ಹೆಚ್ಚಳವನ್ನು ವರದಿ ಮಾಡಿಲ್ಲ.



ಉದಯವಾಹಿನಿ ಚಿತ್ರ

ರಾಷ್ಟ್ರೀಯವಾಗಿ, ಖಾಸಗಿ ಶಾಲೆಗಳಲ್ಲಿ ಮಕ್ಕಳಿರುವ ಪೋಷಕರಲ್ಲಿ ಶೇ. 81 ರಷ್ಟು ಜನರು ಕಳೆದ ವರ್ಷಕ್ಕೆ ಹೋಲಿಸಿದರೆ ಶುಲ್ಕ ಶೇ. 10 ಕ್ಕಿಂತ ಹೆಚ್ಚು ಹೆಚ್ಚಾಗಿದೆ ಎಂದು ವರದಿ ಮಾಡಿದ್ದಾರೆ. ನವದೆಹಲಿ, ಬೆಂಗಳೂರು ಮತ್ತು ಹೈದರಾಬಾದ್‌ನಂತಹ ನಗರಗಳಲ್ಲಿ, ಶಾಲಾ ಶುಲ್ಕ ಏರಿಕೆಯು ವ್ಯಾಪಕ ಕಳವಳವನ್ನು ಹುಟ್ಟುಹಾಕಿದೆ ಮತ್ತು ಕೆಲವು ಪ್ರದೇಶಗಳಲ್ಲಿ ಪ್ರತಿಭಟನೆಗಳನ್ನು ಸಹ ನಡೆಸಿದೆ ಎಂದು ಸಮೀಕ್ಷೆಯು ಎತ್ತಿ ತೋರಿಸಿದೆ. ದೆಹಲಿಯ ಡಿಪಿಎಸ್ ದ್ವಾರಕಾದಲ್ಲಿ, ಪೋಷಕರು ಶುಲ್ಕ ಏರಿಕೆಯನ್ನು ಪದೇ ಪದೇ ಪ್ರತಿಭಟಿಸುತ್ತಿದ್ದಾರೆ, ಇದು ವಾರ್ಷಿಕ ಶುಲ್ಕವನ್ನು 1.4 ಲಕ್ಷ ರೂ.ಗಳಿಗೆ ಹೆಚ್ಚಿಸಿದೆ, 2020 ರಿಂದ ಪ್ರತಿ ವರ್ಷ ಶೇ.8-20 ರಷ್ಟು ಬೋಧನಾ ಶುಲ್ಕ ಹೆಚ್ಚಳವಾಗಿದೆ. ಅಧಿಕಾರಿಗಳ ಹಸ್ತಕ್ಷೇಪದ ಹೊರತಾಗಿಯೂ, ಅನೇಕ ಶಾಲೆಗಳು ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಶುಲ್ಕವನ್ನು ಹೆಚ್ಚಿಸುತ್ತಲೇ ಇವೆ. ಕರ್ನಾಟಕದಲ್ಲಿಯೂ ಸಹ, ಶಾಲಾ ಶಿಕ್ಷಣ ಇಲಾಖೆಯು ಪೋಷಕರ ಕಳವಳಗಳಿಗೆ ಪ್ರತಿಕ್ರಿಯಿಸಿ, ಎಲ್ಲಾ ಶಾಲೆಗಳು ವಿವರವಾದ ಶುಲ್ಕ ವಿವರ ಮತ್ತು ಮೀಸಲಾತಿ ನೀತಿಗಳನ್ನು ಪ್ರಕಟಿಸಬೇಕೆಂದು ಸುತ್ತೋಲೆಯನ್ನು ಹೊರಡಿಸಿದೆ. ಶಾಲೆಗಳು ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳನ್ನು ಸ್ಥಾಪಿಸಲು ಸಹ ಸೂಚಿಸಲಾಗಿದೆ, ಜೊತೆಗೆ ಶಿಕ್ಷಣ ಅಧಿಕಾರಿಗಳಿಗೆ ದೂರುಗಳ ಮೇಲೆ ವಿಳಂಬವಿಲ್ಲದೆ ಕಾರ್ಯನಿರ್ವಹಿಸಲು ನಿರ್ದೇಶಿಸಲಾಗಿದೆ.

**ದೇಶಾದ್ಯಂತ ಶೇ. 44 ರಷ್ಟು ಪೋಷಕರು ಕಳೆದ ಮೂರು ವರ್ಷಗಳಲ್ಲಿ ಶೇ. 50-80ರಷ್ಟು ಶುಲ್ಕಗಳು ಅಥವಾ ಅದಕ್ಕಿಂತ ಹೆಚ್ಚು ಹೆಚ್ಚಾಗಿದೆ ಎಂದು ಹೇಳುತ್ತಾರೆ. ಅನೇಕ ಕುಟುಂಬಗಳು ಹೆಚ್ಚುತ್ತಿರುವ ಶಿಕ್ಷಣ ವೆಚ್ಚವನ್ನು ನಿರ್ವಹಿಸಲು ಸಾಲಗಳತ್ತ ಮುಖ ಮಾಡುತ್ತಿವೆ. ಪ್ರೌಢ ಶಾಲೆಗಳಲ್ಲಿ ಮಕ್ಕಳಿರುವವರಿಗೆ, ತರಬೇತಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯ ಹೆಚ್ಚುವರಿ ಒತ್ತಡವು ಆರ್ಥಿಕವಾಗಿ ಸಮರ್ಥನೀಯವಲ್ಲ ಎಂದು ಸಾಬೀತಾಗುತ್ತಿದೆ ಎಂದು ಸಮೀಕ್ಷೆಯು ಬಹಿರಂಗಪಡಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಾಲಾ ಶುಲ್ಕ ಹೆಚ್ಚಳವನ್ನು ನಿಯಂತ್ರಿಸಲು ಮತ್ತು ಯಾವುದೇ ಮಿತಿಗಳನ್ನು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಬೇಕು ಎಂದು ಪೋಷಕರು ಒತ್ತಾಯಿಸಿದ್ದಾರೆ.**

## ಸೈಬರ್ ಅಪರಾಧ ಪತ್ತೆಗೆ ತರಬೇತಿ

• ಉದಯವಾಹಿನಿ ಬೆಂಗಳೂರು

ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ತನಿಖಾ ವ್ಯವಸ್ಥೆಯನ್ನು ಬಲಪಡಿಸಲು ಪೊಲೀಸ್ ಅಧಿಕಾರಿ, ಸಿಬ್ಬಂದಿ, ಪ್ರಾಸಿಕ್ಯೂಟರ್‌ಗಳಿಗೆ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರ (ಸಿಸಿಐಟಿಆರ್) ವತಿಯಿಂದ ತರಬೇತಿ ನೀಡಲಾಗುತ್ತಿದೆ.ರಾಜ್ಯದಲ್ಲಿ ದಾಖಲಾಗುತ್ತಿರುವ ಒಟ್ಟು ಅಪರಾಧ ಪ್ರಕರಣಗಳಲ್ಲಿ ಶೇಕಡ 30ರಷ್ಟು ಸೈಬರ್ ವಂಚನೆಗೆ ಸಂಬಂಧಿಸಿದ್ದಾಗಿವೆ. ಬೆಂಗಳೂರಿನಲ್ಲಿ ಶೇಕಡ 40ರಷ್ಟು ವರದಿಯಾಗಿದೆ. ವಂಚನೆಗೆ ನಾನಾ ಮಾರ್ಗ



ಕಂಡುಕೊಂಡಿರುವ ಕಾರಣ ಆರೋಪಿಗಳ ಪತ್ತೆಯೇ ಪೊಲೀಸರಿಗೆ ಸವಾಲಾಗಿದೆ. ಬ್ಯಾಂಕ್ ಖಾತೆ, ದತ್ತಾಂಶ ಕಳವು, ವಿವಿಧ ಇಲಾಖೆಗಳ ಖಾತೆಗಳು ಹ್ಯಾಕ್ ಆಗುವುದು ಸೇರಿದಂತೆ ನಾನಾ ರೀತಿಯ ಸೈಬರ್ ಅಪರಾಧಗಳು ವರದಿಯಾಗುತ್ತಿವೆ. ಹಳೆಯ ಮಾದರಿಯ ಡಕಾಯಿತಿ, ದರೋಡೆ , ಇತರೆ ಭೌತಿಕ ಕಳ್ಳತನಗಳನ್ನು ಹಿಂದಿಕ್ಕಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚು ವರದಿ ಆಗುತ್ತಿವೆ. ಸೈಬರ್ ಪ್ರಪಂಚದಲ್ಲಿ ಏನೆಲ್ಲಾ ನಡೆಯುತ್ತಿದೆ ಎಂಬುದು ಅಧಿಕಾರಿಗಳು ತಿಳಿದುಕೊಳ್ಳಬೇಕು. ಸೈಬರ್ ಅಪರಾಧ ಪ್ರಕರಣಗಳನ್ನು ಆರಂಭದಲ್ಲಿಯೇ ನಿಯಂತ್ರಿಸುವ ಉದ್ದೇಶದಿಂದ ಈವರೆಗೂ ಪೊಲೀಸ್ ಅಧಿಕಾರಿ, ಸಿಬ್ಬಂದಿ, ಪ್ರಾಸಿಕ್ಯೂಟರ್ ಸೇರಿ 45 ಸಾವಿರ ಜನರಿಗೆ ತರಬೇತಿ ನೀಡಲಾಗಿದೆ' ಎಂದು ಸಿಸಿಐಟಿಆರ್ ಅಧಿಕಾರಿಯೊಬ್ಬರು ತಿಳಿಸಿದರು. ಸೈಬರ್ ಅಪರಾಧ ಪ್ರಕರಣ ಪತ್ತೆ ಸಂಬಂಧ, ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ಪ್ರಾಸಿಕ್ಯೂಟರ್‌ಗಳಿಗೂ ಮಾಹಿತಿ ತಂತ್ರಜ್ಞಾನ ಕೌಶಲ, ಸೈಬರ್ ಸುರಕ್ಷತೆ, ಸಾಮಾಜಿಕ ಜಾಲತಾಣಗಳ ಬಳಕೆ ಮತ್ತು ನಿರ್ವಹಣೆ ಕುರಿತು ತರಬೇತಿ ನೀಡುವ ಮೂಲಕ ಸಶಕ್ತಗೊಳಿಸಲಾಗುತ್ತಿದೆ. ಸೈಬರ್ ಅಪರಾಧಗಳ ತನಿಖೆ ಜಟಿಲವಾಗುತ್ತಿದೆ. ಇದಕ್ಕೆ ತಕ್ಕಂತೆ ತನಿಖಾಧಿಕಾರಿಗಳೂ ಸಮರ್ಥರಾಗಿರಬೇಕು. ಹಾಗಾಗಿ ಸೈಬರ್ ಅಪರಾಧಗಳ ತನಿಖಾಧಿಕಾರಿಗಳಿಗೆ ತಾಂತ್ರಿಕ ನೈಪುಣ್ಯ, ತಾಂತ್ರಿಕ ಪರಿಣತಿ, ವಿಧಿವಿಜ್ಞಾನಗಳ ಕುಶಾಗ್ರಮತಿ ಅಗತ್ಯ' ಎಂದು ಹೇಳಿದರು.

## ಭಾರತ ಮತ್ತಷ್ಟು ಸೇಡು ತೀರಿಸಿಕೊಳ್ಳಬೇಕು ಕೇಂದ್ರಕ್ಕೆ ನಮ್ಮ ಬೆಂಬಲ ಇದೆ

• ಉದಯವಾಹಿನಿ ಬೆಂಗಳೂರು

ಪಹಲ್ಗಾಮ್ ಉಗ್ರರ ದಾಳಿಗೆ ಭಾರತ ಮತ್ತಷ್ಟು ಸೇಡು ತೀರಿಸಿಕೊಳ್ಳಬೇಕು. ಇದಕ್ಕೆ ನಮ್ಮೆಲ್ಲರ ಬೆಂಬಲ ಇದೆ ಅಂತ ಮಾಜಿ ಸಚಿವ ಕಾಂಗ್ರೆಸ್ ನಾಯಕ ಆರ್.ವಿ ದೇಶಪಾಂಡೆ ತಿಳಿಸಿದ್ದಾರೆ.

ಬೆಂಗಳೂರಿನ ಡಿಸಿಎಂ ಡಿಕೆಶಿ ನಿವಾಸದ ಬಳಿ ಭಾರತ-ಪಾಕಿಸ್ತಾನ ನಡುವಿನ ಸಂಘರ್ಷದ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಕದನ ವಿರಾಮ ಒಪ್ಪಂದ ಆದ ನಂತರ ಪಾಕಿಸ್ತಾನ ಸೇನೆ ಗೊತ್ತಿದ್ದೂ ಉದ್ದೇಶ ಪೂರ್ವಕವಾಗಿ ಭಾರತದ ಮೇಲೆ ಫೈರಿಂಗ್ ಮಾಡಿದೆ. ಕದನ ವಿರಾಮ ಉಲ್ಲಂಘನೆ ಮಾಡಿದ್ದಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ. ನಮ್ಮ 3 ಸೇನಾಪಡೆಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ತಕ್ಕ ಉತ್ತರ ಕೊಟ್ಟಿದೆ. ಆದರೂ ಪಾಕಿಸ್ತಾನ ಪ್ರತಿ ಬಾರಿ ಅಧಿಕಪ್ರಸಂಗತನ ಮಾಡ್ತಿದೆ. ಮೈಮೇಲೆ ಹಾಕಿಕೊಂಡು ಬೇರೆ ಬೇರೆ ದೇಶದ ಸಹಾಯ ಪಡೆದುಕೊಳ್ತಿದೆ. ಭಾರತ ಸರ್ಕಾರದ ನಿರ್ಣಯಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಕೇಂದ್ರ ಸರ್ಕಾರದ ನಿರ್ಣಯವನ್ನ ನಾನು ಮೆಚ್ಚುತ್ತೇನೆ ಎಂದು ಹಾಡಿ ಹೊಗಳಿದ್ದಾರೆ. ಮುಂದುವರಿದು ಪಾಕಿಸ್ತಾನದ ಹೇಳಿಕೆಯನ್ನ



ಉದಯವಾಹಿನಿ ಚಿತ್ರ

ನಂಬೋಕೆ ಆಗೊಲ್ಲ. ಪಹಲ್ಗಾಮ್‌ನಲ್ಲಿ 28 ಜನ ಅಮಾಯಕರನ್ನ ಹತ್ಯೆ ಮಾಡಿದ್ರು. ಆ ಹತ್ಯೆಗೆ ಇನ್ನೂ ಸೇಡು ತೆಗೆದುಕೊಳ್ಳಬೇಕು. ಭಾರತ ಸರ್ಕಾರ, ಸೇನೆ ಉತ್ತಮ ಕೆಲಸ ಮಾಡ್ತಿದ್ದಾರೆ, ಅದನ್ನ ಮೆಚ್ಚಬೇಕು. ಈಗಾಗಲೇ ನಮ್ಮ ಸೇನೆ ಪಾಕಿಸ್ತಾನಕ್ಕೆ ಎಚ್ಚರಿಕೆ ಕೊಟ್ಟಿದೆ. ನಾವೆಲ್ಲಾ ಭಾರತೀಯರು ಪಕ್ಷಾತೀತವಾಗಿ ಒಗ್ಗಟ್ಟಾಗಿ ಸೇನೆ ಹಿಂದೆ ನಿಲ್ಲಬೇಕು ಎಂದು ಕರೆ ಕೊಟ್ಟರು.

ಇನ್ನೂ 1971ರ ಮಾದರಿಯಲ್ಲಿ ಪಾಕಿಸ್ತಾನವನ್ನ 2 ಭಾಗ ಮಾಡಬೇಕು ಎಂಬ ಆಗ್ರಹ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಅಂತಹ ಪರಿಸ್ಥಿತಿ ಇಲ್ಲ. ಎರಡು ಭಾಗ ಮಾಡೋ ಸಾಧ್ಯತೆ ಇಲ್ಲ. ಇದೆಲ್ಲ ಸುಳ್ಳು ಸುದ್ದಿ. ಯಾರು ಕಿವಿಗೊಡಬಾರದು ಎಂದು ಹೇಳಿದರು.

## ಬೋರ್ ವೆಲ್ ಕೊರೆಸಲು ರಾಜ್ಯ ಅಂತರ್ಜಲ ಪ್ರಾಧಿಕಾರದ ಅನುಮತಿ

• ಉದಯವಾಹಿನಿ ಬೆಂಗಳೂರು

ರಾಜ್ಯದಲ್ಲಿ ಅಂತರ್ಜಲ ಮೂಲಗಳ ಅತಿಯಾದ ಬಳಕೆಯಿಂದಾಗಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿದೆ. ಹೀಗಾಗಿ ಪರಿಶೀಲನೆ ಮತ್ತು ಸಮತೋಲನವನ್ನು ಜಾರಿಗೆ ತರಲು, ಅಂತರ್ಜಲ ನಿರ್ದೇಶನಾಲಯ ಕರ್ನಾಟಕ ಅಂತರ್ಜಲ ಪ್ರಾಧಿಕಾರ ರಾಜ್ಯದ ಎಲ್ಲಾ ಇಲಾಖೆಗಳಿಗೆ ಮತ್ತೊಮ್ಮೆ ಸೂಚನಾ ಪತ್ರ ಕಳುಹಿಸಿದ್ದು, ನಿರ್ಮಾಣ ಚಟುವಟಿಕೆಗಳಿಗೆ ಅಂತರ್ಜಲವನ್ನು ಬಳಸಲು ಆಕ್ಷೇಪಣಾ ಪ್ರಮಾಣಪತ್ರ ಅಥವಾ ಆಕ್ಯುಪೆನ್ಸಿ ಪ್ರಮಾಣಪತ್ರಕ್ಕೆ ಪ್ರಾಧಿಕಾರದ ಅನುಮತಿ ಕಡ್ಡಾಯವಾಗಿದೆ ಎಂದು ತಿಳಿಸಿದೆ.

ಅಂತರ್ಜಲವನ್ನು ಬಳಸುವ ಕಟ್ಟಡಗಳು, ಇತರ ಸಂಸ್ಥೆಗಳ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ಪ್ರಾಧಿಕಾರದ ಗಮನಕ್ಕೆ ಬಂದಿದ್ದು ಇದರಲ್ಲಿ ಅನೇಕರು ಅನುಮೋದನೆ



ಪಡೆಯುತ್ತಿಲ್ಲ. GDKGA ದತ್ತಾಂಶದ ಪ್ರಕಾರ, 2019 (ಪ್ರಾಧಿಕಾರ ರಚನೆಯಾದಾಗ) ರಿಂದ ಇಲ್ಲಿಯವರೆಗೆ, ಬೆಂಗಳೂರಿ ನಲ್ಲಿ ಕೈಗಾರಿಕೆಗಳು ಮತ್ತು ವಸತಿ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಮಾತ್ರ 205 NOC ಗಳನ್ನು ನೀಡಲಾಗಿದೆ. ಅಂತರ್ಜಲ ಬಳಕೆಗೆ ಪ್ರಾಧಿಕಾರದ ಅನುಮತಿಯನ್ನು ಪಡೆಯದ ಸಂಸ್ಥೆಗಳಿಗೆ ಸುಮಾರು 400 ನೋಟಿಸ್‌ಗಳನ್ನು ನೀಡಲಾಗಿದೆ. 2024-25ರ ಹಣಕಾಸು ವರ್ಷದಲ್ಲಿ 942 ಬೋರ್‌ವೆಲ್‌ಗಳಿಗೆ ಅನುಮತಿ ನೀಡಲಾಗಿದೆ. ನಿಯಮಗಳ ಬಗ್ಗೆ ತಿಳಿದಿಲ್ಲದ ಕಾರಣ ಜನರು ಪ್ರಾಧಿಕಾರದಿಂದ ಅನುಮೋದನೆ ಪಡೆಯುತ್ತಿಲ್ಲ ಎಂದು ಬೆಂಗಳೂರು ನಗರ, ಜಿಡಿಕೆಜಿಎ ಉಪ ನಿರ್ದೇಶಕಿ ಅಂಬಿಕಾ ತಿಳಿಸಿದ್ದಾರೆ. ಮನೆ ಮಾಲೀಕರು ಬೋರ್‌ವೆಲ್‌ಗಳನ್ನು ಕೊರೆಯಲು ಅನುಮತಿಗಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನು (ಬಿಡಬ್ಲ್ಯೂಎಸ್ಎಸ್‌ಬಿ) ಸಂಪರ್ಕಿಸಬೇಕು, ಆದರೆ ದೊಡ್ಡ ಸಂಸ್ಥೆಗಳು ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕಾಗುತ್ತದೆ. ನಗರದಲ್ಲಿನ ಶೇ. 20 ರಷ್ಟು ಯೋಜನೆಗಳು ಸಹ ನಮ್ಮ ಅನುಮೋದನೆ ಪಡೆದಿಲ್ಲ. ಏಕೆಂದರೆ ಬಿಡಬ್ಲ್ಯೂಎಸ್‌ಎಸ್‌ಬಿ ನಮ್ಮನ್ನು ಒಳಗೊಳ್ಳದೆ ಆನ್‌ಲೈನ್‌ನಲ್ಲಿ ಅನುಮತಿ ನೀಡುತ್ತದೆ ಎಂದು ಮತ್ತೊಬ್ಬ ಅಧಿಕಾರಿ ವಿವರಿಸಿದ್ದಾರೆ. ಬೆಂಗಳೂರಿನ ನೀರಿನ ಮಟ್ಟ ವೇಗವಾಗಿ ಕುಸಿಯುತ್ತಿದೆ ಎಂದಿದ್ದಾರೆ.

## ಕರ್ನಾಟಕಕ್ಕೆ ಮುಂಗಾರು ಆಗಮನ: ಈ ಬಾರಿ ದಾಖಲೆ ಮಳೆ ಸಾಧ್ಯತೆ..!

• ಉದಯವಾಹಿನಿ ಬೆಂಗಳೂರು

ಈ ಬಾರಿ ಬೇಸಿಗೆ ಕಾಲ ಬೇಗನೆ ಮುಗಿಯುತ್ತಿದ್ದು, 5 ದಿನ ಮುಂಚಿತವಾಗಿಯೇ ರಾಜ್ಯದಲ್ಲಿ ಮುಂಗಾರು ಆರಂಭವಾಗುವ ಸಾಧ್ಯತೆಗಳಿವೆ ಎಂದು ಭಾರತದ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಪ್ರತಿ ಬಾರಿ ಜೂನ್ 1ಕ್ಕೆ ಮಾನ್ಸೂನ್ ಮಾರುತ ಆರಂಭವಾಗುವ ವಾಡಿಕೆ ಇತ್ತು. ಆದರೆ, ಈ ವರ್ಷ ಮೇ 27ರಂದೇ ಕೇರಳಕ್ಕೆ ಮಾನ್ಸೂನ್ ಪ್ರವೇಶಿಸುವ ಸಾಧ್ಯತೆ ಇದೆ. ಜೂನ್ 1 ರಂದು ನೈಋತ್ಯ ಮಾರುತ ಕೇರಳವನ್ನು ಪ್ರವೇಶಿಸಿದರೆ,




ಜೂನ್ 8ರೊಳಗೆ ಇಡೀ ದೇಶವನ್ನ ಆವರಿಸುತ್ತಿತ್ತು. ಆದರೆ, ಈ ಬಾರಿ 5 ದಿನ ಮುಂಚಿತವಾಗಿ ಮುಂಗಾರು ಮಳೆ ಆರಂಭವಾಗುತ್ತಿದೆ. ಮುಂಗಾರು 5 ದಿನದ ಮುಂಚಿತವಾಗಿ ಬರುತ್ತಿರುವುದು ಕಳೆದ 16 ವರ್ಷದ ಬಳಿಕ ಇದೇ ಮೊದಲಾಗಿದೆ. 2009ರಲ್ಲಿ ಮೇ.23 ರಂದು ಇದೇ ರೀತಿಯಲ್ಲಿ ಮುಂಗಾರು 5 ದಿನಗಳ ಮುಂಚೆ ಆರಂಭವಾಗಿತ್ತು. ಈ ಬಾರಿ ಮೇ 27ರಂದು ಆರಂಭವಾಗುವ ಸಾಧ್ಯತೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

# ಕೆಲವೇ ದಿನಗಳಲ್ಲಿ ಗ್ರೇಟರ್ ಬೆಂಗಳೂರು ಜಾರಿ

### ಸದ್ಯದಲ್ಲೇ ಬೆಂಗಳೂರಿಗೆ ಹೊಸ ರೂಪ ಎಂದು ಆಶ್ವಾಸನೆ ಕೊಟ್ಟ ಡಿಸಿಎಂ ಡಿ.ಕೆ. ಶಿವಕುಮಾರ್

• ಉದಯವಾಹಿನಿ ಬೆಂಗಳೂರು

ಕೆಲವೇ ದಿನಗಳಲ್ಲಿ ಗ್ರೇಟರ್ ಬೆಂಗಳೂರು ಅಸ್ತಿತ್ವಕ್ಕೆ ಬರಲಿದೆ. ನಂತರ ಸ್ವಚ್ಛತಾ ಅಭಿಯಾನದ ಮೂಲಕ ನಗರದಲ್ಲಿ ಕಸ ವಿಲೇವಾರಿ ಮಾಡಿ ಸ್ವಚ್ಛ ಬೆಂಗಳೂರು ನಿರ್ಮಿಸಲಾಗುವುದು. ಆ ಮೂಲಕ ಬೆಂಗಳೂರಿಗೆ ಹೊಸ ರೂಪ ನೀಡಲಾಗುವುದು ಎಂದು ಡಿಸಿಎಂ ಅವರು ತಿಳಿಸಿದರು. ಪುಲಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ 4 ಎಂಎಲ್ ಡಿ ಸಾಮರ್ಥ್ಯದ ಜಲಾಗಾರ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಡಿಸಿಎಂ ಅವರು ಸೋಮವಾರ ಮಾತನಾಡಿದರು.



ಶಂಕುಸ್ಥಾಪನೆ ಮಾಡಿರುವ ಯೋಜನೆ ಸುಮಾರು 30 ಸಾವಿರ ಮನೆಗಳು, 2.50 ಲಕ್ಷ ಜನರಿಗೆ ನೀರು ಪೂರೈಸಲಿದೆ. ಈ ಕ್ಷೇತ್ರದಲ್ಲಿ ರಸ್ತೆಗೆ 130 ಕೋಟಿ, ಮೇಲ್ಸೇತುವೆಗೆ 43 ಕೋಟಿ, 320 ಕೋಟಿ ಇತರೆ ವಾರ್ಡ್ ಅಭಿವೃದ್ಧಿಗೆ, 650 ಕೋಟಿ ವೆಚ್ಚದಲ್ಲಿ ಹೊಸ ಫ್ಲೈಓವರ್, ನಿಮ್ಮ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ನಿಮ್ಮ ಮನೆ ಬಾಗಿಲಿಗೆ ಉಚಿತವಾಗಿ ರವಾನಿಸಲಾಗುವುದು. ಇದನ್ನು ಸದ್ಯದಲ್ಲೇ ದೊಡ್ಡ ಆಂದೋಲನದ ರೀತಿಯಲ್ಲಿ ಮಾಡಲಾಗುವುದು. 50ಫ಼80 ವಿಸ್ತೀರ್ಣದಲ್ಲಿ ಮನೆ ನಿರ್ಮಿಸಲು ಪ್ಲಾನ್ ಅನುಮತಿ ಪಡೆಯಲು ಕಚೇರಿಗೆ ಅಲೆಯುವುದನ್ನು ತಪ್ಪಿಸಲು ನಂಬಿಕೆ ನಕ್ಷೆ ಯೋಜನೆ ಜಾರಿ ಮಾಡಲಾಗುವುದು ಎಂದು ಹೇಳಿದರು.

**ಗ್ರೇಟರ್ ಬೆಂಗಳೂರು ಮೂಲಕ ಬೆಂಗಳೂರಿಗೆ ಹೊಸ ರೂಪ**

ಗ್ರೇಟರ್ ಬೆಂಗಳೂರು ಮೂಲಕ ಬೆಂಗಳೂರಿಗೆ ಹೊಸ ರೂಪ ನೀಡಲಾಗುತ್ತಿದೆ. ಎರಡು ಮೂರು ದಿನಗಳಲ್ಲಿ ಇದು ಚಾಲನೆಯಾಗಲಿದೆ. ಇದಾದ ತಕ್ಷಣ ಬೆಂಗಳೂರಿನಲ್ಲಿ ಸ್ವಚ್ಛತಾ ಅಭಿಯಾನ ಮಾಡಲಾಗುವುದು. ಪಾಲಿಕೆಯ ಸಹಾಯವಾಣಿ ನೀಡಿ ಬೆಂಗಳೂರಿನಲ್ಲಿ ಎಲ್ಲಿ ಕಸ ಇದೆ ಎಂದು ಸಾರ್ವಜನಿಕರು ಹೇಳಿದರೂ ಪಾಲಿಕೆ ವತಿಯಿಂದ ಅದನ್ನು ಸ್ವಚ್ಛಗೊಳಿಸಲಾಗುವುದು. ಆಮೂಲಕ ಸ್ವಚ್ಛ ಬೆಂಗಳೂರು ರೂಪಿಸಲಾಗುವುದು'' ಎಂದರು. ನಾವು ಕೊಟ್ಟ ಮಾತಿನಂತೆ ಯೋಜನೆಗಳನ್ನು ನೀಡುತ್ತಾ ಬಂದಿದ್ದೇವೆ. ಕೊಟ್ಟ ಭರವಸೆಗಳನ್ನು ಸರಿಯಾಗಿ ಈಡೇರಿಸಿಕೊಂಡು ಬಂದಿರುವ ಸರ್ಕಾರ ಇದ್ದರೆ ಅದು ಕಾಂಗ್ರೆಸ್ ಸರ್ಕಾರ ಮಾತ್ರ. ಈ ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ನಿಮ್ಮ ಖಾತೆಗೆ 15 ಲಕ್ಷ ಹಾಕುತ್ತೇವೆ, ಅಚ್ಛೇದಿನ ಕೊಡುತ್ತೇವೆ ಎಂದು ಹೇಳಿದ್ದರಲ್ಲಾ ಕೊಟ್ಟರಾ ಬಿಜೆಪಿ ಸರ್ಕಾರದಲ್ಲಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿ, ಆದಾಯ ಪಾತಾಳಕ್ಕೆ ಕುಸಿದ ಕಾರಣ ನಾವು ಈ ಗ್ಯಾರಂಟಿ ಯೋಜನೆ ನೀಡಿದ್ದೇವೆ. ಬೆಲೆ ಏರಿಕೆ ಮಧ್ಯೆ ನಿಮ್ಮ ಜೀವನ ಸುಗಮವಾಗಿ ಸಾಗಬೇಕು ಎಂದು ಈ ಯೋಜನೆ ನೀಡಿದ್ದೇವೆ' ಎಂದರು. ಈ ಕ್ಷೇತ್ರದಲ್ಲಿ ಶಾಲೆ, ಆಸ್ಪತ್ರೆ ನಿರ್ಮಿಸಿಕೊಡಿ ಎಂದು ಶ್ರೀನಿವಾಸ್ ಅವರು ಹೇಳುತ್ತಿದ್ದರು. ಶಾಸಕರು ಎಲ್ಲಿ ಜಾಗ ಹುಡುಕಿಕೊಡುತ್ತಾರೋ ಅಥವಾ ಹಳೇ ಶಾಲೆಯ ಜಾಗವಿದ್ದರೆ ಅದನ್ನು ಕೊಟ್ಟರೆ ಅಲ್ಲೇ ನೂತನ ಶಾಲೆ ನಿರ್ಮಾಣ ಮಾಡಿ ಕೊಡಲು ಡಿಕೆಶಿ ಬದ್ಧರಾಗಿದ್ದೇನೆ. ಆಸ್ಪತ್ರೆ ನಿರ್ಮಾಣಕ್ಕೂ ಪಾಲಿಕೆ ವತಿಯಿಂದ ಜಾಗ ಹುಡುಕಲಾಗುತ್ತಿದೆ ಎಂದು ಭರವಸೆ ನೀಡಿದರು. ಏಕತೆಯಲ್ಲಿ ಶಕ್ತಿ ಇದೆ. ಎಲ್ಲರೂ ಒಂದಾಗಿ ಸೇರಿಸಲು ಕಾಂಗ್ರೆಸ್ ಪ್ರಯತ್ನಿಸುತ್ತದೆ. ಆದರೆ ಎಲ್ಲರನ್ನು ವಿಭಜನೆ ಮಾಡಲು ಬಿಜೆಪಿ ಪ್ರಯತ್ನಿಸುತ್ತಿದೆ.

**ಸಮಾಜದ ಪ್ರಗತಿಯಾಗ ಬೇಕಾದರೆ ಮಹಿಳೆಯರ ಪ್ರಗತಿಯಾಗಬೇಕು ಎಂದು ಅಂಬೇಡ್ಕರ್ ಹೇಳಿದ್ದಾರೆ. ಎಲ್ಲಾ ಜಾತಿ, ಧರ್ಮ, ಸಂವಿಧಾನ ರಕ್ಷಣೆ ಮಾಡಿ, ಎಲ್ಲಾ ವರ್ಗದವರಿಗೂ ಸಂವಿಧಾನದ ಮೂಲಕ ನ್ಯಾಯ ಒದಗಿಸಿಕೊಡಬೇಕು. ಇಂದು ನಡೆಯುತ್ತಿರುವ ನೀರಿನ ಕಾಮಗಾರಿ ಯೋಜನೆ ಮೂಲಕ ಎ.ಸಿ ಶ್ರೀನಿವಾಸ್ ಅವರು ಈ ಕ್ಷೇತ್ರದ ಇತಿಹಾಸ ಪುಟಕ್ಕೆ ಸೇರಿದ್ದಾರೆ. ನಿಮ್ಮ ಮನೆಗಳಿಗೆ ಶಾಶ್ವತವಾಗಿ ಕುಡಿಯುವ ನೀರನ್ನು ನೀಡಬೇಕು ಎಂದು ಈ ಯೋಜನೆಯನ್ನು ಶ್ರೀನಿವಾಸ್ ಮಾಡಿಸುತ್ತಿದ್ದಾರೆ ಎಂದರು.**



**ಮೊನ್ನೆಯಷ್ಟೇ ಮನೆಮನೆಗೆ ಕಾವೇರಿ, ಸಂಚಾರಿ ಕಾವೇರಿ ಯೋಜನೆ ಮೂಲಕ 650 ರೂಪಾಯಿಗೆ ಟ್ಯಾಂಕರ್ ನೀರು ಪೂರೈಸಲು ಮುಂದಾಗಿದ್ದಾರೆ. ಟ್ಯಾಂಕರ್ ನೀರಿನ ಮಾಫಿಯಾ ತಡೆಗಟ್ಟಲು ಈ ಯೋಜನೆ ಜಾರಿ ಮಾಡಲಾಗಿದೆ. ಈ ಯೋಜನೆ ಮೂಲಕ ಮನೆ ಮನೆಗೆ ಶುದ್ಧ ಕಾವೇರಿ ನೀರು ಪೂರೈಸಲಾಗುತ್ತಿದೆ. ನಾನು ಅಧಿಕಾರಕ್ಕೆ ಬಂದ ನಂತರ ಕಾವೇರಿ ಐದನೇ ಹಂತದ ಯೋಜನೆ ಜಾರಿ ಮಾಡಲಾಗಿದೆ. ನಂತರ ಬೆಂಗಳೂರಿಗೆ ಪೂರೈಸಲು ಹೆಚ್ಚುವರಿಯಾಗಿ 6 ಟಿಎಂಸಿ ನೀರನ್ನು ನೀಡಲಾಗಿದೆ. ಆಮೂಲಕ ಮುಂದಿನ 30-40 ವರ್ಷಗಳ ಕಾಲ ಬೆಂಗಳೂರಿಗೆ ಕುಡಿಯಲು ನೀರನ್ನು ಪೂರೈಸಬಹುದು ಎಂದು ತಿಳಿಸಿದರು.**

## ಪಿಸ್ತೂಲು ಹಿಡಿದು ಜಿಯಾಮೆಟ್ರಿ ಪಬ್‌ಗೆ ನುಗ್ಗಿದ ವ್ಯಕ್ತಿ; ಕ್ಯಾಶ್ ಕೌಂಟರ್ ಒಡೆದು ಹಣ ದೋಚಿ ಪರಾರಿ


• ಉದಯವಾಹಿನಿ ಬೆಂಗಳೂರು

ಪಿಸ್ತೂಲು ಹಿಡಿದು ರಾಜಾಜಿನಗರದ ಜಿಯಾಮೆಟ್ರಿ ಪಬ್‌ಗೆ ನುಗ್ಗಿದ ಕಳ್ಳನೊಬ್ಬ ಕ್ಯಾಶ್ ಕೌಂಟರ್ ಒಡೆದು, ಅದರಲ್ಲಿದ್ದ ನಗದು ಕದ್ದು ಪರಾರಿಯಾಗಿರುವ ಘಟನೆ ನಡೆದಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಸುಬ್ರಹ್ಮಣ್ಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಗಾಯತ್ರಿನಗರ ರಸ್ತೆಯಲ್ಲಿರುವ ಜಿಯಾಮೆಟ್ರಿ ಬ್ರೂವರಿ ಮತ್ತು ಕಿಚನ್‌ನಲ್ಲಿ ಬೆಳಗಿನ ಜಾವ 3.30 ರಿಂದ 4 ಗಂಟೆಯ ನಡುವೆ ಈ ಘಟನೆ ನಡೆದಿದೆ.

ಪೊಲೀಸರ ಪ್ರಕಾರ, ಶಂಕಿತ ವ್ಯಕ್ತಿ ಹಿಂಬಾಗಿಲಿನಿಂದ ಪ್ರವೇಶಿಸಿ ಸುಮಾರು 50,000 ರಿಂದ 60,000 ರೂ. ನಗದು ಕದ್ದಿದ್ದಾನೆ. ಪಿಸ್ತೂಲು ಹಿಡಿದು ಪಬ್‌ನೊಳಗೆ ಕಳ್ಳ ನುಗ್ಗಿರುವುದನ್ನು ಗಮನಿಸಿದ ಭದ್ರತಾ ಸಿಬ್ಬಂದಿ ಬಾಗಿಲು ಮುಚ್ಚಿ ಬೆಳಿಗ್ಗೆ 4.30 ಯಿಂದ 5 ಗಂಟೆ ಸುಮಾರಿಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಬಂದು ಪರಿಶೀಲನೆ ನಡೆಸುವ ಹೊತ್ತಿಗಾಗಲೇ ಕಳ್ಳ ಪರಾರಿಯಾಗಿದ್ದಾನೆ. ಸಿಸಿಟಿವಿ ಕ್ಯಾಮೆರಾಗಳು ಸ್ವಿಚ್ ಆಫ್ ಆಗಿವೆ. ಎಫ್‌ಐಆರ್ ಆಧರಿಸಿ, ಹೆಚ್ಚಿನ ತನಿಖೆ ನಡೆಸಲಾಗುವುದು' ಎಂದು ಉಪ ಪೊಲೀಸ್ ಆಯುಕ್ತ (ಉತ್ತರ) ಸೈದುಲು ಅದಾವತ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳ್ಳನ ಬಳಿ ಆಯುಧವಿತ್ತು ಎಂದು ಭದ್ರತಾ ಸಿಬ್ಬಂದಿ ಹೇಳಿದ್ದು, ಅದನ್ನು ಖಚಿತಪಡಿಸಿಕೊಳ್ಳಬೇಕಾಗಿದೆ. ಕಳ್ಳ ಒಳನುಗ್ಗಿದ್ದು ನಿಜ. ಆದರೆ, ಆತನ ಕೈಯಲ್ಲಿ ಪಿಸ್ತೂಲು



ಉದಯವಾಹಿನಿ ಚಿತ್ರ

ಇತ್ತು ಎಂಬುದು ಇನ್ನೂ ದೃಢಪಟ್ಟಿಲ್ಲ. ಭದ್ರತಾ ಸಿಬ್ಬಂದಿ ಶಂಕಿತನನ್ನು ದೂರದಿಂದ ನೋಡಿದ್ದು, ಆತ ಮಾಸ್ಕ್ ಧರಿಸಿದ್ದ. ಕಳ್ಳ ಪಿಸ್ತೂಲು ಹಿಡಿದಿದ್ದ ಕುರಿತು ತನಿಖೆ ಮಾಡಲಾಗುವುದು ಎಂದು ಅವರು ಹೇಳಿದರು.

ಇಡೀ ಕಟ್ಟಡವನ್ನು ಶೋಧಿಸಿದರೂ ಕಳ್ಳ ಪತ್ತೆಯಾಗಲಿಲ್ಲ. ರಾತ್ರಿ ವೇಳೆ ಅವನು ಸ್ನಾನಗೃಹ ಅಥವಾ ಅಡುಗೆಮನೆ ಮೂಲಕ ಪರಾರಿಯಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಪಂಬ್ ಅನ್ನು ಬೆಳಗಿನ ಜಾವ 1.30ರ ಹೊತ್ತಿಗೆ ಮುಚ್ಚಲಾಯಿತು ಮತ್ತು ಕಳ್ಳನು ಹಿಂಬದಿ ಇರುವ ತುರ್ತು ದ್ವಾರದ ಮೂಲಕ ಪ್ರವೇಶಿಸಿದ್ದಾನೆ ಎಂದು ಹೇಳಲಾಗುತ್ತಿದೆ. ಈ ವೇಳೆ ಭದ್ರತಾ ಸಿಬ್ಬಂದಿ ಮುಂಭಾಗದಲ್ಲಿದ್ದರು. ಶಬ್ದ ಕೇಳಿ ಒಳಗೆ ಹೋಗಿ ನೋಡಿದಾಗ ಕಳ್ಳ ಬಂದಿರುವುದು ಪತ್ತೆಯಾಗಿದೆ. ಕಳ್ಳ ಹೇಗೆ ಮತ್ತು ಯಾವಾಗ ಹೊರಗೆ ಹೋದನೆಂದು ಕಾವಲುಗಾರನಿಗೆ ತಿಳಿದಿಲ್ಲ ಎಂದು ಅವರು ಹೇಳಿದರು. ಒಬ್ಬ ವ್ಯಕ್ತಿ ಮಾತ್ರ ಬಂದಿದ್ದು, ಕ್ಯಾಶ್ ಕೌಂಟರ್ ಒಡೆದು ಹಣ ದೋಚಿದ್ದಾನೆ. ದೂರಿನ ಆಧಾರದ ಮೇಲೆ, ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುತ್ತೇವೆ' ಎಂದು ಡಿಸಿಪಿ ಹೇಳಿದರು.

ಅಂತರಾಳದಿಂದ.. EDITORIAL

# ಕದನ ವಿರಾಮ ಸ್ವಾಗತಾರ್ಹ; ಅಮೆರಿಕದ ಮಧ್ಯಸ್ಥಿಕೆ ಇತ್ತೇ?



ಭಾರತ ಮತ್ತು ಪಾಕಿಸ್ತಾನವು ಶನಿವಾರದಿಂದ ಅನ್ವಯ ಆಗುವಂತೆ ಕದನ ವಿರಾಮವನ್ನು ಜಾರಿಗೆ ತಂದಿವೆ. ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ ನಂತರದಲ್ಲಿ ಎರಡೂ ದೇಶಗಳ ನಡುವೆ ತೀವ್ರ ಸ್ವರೂಪದ ಬಿಕ್ಕಟ್ಟು ಸೃಷ್ಟಿಯಾಗಿತ್ತು. ನಂತರದಲ್ಲಿ ಎರಡೂ ದೇಶಗಳ ನಡುವೆ ಸಂಘರ್ಷ ಕೂಡ ಉಂಟಾಗಿತ್ತು. ಇಂತಹ ಸಂದರ್ಭದಲ್ಲಿ ಮೂಡಿರುವ ಈ ಕದನ ವಿರಾಮ ಸ್ವಾಗತಾರ್ಹ. ಏಕೆಂದರೆ ಭಾರತವು ಹೆಚ್ಚಿನ ನಷ್ಟ ಅನುಭವಿಸದೆ ತನ್ನ ನಿಲುವನ್ನು ಪಾಕಿಸ್ತಾನಕ್ಕೆ ಸ್ಪಷ್ಟಪಡಿಸುವ ಕೆಲಸ ಮಾಡಿದೆ. ಕದನ ವಿರಾಮಕ್ಕೆ ಶನಿವಾರ ತುಸು ಮಟ್ಟಿಗೆ ಭಂಗ ಎದುರಾಗಿತ್ತಾದರೂ ಭಾನುವಾರ ಕದನ ವಿರಾಮ ಉಲ್ಲಂಘನೆ ಅದ ವರದಿಗಳು ಇಲ್ಲ. ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ಆರಂಭ ಆಗಿರಲಿಲ್ಲವಾದರೂ, ಎರಡೂ ದೇಶಗಳು ಕ್ಷಿಪಣಿಗಳ ಬಳಕೆ ಮಾಡಿದ್ದವು. ಎರಡೂ ದೇಶಗಳು ಡ್ರೋನ್ ಬಳಕೆ ಮಾಡಿದ್ದವು ಹಾಗೂ ಗಡಿ ನಿಯಂತ್ರಣ ರೇಖೆಯ ಬಳಿ ಶೆಲ್ ದಾಳಿ ನಡೆದಿತ್ತು. ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕರ ಶಿಬಿರಗಳ ಮೇಲೆ ಭಾರತ ದಾಳಿ ನಡೆಸಿತ್ತು. ಅಲ್ಲದೆ, ಪಾಕಿಸ್ತಾನದಲ್ಲಿ ಇರುವ ಭಯೋತ್ಪಾದಕರ ಮೂಲಸೌಕರ್ಯಗಳಿಗೆ ಹಾನಿ ಉಂಟುಮಾಡುವಲ್ಲಿ ಭಾರತ ಯಶಸ್ಸು ಕಂಡಿತ್ತು. ಎರಡೂ ದೇಶಗಳ ಮಿಲಿಟರಿಯನ್ನು ಯುದ್ಧಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿತ್ತು. ಸಂಘರ್ಷವು ಯುದ್ಧದ ಸ್ವರೂಪವನ್ನು ಪಡೆದುಕೊಳ್ಳಬಹುದು ಎಂಬ ಸ್ಥಿತಿ ನಿರ್ಮಾಣ ಆಗಿದ್ದಾಗ, ಎರಡೂ ದೇಶಗಳ ನಡುವೆ ಕದನ ವಿರಾಮ ಜಾರಿಗೆ ಬಂದಿದೆ. ಪೂರ್ಣ ಪ್ರಮಾಣದ ಯುದ್ಧದಿಂದ ಎರಡೂ ದೇಶಗಳಿಗೆ ನಷ್ಟ. ಹೀಗಾಗಿ, ಯುದ್ಧದ ಸಾಧ್ಯತೆಯನ್ನು ದೂರ ಮಾಡಿ. ಕದನ ವಿರಾಮಕ್ಕೆ ಒಪ್ಪುವ ಮೂಲಕ ಎರಡೂ ದೇಶಗಳು ಒಳ್ಳೆಯ ಕೆಲಸ ಮಾಡಿವೆ.

**ಕಾಶ್ಮೀರ ವಿಚಾರವಾಗಿ ಪರಿಹಾರವೊಂದನ್ನು ಕಂಡುಕೊಳ್ಳಲು ಸಾಧ್ಯವೇ ಎಂಬ ಬಗ್ಗೆ ಎರಡೂ ದೇಶಗಳ ಜೊತೆಗೂಡಿ ಕೆಲಸ ಮಾಡುವುದಾಗಿಯೂ ಟ್ರಂಪ್ ಹೇಳಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ವಿಚಾರಗಳಲ್ಲಿ ಮೂರನೆಯ ದೇಶದ ಮಧ್ಯಸ್ಥಿಕೆಗೆ ಅವಕಾಶ ಇಲ್ಲ ಎಂಬ ನಿಲುವನ್ನು ಭಾರತವು ಹಿಂದಿನಿಂದಲೂ ತಾಳಿದೆ. ಶಿಮ್ಲಾ ಒಪ್ಪಂದ ಕೂಡ ಇದನ್ನೇ ಹೇಳುತ್ತದೆ. ಪ್ರಸ್ತುತ ಕದನ ವಿರಾಮವು ಸಾಧ್ಯವಾಗಿದ್ದು ಹೇಗೆ ಎಂಬ ಬಗ್ಗೆ ಕೇಂದ್ರ ಸರ್ಕಾರವು ಮಾಹಿತಿ ಒದಗಿಸಬೇಕು. ಕದನ ವಿರಾಮದ ಬಗ್ಗೆ ಮತ್ತು ಇತರ ದ್ವಿಪಕ್ಷೀಯ ವಿಷಯಗಳ ಬಗ್ಗೆ ಅಮೆರಿಕದ ನಾಯಕರು ನೀಡಿರುವ ಹೇಳಿಕೆಗಳ ಕುರಿತಾಗಿ ಕೇಂದ್ರವು ಸ್ಪಷ್ಟನೆ ನೀಡಬೇಕು.**

ಮಿಲಿಟರಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವ ವಿಚಾರವಾಗಿ ಪಾಕಿಸ್ತಾನದ ಜೊತೆ ಒಪ್ಪಂದ ವೊಂದಕ್ಕೆ ಬರಲಾಗಿದೆ. ಪಹಲ್ಗಾಮ್ ದಾಳಿಯ ನಂತರದಲ್ಲಿ ಪಾಕಿಸ್ತಾನವನ್ನು ಗುರಿಯಾಗಿಸಿಕೊಂಡು ಕೈಗೊಂಡಿರುವ ರಾಜತಾಂತ್ರಿಕ ಕ್ರಮಗಳ ಮೇಲೆ ಈ ಒಪ್ಪಂದವು ಪರಿಣಾಮ ಉಂಟುಮಾಡುವುದಿಲ್ಲ ಎಂದು ಭಾರತ ಹೇಳಿದೆ. ಕದನ ವಿರಾಮ ಹಾಗೂ ಅದು ಜಾರಿಗೆ ಬಂದ ನಂತರದ ಸ್ಥಿತಿಯ ಬಗ್ಗೆ ಕೇಂದ್ರ ಸರ್ಕಾರವು ಭಾನುವಾರ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಬಿಕ್ಕಟ್ಟಿಗೆ ದೀರ್ಘ ಇತಿಹಾಸ ಇದೆ.

ಹಾಗೆಯೇ, ಪ್ರಚೋದನಾತ್ಮಕ ದಾಳಿಗಳನ್ನು ನಡೆಸುವ ಚಾಳಿಯನ್ನು ಪಾಕಿಸ್ತಾನ ಹೊಂದಿದೆ. ಇವುಗಳನ್ನು ಗಮನಿಸಿದಾಗ ಈಗಿನ ಕದನ ವಿರಾಮವು ದುರ್ಬಲ ಎಂದು ಅನ್ನಿಸಬಹುದು. ಅದರೂ ಈ ವಿರಾಮಕ್ಕೆ ಸದ್ಯಕ್ಕೆ ಭಂಗ ಎದುರಾಗಲಿಕ್ಕಿಲ್ಲ ಎಂಬ ಆಶಾಭಾವನೆಯೂ ಇದೆ.

ಭಾರತದ ಮೇಲೆ ಇನ್ನೊಂದು ಬಾರಿ ಭಯೋತ್ಪಾದಕ ದಾಳಿ ನಡೆದಿದ್ದೇ ಆದಲ್ಲಿ ಅದನ್ನು ಯುದ್ಧಕ್ಕೆ ಸಮನಾದ ಕೃತ್ಯವೆಂದು ಪರಿಗಣಿಸಲಾಗುತ್ತದೆ ಎಂಬುದನ್ನು ಕೇಂದ್ರ ಸರ್ಕಾರವು ಸ್ಪಷ್ಟಪಡಿಸಿದೆ. ಶಾಂತಿಯನ್ನು ಸ್ಥಾಪಿಸುವ ಹೊಣೆಯು ಪಾಕಿಸ್ತಾನದ ಮೇಲಿದೆ ಎಂಬುದನ್ನೂ ಅದು ಹೇಳಿದೆ.

ಪರಿಸ್ಥಿತಿ ತಿಳಿಗೊಂಡಿದೆ. ಆದರೆ ಪರಿಸ್ಥಿತಿ ತಿಳಿಗೊಂಡಿದ್ದರ ಹಿಂದಿನ ಪ್ರಕ್ರಿಯೆ ಹಾಗೂ ಕೆಲವು ವಿಚಾರಗಳ ಬಗ್ಗೆ ಸ್ಪಷ್ಟತೆ ಬೇಕಿದೆ. ಎರಡೂ ದೇಶಗಳ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರ (ಡಿಜಿಎಂಒ) ನಡುವಿನ ದ್ವಿಪಕ್ಷೀಯ ಮಾತುಕತೆಯ ಮೂಲಕ ಕದನ ವಿರಾಮ ಒಪ್ಪಂದಕ್ಕೆ ಬರಲಾಯಿತು ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಸಂಘರ್ಷವನ್ನು ನಿಲ್ಲಿಸಿ, ಕದನ ವಿರಾಮಕ್ಕೆ ಒಪ್ಪಿಕೊಳ್ಳು ವಂತೆ ಎರಡೂ ದೇಶಗಳ ಮೇಲೆ ಅಮೆರಿಕದ ಒತ್ತಡ ಇತ್ತು ಎಂಬುದನ್ನು ಸಂದರ್ಭವು ಹೇಳುತ್ತಿದೆ. ಕದನ ವಿರಾಮದ ಘೋಷಣೆಯನ್ನು ಮೊದಲು ಮಾಡಿದ್ದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಈ ಕದನ ವಿರಾಮವು ಅಮೆರಿಕದ ಮಧ್ಯಸ್ಥಿಕೆಯಲ್ಲಿ ಮೂಡಿದೆ ಎಂದು ಅಲ್ಲಿನ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ. ಅಲ್ಲದೆ, ಅಮೆರಿಕದ ವಿದೇಶಾಂಗ ವ್ಯವಹಾರಗಳ ಸಚಿವ ಮಾರ್ಕೊ ರುಬಿಯೊ ಅವರು, ಎರಡೂ ದೇಶಗಳು ಹಲವು ವಿಚಾರಗಳ ಬಗ್ಗೆ ತಟಸ್ಥ ಸ್ಥಳವೊಂದರಲ್ಲಿ ಮಾತುಕತೆ ನಡೆಸಲು ಒಪ್ಪಿವೆ ಎಂದು ಹೇಳಿದ್ದಾರೆ.



# ರಾಮಾಯಣ

ಚಿತ್ರಕೂಟದಲ್ಲಿ ಶ್ರೀ ರಾಮನ ನಿವಾಸ

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಶ್ರೀರಾಮನು ಲಕ್ಷ್ಮಣನನ್ನು ಕುರಿತು ಲಕ್ಷ್ಮಣ, ನೀನು ಸೀತೆಯ ಮುಂದೆ ನಡೆ ; ನಾನು ಹಿಂದೆ ಬರುತ್ತೇನೆ. ಮಾರ್ಗದಲ್ಲಿ ದೃಷ್ಟಿಗೋಚರವಾದ ಫಲಪುಷ್ಪಗಳನ್ನು ಕಂಡು ಸೀತಾದೇವಿಯು ಬಯಸಿದರೆ ಆ ಫಲಪುಷ್ಪಗಳನ್ನು ಕೊಯಿದುಕೊಡು ಎಂದು ನುಡಿದು ಸೀತಾದೇವಿಯನ್ನು ಮಧ್ಯದಲ್ಲಿ ನಡೆಯಿಸಿಕೊಂಡು ಹೋಗುತ್ತಿದ್ದನು.

ಆ ಸಮಯದಲ್ಲಿ ರಾಮಲಕ್ಷ್ಮಣರಿಬ್ಬರ ಮಧ್ಯದಲ್ಲಿ ನಡೆದುಹೋಗುತ್ತಿದ್ದ ಸೀತಾದೇವಿಯು ಎರಡು ಗಂಡಾನೆಗಳ ನಡುವೆ ಸಂಚರಿಸುವ ಹೆಣ್ಣಾನೆಯ ರೀತಿಯಲ್ಲಿ ಒಪ್ಪುತ್ತಿದ್ದಳು. ಆ ದೇವಿಯು ಮಾರ್ಗದ ಎಡ ಬಲಗಳಲ್ಲಿ ಪುಷ್ಪಿತಗಳಾದ ಮರಗಳನ್ನೂ ಲತೆಗಳನ್ನೂ ಕಿರುಗಿಡಗಳನ್ನೂ ನೋಡಿ ಯಾವಾಗಲೂ ನೋಡದಿದ್ದ ಪುಷ್ಪಗಳನ್ನು ಲಕ್ಷ್ಮಣನಿಂದ ತರಿಸಿಕೊಂಡು ಅತ್ಯಂತ ಮನೋಹರವಾದ ಮಳಲೊಟ್ಟುಗಳಿಂದಲೂ ಹಂಸಸಾರಸ ಪಕ್ಷಿಗಳ ಧ್ವನಿಗಳಿಂದಲೂ ರಮಣೀಯವಾದ ಕಾಳಿಂದೀತೀರವನ್ನು ನೋಡುತ್ತ ಬರುತ್ತಿದ್ದಳು. ರಾಮಲಕ್ಷ್ಮಣರು ಮುಂದೆ ಒಂದು ಹರದಾರಿ ನಡೆದು ಭಕ್ಷಣಕ್ಕೆ ಯೋಗ್ಯವಾಗಿ ಪವಿತ್ರವಾದ ಮೃಗಗಳನ್ನು ಕೊಂದು ಮನೋಹರವಾದ ಯಮುನಾತೀರದಲ್ಲಿ ಸಂತೋಷದಿಂದ ರಾತ್ರಿಯನ್ನು ಕಳೆದರುಂ

## ಚಿತ್ರಕೂಟದಲ್ಲಿ ಶ್ರೀ ರಾಮನ ನಿವಾಸ

ಮಾರನೆಯದಿವಸ ಪ್ರಾತಃಕಾಲದಲ್ಲಿ ಶ್ರೀರಾಮನು ಪಕ್ಷಿಗಳ ಧ್ವನಿಗಳನ್ನು ಕೇಳಿ ಲಕ್ಷ್ಮಣನನ್ನು ಎಬ್ಬಿಸಿ ಈಗ ಪ್ರಯಾಣವಾಗಿ ಹೋಗುವ ಸಮಯವೆಂದು ನುಡಿದನು. ಅನಂತರ ಆ ನದಿಯಲ್ಲಿ ಸ್ನಾನಮಾಡಿ ದಾರಿಯ ಬಳಲಿಕೆ ಯನ್ನೆಣಿಸದೆ ಭರದ್ವಾ ಜಮುನೀಶ್ವರನು ಹೇಳಿದ ಚಿತ್ರಕೂಟಪರ್ವತದ ಮಾರ್ಗವನ್ನು ಹಿಡಿದು ಸೀತಾಲಕ್ಷ್ಮಣಸಮೇತನಾಗಿ ಹೊರಟು ದಾರಿಯಲ್ಲಿ ಕಮಲಾಕ್ಷಿಯಾದ ಸೀತಾ**ದೇವಿಯನ್ನು ಕುರಿತು ನುಡಿದನು:** ವೈದೇಹಿ, ವಸಂತಕಾಲದಲ್ಲಿ ಪುಷ್ಪಿತವಾದ ಮುಳ್ಳುಮುತ್ತುಗದ ಮರಗಳ ಸಮೂಹವು ಪ್ರಜ್ವಲಿಸುವ ಅಗ್ನಿಯಂತೆ ಮನೋಹರವಾಗಿರುವುದನ್ನು ನೋಡು. ಫಲಗಳಿಂದ ಪರಿಪೂರ್ಣವಾದ ಗೇರುಮರಗಳೂ ಬೆಲ್ಲವತ್ತದ ಮರಗಳೂ ಎಷ್ಟು ನೋಡಿದರೂ ಮನದಣಿಯದಂತಿವೆ. ಪ್ರತಿಯೊಂದು ಮರದ ಒಂದೊಂದು ಕೊಂಬೆಯಲ್ಲಿಯೂ ದೊಡ್ಡ ಕೊಳಗಳ ಹಾಗೆ ಜೇನುಹುಳುಗಳು ಗೂಡುಗಳನ್ನು ಕಟ್ಟಿವೆ. ಕೋಗಿಲೆಗಳು ಸ್ವರಗೈಯುತ್ತಿರಲು ನವಿಲುಗಳು ನರ್ತನಮಾಡುತ್ತಿವೆ. ಮನೋಹರವಾದ ಈ ವನಮಧ್ಯದಲ್ಲಿ ಹೂವು ಕಾಯಿಗಳಿಂದಿಟ್ಟಣಿಸಿದ ಮನೋಹರವಾದ ವೃಕ್ಷಗಳಿವೆ. ಎಲ್ಲಿನೋಡಿದರೂ ನಾನಾವಿಧವಾದ ಪಕ್ಷಿಗಳು ಸ್ವರಗೈಯುತ್ತಿವೆ. ಮದಿಸಿದ ಕಾಡಾನೆಗಳು ಸಂಚರಿಸುತ್ತಿವೆ. ಇಗೋ, ಚಿತ್ರಕೂಟಪರ್ವತದ ಶಿಖರಗಳು ಆಕಾಶವನ್ನು ತುಡುಕುತ್ತಿವೆ. ಈ ಪರ್ವತದಲ್ಲಿ ಸಮಕಟ್ಟಾದ ಸ್ಥಳದಲ್ಲಿ ಸುಖವಾಗಿರೋಣ. ಹೀಗೆ ಹೇಳಿ ಅನಂತರ ಮನೋಹರವಾದ ಚಿತ್ರಕೂಟಪರ್ವತವನ್ನೈದಿ ಎಲ್ಲಿನೋಡಿದರೂ ಗೆಡ್ಡೆಗೆಣಸು ಹಣ್ಣುಹಂಪಲುಗಳು ಪರಿಪೂರ್ಣವಾಗಿರುವುದನ್ನು ಕಂಡು ಎಲ್ಲೆ ಲಕ್ಷ್ಮಣ, ಈ ಪರ್ವತವು ರಮಣೀಯವಾಗಿದೆ.

**ಮುಂದುವರಿಯುವುದು...**

# ಶ್ರೀಮಂತಿಕೆ ಗಿಂತ ಹೃದಯ ವಂತಿಕೆ ಮೇಲು



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಮನೆಸುತ್ತ ಕಾಂಪೌಂಡು, ಗೇಟು ಭದ್ರ, ಒಳಗಿರುವ ಮನಸುಗಳೇ ಏಕೋ ಛಿದ್ರ, ಛಿದ್ರ...! ಬಂಧುಗಳೇ ಬಾರದ, ಸ್ನೇಹಿತರೂ ಸೇರದ ಮನೆಗಳ ಮುಂದೆ ಸದಾ ಕಾವಲುಗಾರ...! ಇಂದು ಮನೆಯಲ್ಲಿ ಅನ್ನವೇ ಬೇಯುತ್ತಿಲ್ಲ, ಮನಸುಗಳು ಮಾತ್ರ ಕುದಿಯುತ್ತಿವೆಯಲ್ಲ...! ಅಡುಗೆ ಮನೆ, ಸದಾ ಖಾಲಿ ಖಾಲಿ ಇರುತ್ತೆ. ಫೋನಿಂದ ಕೂತಲ್ಲಿಗೆ ಊಟ ತಿಂಡಿ ಬರುತ್ತೆ...!

ಮನೆಗಳಾಗುತ್ತಿವೆ ಮಹಡಿಗಳಿಂದ ಎತ್ತರ... ಎತ್ತರ... ಮನಸ್ಸುಗಳೇ ಆಗುತ್ತಿಲ್ಲ ಹತ್ತಿರ...ಹತ್ತಿರ...! ಸಂತೋಷ ಏನೆಂಬುದಕ್ಕೆ ಸಿಗುತ್ತಿಲ್ಲ ಉತ್ತರ...! ಅಂದು...ಬಿಸಿಲು, ಮಳೆ, ಚಳಿಗೆ ಮೈ ಒಗ್ಗಿತ್ತು, ಮನೆ ತಣ್ಣಗಿತ್ತು. ಒಲೆ ಹೊಗೆಯಾಡುತ್ತಿತ್ತು. ಬಿಸಿನೀರ ಹಂಡೆ ಹಬೆಯಾಡುತ್ತಿತ್ತು...! ಕಣಜದ ತುಂಬಾ... ದವಸ ಧಾನ್ಯ ತುಂಬಿತ್ತು. ಬಂಧುಬಳಗದ ನಡುವೆ ಅನುಬಂಧವಿತ್ತು ಎಲ್ಲರೊಟ್ಟಿಗೆ ಮನೆಯೂ ನಗೆಯಾಡುತಿತ್ತು...! ಮನೆ ಚಿಕ್ಕದಾದ್ರೂ, ಮನಸು ಚೊಕ್ಕವಾಗಿತ್ತು...! ಅಂದು ನನ್ನಜ್ಜ ಕಟ್ಟಿದ ಮನೆಯಲ್ಲಿ...ನಲಿವಿತ್ತು, ಒಲವಿತ್ತು, ಸಂತಸದ ಸೆಲೆಯಿತ್ತು...!

ಮುಖ್ಯ ಬಾಗಿಲು ಚಿಕ್ಕದಿತ್ತು, ತಲೆಬಾಗಬೇಕಿತ್ತು. ಮಣ್ಣಿನ ಗೋಡೆ, ಸಾರಿಸಿದ ನೆಲವಿತ್ತು ಮಾಡು ಚಿಕ್ಕದಿತ್ತು, ಬದುಕು ದೊಡ್ಡದಿತ್ತು. ನೋವುಗಳಿದ್ದರೂ ಬದುಕಿಗೆ ಬೆಲೆಯಿತ್ತು. ಚಾಪೆಯಲಿ ಕಣ್ಣಿಗೆ ಚೆಂದದ ನಿದ್ರೆಯಿತ್ತು...!

ಅಂದು ಆಸ್ಪತ್ರೆಯ ಹಂಗೇ ಇರಲಿಲ್ಲ. ಎಲ್ಲಾ ಸಮಸ್ಯೆಗಳಿಗೂ ಮನೆಯಲ್ಲೇ ಮದ್ದಿತ್ತು.ಮಗುವೂ ಕೂಡ ಮನೆಯಲ್ಲೇ ಹುಟ್ಟುತ್ತಿತ್ತು.

ಮದುವೆ ಕೂಡ ಮನೆಯಲ್ಲೇ ನೆಡೆಯುತ್ತಿತ್ತು... ಚಿತ್ರ ವಿಚಿತ್ರದ ಛತ್ರವೇ ಬೇಕಿರಲಿಲ್ಲ...!

ಕೆಲಸಕ್ಕೆ ಶ್ರದ್ಧೆ, ದೇವರ ಮೇಲೆ ನಂಬಿಕೆಯಿತ್ತು...! ಸಾವಿಗೂ ಸಹ ಮನೆಯೇ ಸಾಕ್ಷಿಯಾಗುತ್ತಿತ್ತು...!

ಹಲವು ಮಕ್ಕಳು ಹುಟ್ಟಿದ ಸಂತಸವಿತ್ತು.ಅವರ ಬಾಲ್ಯದ, ಬದುಕಿನ ಸಂಭ್ರಮವಿತ್ತು....!

ನೆಂಟರು ಬಂದರೆ, ಹಬ್ಬದ ಸಡಗರವಿತ್ತು. ಕೆಲವು ಸಾವುಗಳ ಸೂತಕವೂ ಇತ್ತು. ಸತ್ತ ಹಿರಿಯರ ನೆನಪು ಅಚ್ಚಳಿಯದೇ ಉಳಿದಿತ್ತು...! ಕಷ್ಟಗಳ ಗೆದ್ದ ಗೆಲುವಿನ ದ್ಯೋತಕ ವೂ ಇತ್ತು...! ಬದುಕಿನ ಸಾಧಕ ಭಾದಕಗಳೆಲ್ಲವೂ ಇತ್ತು...! ಇಂದು...? ಮನೆ ರಾಜನಿಲ್ಲದ ಅರಮನೆಯಂತೆ, ಸಕಲ ಸವಲತ್ತುಗಳಿರುವ ದರ್ಬಾರಿನಂತೆ,ನೆರೆ ಮನೆಯ ಹಂಗಿಲ್ಲದ ಸೆರೆಮನೆಯಂತೆ. ಆದ್ರೂ, ಮನೆಮಂದಿಗೆಲ್ಲ ಬಹಳ ದುಡ್ಡಿನದೇ ಚಿಂತೆ ಚಿಂತೆ..! ಬೇಕಾಗಿದ್ದಕ್ಕಿಂತ, ಬೇಕೆನಿಸಿದ್ದೇ ತುಂಬಿದೆ, ದೊಡ್ಡದಿದೆ, ಶ್ರೀಮಂತವಾಗಿದೆ, ಸಜ್ಜಾಗಿದೆ.

ಮನಸುಗಳು ಮಾತ್ರ ನಜ್ಜುಗುಜ್ಜಾಗಿವೆ...! ಶುಭ ಕಾರ್ಯಗಳು, ಸಂತೋಷ ಕೂಟಗಳು, ಮನೆಬಿಟ್ಟು, ಹೋಟೆಲ್ಲುಗಳ ಸೇರಿಕೊಂಡಿವೆ. ಬಂಧುತ್ವ ಮಿತ್ರತ್ವಗಳು ಬಂಧನದಲ್ಲಿವೆ...! ನೆಂಟರಿಷ್ಟರು ಮನೆಗೆ ಬಂದರೆ, ಬರೀ ನಕ್ಕೂ ನಗದೇ... ಕೋಣೆ ಸೇರಿಕೊಳ್ಳುತ್ತಿದ್ದಾರೆ ಮನೆ ಮಕ್ಕಳು. ಸ್ನೇಹ,ಸಂಬಂಧಗಳಲ್ಲೂ ತೋರಿಕೆ, ತಾತ್ಸಾರ, ನಂಬಿಕೆ ಒಗ್ಗಟ್ಟುಗಳಂತೂ ಬಹಳವೇ ದೂರ...!

ಮತ್ತೆ ಬರಲಿ ಆ ತುಂಬು ಕುಟುಂಬದ ಕಾಲ. ಆಗಲಿ ಮನೆ ಮನಗಳೂ ನಂದಗೋಕುಲ...! ಅರ್ಥವಾಗಲಿ ಸರ್ವರಿಗೂ ಸಂಬಂಧದ ಬೆಲೆ...! ಕಲಿಯಲಿ ಎಲ್ಲರು ಸಂತಸದಿ, ಒಟ್ಟಾಗಿ ನಗುವ ಕಲೆ...!

ಆಗಲಿ ದ್ವೇಷ ಸ್ವಾರ್ಥ ಮತ್ಸರಗಳಿಗೆ ಸೋಲು. ಶ್ರೀಮಂತಿಕೆ ಗಿಂತ ಹೃದಯ ವಂತಿಕೆ ಮೇಲು...!

# ಶೇಂಗಾ ಮಿಠಾಯಿ ಚಿಕ್ಕಿ ಮನೆಯಲ್ಲೇ ಮಾಡಿ ನೋಡಿ!

ಅಂಗಡಿಗಳಲ್ಲಿ ಸಿಗುವಂತಹ ಹಲವು ರೀತಿಯ ತಿಂಡಿಗಳ ಸವಿಯುವುದು ಅಂದ್ರೆ, ನಿಮಗೂ ಇಷ್ಟವಾಗಿರಬಹುದು. ಹಾಗೆ ಹಲವು ಖಾದ್ಯಗಳನ್ನು ಮನೆಯಲ್ಲೂ ಮಾಡಿ ಸವಿಯಲು ಮುಂದಾಗುವುದು ನೋಡಬಹುದು.

ಅದರಲ್ಲೂ ಸಿಹಿ ತಿಂಡಿಗಳನ್ನು ಮನೆಯಲ್ಲೂ ಮಾಡಿ ಸವಿಯುವುದು ನೋಡಬಹುದು. ಅದರಲ್ಲು ಕೆಲವೊಂದು ತಿಂಡಿಯ ಹೆಸರು ಕೇಳಿದರೆ ಸಾಕು ಬಾಯಲ್ಲಿ ನೀರು ಬರುತ್ತದೆ. ಹಾಗೆ ಇಂತಹ ನೀರೂರಿಸುವ ತಿಂಡಿಗಳಲ್ಲಿ ಶೇಂಗಾ ಮಿಠಾಯಿ ಚಿಕ್ಕಿ ಕೂಡ ಒಂದು. ನೀವು ಸಹ ಚಿಕ್ಕವರಿರುವಾಗ ಈ ಚಿಕ್ಕಿಗಳ ಸವಿದಿರುತ್ತೀರಿ. ಅಂಗಡಿಗಳಲ್ಲಿ ಸಿಗುತ್ತಿದ್ದ ಈ ಚಿಕ್ಕಿಗಳು ಬಹಳ ರುಚಿಕರವಾಗಿ ಹಾಗೆ ಆರೋಗ್ಯಕ್ಕೆ ಉತ್ತಮವಾದ ತಿಂಡಿಯಾಗಿದ್ದವು. ಹಾಗೆ ಇದನ್ನು ಮಕ್ಕಳೂ ಬಹಳ ಇಷ್ಟಪಟ್ಟು ಸವಿಯುತ್ತಾರೆ. ಏಕೆಂದರೆ ಇದರ ಸಿಹಿ ಮಕ್ಕಳಿಗೆ ಬಹಳ ಇಷ್ಟವಾಗುತ್ತೆ. ಇನ್ನು ಈ ಶೇಂಗಾ ಚಿಕ್ಕಿ ಮಾಡುವುದು ಬಹಳ ಸುಲಭ. ಹಾಗೆ ಕಡಿಮೆ ವಸ್ತುಗಳ ಬಳಸಿಕೊಂಡು ಮಾಡಬಹುದು. ಹೀಗಾಗಿ ಈ ಬೇಸಿಗೆ ರಜೆಯ ಸಮಯದಲ್ಲಿ ನಾವು ರುಚಿ ರುಚಿಯ ಈ ಶೇಂಗಾ ಚಿಕ್ಕಿ ಮಾಡುವ ಕುರಿತಾಗಿ ತಿಳಿದುಕೊಳ್ಳೋಣ. ಶೇಂಗಾ ಮಿಠಾಯಿ ಚಿಕ್ಕಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು? ಮಾಡುವ ವಿಧಾನ ವೇನು? ಎಷ್ಟು ಸಮಯ ಹಿಡಿಯಲಿದೆ ಎಂಬುದನ್ನು ತಿಳಿದುಕೊಳ್ಳೋಣ.




ಶೇಂಗಾ ಮಿಠಾಯಿ ಚಿಕ್ಕಿ ಮಾಡಲು ಬೇಕಾಗುವ ಪದಾರ್ಥಗಳು

**ನೆಲಗಡಲೆ** - 250 **ಗ್ರಾಂ**
**ಸಕ್ಕರೆ** - 250 **ಗ್ರಾಂ**
**ತುಪ್ಪ** - 2 **ಚಮಚ**

ಶೇಂಗಾ ಮಿಠಾಯಿ ಚಿಕ್ಕಿ ಮಾಡುವುದು ಹೇಗೆ?

ಮೊದಲಿಗೆ ಒಲೆ ಮೇಲೆ ಬಾಣಲೆ ಇಟ್ಟು ಶೇಂಗಾ ಬೀಜ ಹಾಕಿಕೊಂಡು ಹುರಿದುಕೊಳ್ಳಿ. ಸಣ್ಣ ಉರಿಯಲ್ಲಿ ಉರಿದುಕೊಂಡು ಪ್ಲೇಟ್‌ಗೆ ಹಾಕಿ ತಣ್ಣಗಾಗಲು ಬಿಡಿ. ತಣ್ಣಗಾದ ಬಳಿಕ ಸಿಪ್ಪೆ ತೆಗೆದುಕೊಳ್ಳಬೇಕು. ನಂತರ ಮಿಕ್ಸಿ ಜಾರ್‌ಗೆ ಹಾಕಿಕೊಂಡು ರುಬ್ಬಿಕೊಳ್ಳಿ. ತರಿ ತರಿಯಾಗಿ ಬೀಜಗಳು ಕಾಣಿಸುವಂತೆಯೇ ಪುಡಿ ಮಾಡಿ. ಈಗ ಲಟ್ಟಣಿಗೆ ಹಾಗೆ ಒತ್ತು ಮಣೆಗೆ ತುಪ್ಪ ಹಚ್ಚಿಕೊಂಡು ಇಟ್ಟುಕೊಳ್ಳಿ. ಈಗ ಮತ್ತೆ ಒಲೆ ಮೇಲೆ ಬಾಣಲೆ ಇಟ್ಟು ಚಮಚದಲ್ಲಿ ತುಪ್ಪ ಹಾಕಿ ನಂತರ ಸಕ್ಕರೆ ಹಾಕಿ ಮಿಕ್ಸ್ ಮಾಡುತ್ತಾ ಕರಗಲು ಬಿಡಿ. ನೀರು ಹಾಕಿಕೊಳ್ಳದೆ ಚೆನ್ನಾಗಿ ಮಿಕ್ಸ್ ಮಾಡುತ್ತಾ ಪಾಕ ಮಾಡಿ. ಸಕ್ಕರೆ ಕರಗಿದ ಬಳಿಕ ಸಕ್ಕರೆ ಕರಗಿ ಜೇನು ತುಪ್ಪದಂತೆ ಆಗಬೇಕು. ಸಕ್ಕರೆ ಕರಗಿದ ಬಳಿಕ ಈಗ ಪುಡಿ ಮಾಡಿಕೊಂಡ ಶೇಂಗಾ ಪುಡಿಯನ್ನು ಇದಕ್ಕೆ ಹಾಕಿ ಮಿಕ್ಸ್ ಮಾಡಿಕೊಳ್ಳಬೇಕು. ತಕ್ಷಣ ಒಲೆ ಆಫ್ ಮಾಡಿಕೊಂಡು ತುಪ್ಪ ಹಚ್ಚಿಕೊಂಡಿರುವ ಒತ್ತು ಮಣೆಯ ಮೇಲೆ ಹಾಕಿಕೊಂಡು ಲಟ್ಟಣಿಗೆಯಿಂದ ಒತ್ತಿಕೊಳ್ಳಬೇಕು. ಅದು ತಣ್ಣಗಾಗಲು ಬಿಡಬೇಡಿ. ಇದು ಗಟ್ಟಿಯಾಗಿಬಿಡುತ್ತದೆ. ಲಟ್ಟಿಸಿಕೊಂಡ ಬಳಿಕ ಚಾಕುವಿನಿಂದ ಯಾವ ಗಾತ್ರಕ್ಕೆ ಬೇಕೋ ಆ ಗಾತ್ರಕ್ಕೆ ಕತ್ತರಿಸಿಕೊಳ್ಳಿ. ನಂತರ ತಣ್ಣಗಾಗಲು ಬಿಡಿ. ಇಷ್ಟಾದರೆ ನಿಮ್ಮ ಮುಂದೆ ಅಂಗಡಿಯಲ್ಲಿ ಸಿಗುವಂತಹ ಶೇಂಗಾ ಮಿಠಾಯಿ ಚಿಕ್ಕಿ ರೆಡಿಯಾಗುತ್ತೆ. ನೀವು ಸಹ ಮಾಡಿ ನೋಡಿ ಅದರ ರುಚಿಗೆ ನೀವು ಪದೇ ಪದೇ ಮಾಡುತ್ತೀರಿ.

# ಶ್ರೀಸತ್ಯನಾರಾಯಣ ವ್ರತ ಪೂಜೆ





• ಉದಯವಾಹಿನಿ ಬೆಂಗಳೂರು

ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರ ಆದೇಶದಂತೆ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ಮಾರ್ಗದರ್ಶನದಲ್ಲಿ ಪೌರ್ಣಮಿ ಪ್ರಯುಕ್ತ ಸಾಮೂಹಿಕ ಶ್ರೀ ಸತ್ಯನಾರಾಯಣಸ್ವಾಮಿಯ ವ್ರತ ಪೂಜೆಯು ಪುರೋಹಿತರಾದ ಶ್ರೀ ನಂದಕಿಶೋರಾಚಾರ್ಯರು ಹಾಗೂ ಕಟ್ಟಿ ರಾಘವೇಂದ್ರ ಆಚಾರ್ಯರು ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಿ ನೆರವೇರಿಸಿದರು. ಈ ಸಂದರ್ಭದಲ್ಲಿ ಭಕ್ತರು ಮತ್ತು ಸೇವಾ ಕರ್ತೃಗಳು ಸಂಕಲ್ಪವನ್ನು ಮಾಡಿ ವ್ರತ ಪೂಜೆಯಲ್ಲಿ ಭಾಗವಹಿಸಿ ಪ್ರಾರ್ಥನೆ ಸಲ್ಲಿಸಿ ಪ್ರಸಾದ ಸ್ವೀಕರಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.

# ಮಹಿಳೆಯರಲ್ಲಿ ಕಿಡ್ನಿಗಳು ಸರಿಯಾಗಿ ಕೆಲಸ ಮಾಡದಿದ್ದರೆ

ದೇಹದ ಹೊರಗಿನ ಅಂಗಾಂಗಗಳ ಬಗ್ಗೆ ನಮಗೆ ಇರುವ ಕಾಳಜಿಯು ದೇಹದ ಒಳಗಿನ ಅಂಗಗಳ ಬಗ್ಗೆ ಇರಲ್ಲ ಮುಖ್ಯವಾಗಿ ಕಿಡ್ನಿಯಲ್ಲಿ ಏನಾದರೂ ಸಮಸ್ಯೆಗಳು ಬಂದರೆ ಮಾತ್ರ ನಾವು ಜಾಗೃತರಾಗುತ್ತೇವೆ. ಯಾಕೆಂದ್ರೆ, ಹೆಚ್ಚಿನ ಮಹಿಳೆಯರು ಯಾವುದೇ ರೋಗದ ಆರಂಭಿಕ ಲಕ್ಷಣಗಳನ್ನು ನಿರ್ಲಕ್ಷ್ಯ ಮಾಡುತ್ತಾ ಬರುತ್ತಾರೆ, ಕೊನೆಗೆ ಇದೇ ಕಾರಣಕ್ಕೆ ರೋಗವು ಗಂಭೀರ ಸ್ವರೂಪವನ್ನು ಪಡೆಯುತ್ತದೆ.



ಇದಕ್ಕೆ ಕಿಡ್ನಿಗಳ ಸಮಸ್ಯೆಯೂ ಕೂಡ ಹೊರತಲ್ಲ ನಾವು ಈ ಹಿಂದಿನ ಲೇಖನದಲ್ಲಿ ಹಲವಾರು ಬಾರಿ ಹೇಳಿದಂತೆ, ಮನುಷ್ಯನ ದೇಹದಲ್ಲಿ ಕಂಡು ಬರುವ ಬಹು ಮುಖ್ಯ ಅಂಗಾಂಗಗಳಲ್ಲಿ ಕಿಡ್ನಿಗಳು ಅಥವಾ ಮೂತ್ರ ಪಿಂಡಗಳು ಕೂಡ ಒಂದು. ಇದರ ಪ್ರಮುಖ ಕಾರ್ಯ ಏನೆಂದ್ರೆ, ದೇಹದಲ್ಲಿ ಕಂಡು ಬರುವ ವಿಷಕಾರಿ ಅಂಶಗಳನ್ನು ಮೂತ್ರ ವಿಸರ್ಜನೆಯ ಮೂಲಕ ಹೊರ ಹಾಕುವ ಕೆಲಸ ಇರುತ್ತದೆ. ಒಂದು ವೇಳೆ ಈ ಪ್ರಕ್ರಿಯೆಯು ಸರಿಯಾಗಿ ನಡೆಯದೇ ಹೋದರೆ, ದೇಹದಲ್ಲಿ ವಿಷಕಾರಿ ಅಂಶಗಳು ಹೊರ ಹೋಗದೆ ಹಾಗೆ

**ಈ ರೀತಿಯಾಗಿ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ!**



ಶೇಖರಣೆಗೊಂಡು, ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿ ಬಿಡುತ್ತದೆ, ಜೊತೆಗೆ ಕಿಡ್ನಿಗಳು ಕೂಡ ಪರ್ಮನೆಂಟಾಗಿ ತಮ್ಮ ಕಾರ್ಯವನ್ನು ನಿಲ್ಲಿಸಿಬಿಡುತ್ತದೆ ಹೀಗಾಗಿ ಮೂತ್ರಪಿಂಡಗಳ ಅಥವಾ ಕಿಡ್ನಿಗಳಲ್ಲಿ ಸಮಸ್ಯೆ ಕಂಡು ಬರಬಾರದು ಎಂದರೆ, ಮೊದಲಿಗೆ ಸಾಧ್ಯವಾದಷ್ಟು ಜೀವನಶೈಲಿಯಲ್ಲಿ ಬದಲಾವಣೆ ತಂದು ಕೊಳ್ಳಬೇಕು ಜೊತೆಗೆ ಆರೋಗ್ಯಕಾರಿ ಆಹಾರ ಪದಾರ್ಥಗಳ ಸೇವನೆ ಮಾಡಬೇಕು. ಇಂದಿನ ಲೇಖನದಲ್ಲಿ ಕಿಡ್ನಿಗಳು ಸರಿಯಾಗಿ ಕಾರ್ಯನಿರ್ವಹಣೆ ಮಾಡದೇ ಇದ್ದರೆ ಏನೆಲ್ಲಾ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ ಅದರಲ್ಲೂ ಮಹಿಳೆಯರಲ್ಲಿ ಮೂತ್ರಪಿಂಡದ ಸೋಂಕಿನ ಲಕ್ಷಣಗಳು ಹೇಗಿರುತ್ತವೆ ಎನ್ನುವುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೋಡುತ್ತಾ ಹೋಗೋಣ?

**ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ!** : ದೇಶದಲ್ಲಿ ಲಕ್ಷಾಂತರ ಜನರು ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿದ್ದಾರೆ. ಅವರಲ್ಲಿ ಹೆಚ್ಚಿನ ಸಂಖ್ಯೆಯು 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಎನ್ನುವುದು ನಿಜಕ್ಕೂ ಆತಂಕಕಾರಿ ವಿಚಾರ.

ಇನ್ನು ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿರುವ ಮಹಿಳೆ ಯರ ಸಂಖ್ಯೆಯೂ ಕಡಿಮೆಯಿಲ್ಲ. ಮಹಿಳೆಯರಿಗೆ ಮೂತ್ರಪಿಂಡದ ಸಮಸ್ಯೆಗಳಿದ್ದಾಗ, ಪುರುಷರಲ್ಲಿರುವಂತೆಯೇ ಕೆಲವು ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಎನ್ನುತ್ತಾರೆ ತಜ್ಞರು.

ಇನ್ನು ನಾವು ಈಗಾಗಲೇ ಹೇಳಿದ ಹಾಗೆ ಮೂತ್ರಪಿಂಡಗಳು ರಕ್ತದಿಂದ ವಿಷಕಾರಿ ಅಂಶಗಳನ್ನು ತೆಗೆದುಹಾಕಲು ಮತ್ತು ದೇಹದಿಂದ ಹೆಚ್ಚುವರಿ ನೀರನ್ನು ತೆಗೆದುಹಾಕಲು ಕೆಲಸ ಮಾಡುತ್ತವೆ. ದೇಹದಲ್ಲಿನ ಕೆಲವು ಬದಲಾವಣೆಗಳು ಮೂತ್ರ ಪಿಂಡಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ.

**ಮಹಿಳೆಯರಲ್ಲಿ ಗರ್ಭಧಾರಣೆಯು ಮೂತ್ರಪಿಂಡಗಳ** ಮೇಲೆ ಪರಿಣಾಮ ಬೀರಲು ಪ್ರಮುಖ ಕಾರಣವಾಗಿದೆ. ಹಾರ್ಮೋನುಗಳ ಬದಲಾವಣೆಗಳು ಹೆಚ್ಚಾಗಿ ಮೂತ್ರ ಪಿಂಡಗಳ ಮೇಲೆ ಪರಿಣಾಮ ಬೀರುತ್ತವೆ. ಇದಲ್ಲದೆ ಮಹಿಳೆಯರಲ್ಲಿ ಮೂತ್ರಪಿಂಡದ ಕಾಯಿಲೆಯ ಲಕ್ಷಣಗಳು ವಿಭಿನ್ನವಾಗಿರ ಬಹುದು. ಆರಂಭದಲ್ಲಿ ಅವು ನಿಧಾನವಾಗಿದ್ದರೂ, ಕಾಲಾನಂತರದಲ್ಲಿ ಹೆಚ್ಚಾಗುತ್ತವೆ.?

**ಮಹಿಳೆಯರಲ್ಲಿ ಕಿಡ್ನಿ ಸಮಸ್ಯೆಯ ರೋಗಲಕ್ಷಣಗಳು** ಮಹಿಳೆಯರಲ್ಲಿ ಮೂತ್ರಪಿಂಡದ ಸೋಂಕಿನ ಲಕ್ಷಣಗಳು ಪುರುಷರಿಗಿಂತ ಸ್ವಲ್ಪ ಭಿನ್ನವಾಗಿರಬಹುದು. ಸೋಂಕು ಶ್ರೋಣಿಯ ಪ್ರದೇಶದಲ್ಲಿ ನೋವನ್ನು ಉಂಟು ಮಾಡಬಹುದು ಇದು ಹೊಟ್ಟೆಯ ಕೆಳಭಾಗ ಮತ್ತು ಬೆನ್ನಿನ ಕೆಳಭಾಗದಲ್ಲಿ ಅನುಭವಿಸಬಹುದು. ಮೂತ್ರಪಿಂಡದ ಸೋಂಕು ಖಾಸಗಿ ಭಾಗದಿಂದ ಬಿಳಿ ಸ್ರಾವಕ್ಕೆ ಕಾರಣವಾಗಬಹುದು. ಸಮಯಕ್ಕೆ ಸರಿ ಯಾಗಿ ಮುಟ್ಟಾಗದಿರುವುದು ಸಹ ಇದರ ಲಕ್ಷಣವಾಗಿದೆ. ಆದರೆ ಮಹಿಳೆ ಯರಲ್ಲಿ ಈ ಲಕ್ಷಣಗಳು ಸ್ವಲ್ಪ ನಿಧಾನವಾಗಿ ಕಂಡುಬರುತ್ತವೆ.

**ಈ ಲಕ್ಷಣಗಳನ್ನುಕಡೆಗಣಿಸಬಾರದು:** ಮಹಿಳೆಯರಲ್ಲಿ ಮೂತ್ರ ವಿಸರ್ಜನೆಯ ಮಾದರಿಯಲ್ಲಿ ಬದಲಾವಣೆ, ಕೈ, ಪಾದ, ಕಣಕಾಲು ಅಥವಾ ಮುಖದಲ್ಲಿ ಊತ, ದಣಿವು ಮತ್ತು ದೌರ್ಬಲ್ಯ, ಉಸಿರಾಟದ ತೊಂದರೆ, ಅಧಿಕ ರಕ್ತದೊತ್ತಡ, ವಾಂತಿ, ಹಸಿವಿನ ಕೊರತೆ, ಚರ್ಮದ ದದ್ದುಗಳು, ಸ್ನಾಯು ಸೆಳೆತ ಮತ್ತು ನೋವು, ಕೀಲು ನೋವು ಮತ್ತು ನೆನಪಿನ ಸಮಸ್ಯೆಗಳು ಮೂತ್ರಪಿಂಡದ ಸೋಂಕಿನ ಲಕ್ಷಣಗಳಾಗಿವೆ. ಈ ಲಕ್ಷಣಗಳು ಕಾಣಿಸಿಕೊಂಡರೆ, ನೀವು ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು.

**ಈ ಸಮಸ್ಯೆಗೆ ಪರಿಹಾರಗಳೇನು?** : ಮೂತ್ರಪಿಂಡ ಅಥವಾ ಕಿಡ್ನಿ ಕಾಯಿಲೆ ಸೌಮ್ಯವಾಗಿದ್ದರೆ, ವೈದ್ಯರು ನೀಡಿರುವ ಔಷಧಿಗಳು ಸಾಕಾಗುತ್ತದೆ, ಆದರೆ ಮೂತ್ರಪಿಂಡದಲ್ಲಿ ತೀವ್ರ ರೀತಿಯಲ್ಲಿ ಸಮಸ್ಯೆ ಕಾಣಿಸಿಕೊಂಡರೆ ವೈದ್ಯರು ಆರಂಭದಲ್ಲಿ ಡಯಾಲಿಸಿಸ್ ಅನ್ನು ಶಿಫಾರಸು ಮಾಡುತ್ತಾರೆ.

# ಸಂಚಾರಿ ಕಾವೇರಿಗೆ ಉತ್ತಮ ಪ್ರತಿಕ್ರಿಯೆ

• ಉದಯವಾಹಿನಿ ಬೆಂಗಳೂರು

'ಗ್ರಾಹಕರ ಮನೆ ಬಾಗಿಲಿಗೆ ಕಡಿಮೆ ಬೆಲೆಯಲ್ಲಿ ಶುದ್ಧ ಕುಡಿಯುವ ನೀರು ಪೂರೈಸುವ 'ಸಂಚಾರ ಕಾವೇರಿ' ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಯೋಜನೆ ಆರಂಭವಾದ ಎರಡು ದಿನಗಳಲ್ಲಿ ಸಾವಿರಕ್ಕೂ ಹೆಚ್ಚು ಜನರು ಮೊಬೈಲ್ ಆಯಪ್ ಡೌನ್ ಲೋಡ್ ಮಾಡಿಕೊಂಡಿದ್ದಾರೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಟ್ಯಾಂಕರ್ ಬುಕ್ಕಿಂಗ್ ಮಾಡಿರುವ ಜನರಿಗೆ ನೀರು ಪೂರೈಕೆ ಮಾಡಲಾಗಿ




ದೆ. ಟ್ಯಾಂಕರ್‌ಗಳಿಗೆ ಆರ್‌ಎಫ್‌ಐಡಿ ಹಾಗೂ ಜಿಪಿಎಸ್ ಟ್ರ್ಯಾಕಿಂಗ್ ಅಳವಡಿಸಲಾಗಿದೆ.

ನಿಯೋಜಿತ ಟ್ಯಾಂಕರ್‌ಗಳು ಜಲ ಮಂಡಳಿಯ ನಿಗದಿತ ಕಾವೇರಿ ಸಂಪರ್ಕ ಕೇಂದ್ರಗಳಿಂದ ನೀರು ತುಂಬಿಸಿಕೊಂಡು, ಅವುಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುವುದನ್ನು ನಾಗರಿಕರು ಖಾತರಿಪಡಿಸಿ ಕೊಳ್ಳಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಐಎಸ್ ಪ್ರಮಾಣಿತ ಶುದ್ಧ ಕುಡಿಯುವ ನೀರನ್ನು ಗ್ರಾಹಕರಿಗೆ ಪೂರೈಸಲಾಗುತ್ತಿದೆ. ಸರಬರಾಜು ಆಗುವ ನೀರಿನ ಬಗ್ಗೆ ಯಾವುದೇ ಅನುಮಾನಗಳಿದ್ದಲ್ಲಿ ಪರೀಕ್ಷೆಗೆ ಜಲಮಂಡಳಿ ಸಿದ್ಧವಿದೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

# ಮಟನ್ ಲಿವರ್ ಕರಿ ಸವಿದರೆ ಪ್ರತಿ ದಿನ ಮಾಡಿ ಅದನ್ನೇ ಸವಿಯುತ್ತೀರಿ ಮಾಡೋದು ಹೇಗೆ?

ಭಾನುವಾರ ಬಂತೆಂದರೆ ಹಲವರು ನಾನ್ ವೆಜ್ ಊಟದ ಮೊರೆ ಹೋಗ್ತಾರೆ. ಕೆಲವರು ಮನೆಯಲ್ಲೇ ಮಾಂಸಹಾರ ಟ್ರೈ ಮಾಡಿದ್ರೆ ಮತ್ತೆ ಕೆಲವರು ಹೋಟೆಲ್, ರೆಸ್ಟೋರೆಂಟ್‌ನಂತಹ ಆಯ್ಕೆಗಳ ಮಾಡುತ್ತಾರೆ.

ನಾನ್ ವೆಜ್ ಪ್ರಿಯರಿಗೆ ಹತ್ತು ಹಲವು ರೆಸಿಪಿಗಳು ಭಾನುವಾರದ ರಜೆಯ ಮಜಾ ಹೆಚ್ಚಿಸುತ್ತೆ. ಇನ್ನು ಈ ರಜೆಯಲ್ಲಿ ಮಟನ್ ರೆಸಿಪಿಗಳ ಸವಿಯಲು ಇಷ್ಟಪಡುವವರು ಹೆಚ್ಚು. ಆಗಾಗ ಮಾಂಸಹಾರ ಸೇವನೆಯು ನಿಮ್ಮ ದೇಹಕ್ಕೂ ಉತ್ತಮವಾಗಿರುತ್ತದೆ. ಮಟನ್‌ನಿಂದ ಮಾಡುವಂತಹ ವಿವಿಧ ರೀತಿಯ ಖಾದ್ಯಗಳು ಎಲ್ಲರ ಮನೆ ಗೆಲ್ಲುವ ಜೊತೆಗೆ ಬಾಯಲ್ಲಿ ನೀರು ತರಿಸುತ್ತವೆ. ಅದಲ್ಲೂ ಮಟನ್ ಚಾಪ್ಸ್, ಮಟನ್ ಗ್ರೇವಿ, ಮಟನ್ ಬಿರಿಯಾನಿಗಳು ಎಲ್ಲರ ಪ್ರಿಯವಾದ ಖಾದ್ಯಗಳಲ್ಲಿ ಒಂದಾಗಿವೆ. ಹಾಗೆ ಎಲ್ಲರಿಗೂ ಈ ಖಾದ್ಯ ಸವಿಯುವುದು ಅಂದರೆ ಇಷ್ಟವಾಗುತ್ತೆ. ನಾವಿಂದು ಮಟನ್ ಲಿವರ್ ಕರಿ ಕುರಿತಾಗಿ ತಿಳಿದುಕೊಳ್ಳೋಣ. ಈ ಮಟನ್ ಲಿವರ್ ಕರಿ ಎಲ್ಲಾ ಊಟದೊಂದಿಗೆ ಸವಿಯಲು ಅದ್ಭುತ ರುಚಿ ನೀಡಲಿದೆ.

ಹಾಗೆ ಈ ಮಟನ್ ಲಿವರ್ ಕರಿ ಎಲ್ಲಾ ಊಟದೊಂದಿಗೆ ಅದ್ಭುತ ಹೀಗಾಗಿ ನಾವಿಂದು ಈ ರುಚಿ ರುಚಿಯ ಮಟನ್ ಲಿವರ್ ಕರಿ ಮಾಡುವ ಕುರಿತಾಗಿ ತಿಳಿದುಕೊಳ್ಳೋಣ. ಮಟನ್ ಲಿವರ್ ಕರಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು? ಮಾಡುವ ವಿಧಾನ ವೇನು?, ಮಾಡಲು ಎಷ್ಟು ಸಮಯ ಹಿಡಿಯಲಿದೆ ಎಂಬುದನ್ನು ನಾವಿಂದು ತಿಳಿದುಕೊಳ್ಳೋಣ.

**ಮಟನ್ ಲಿವರ್ ಕರಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು:** ಮಟನ್ ಲಿವರ್ ಹಸಿ ಶುಂಠಿ ಬೆಳ್ಳುಳ್ಳಿ ಈರುಳ್ಳಿ ತೆಂಗಿನಕಾಯಿ ಹುರಿಗಡಲೆ ಕೊತ್ತಂಬರಿ ಸೊಪ್ಪು ಗಸೆಗಸೆ ಚಕ್ಕೆ ಲವಂಗ ಹಸಿ ಮೆಣಸು ಕರಿಬೇವು ಅರಶಿಣ ಖಾರದ ಪುಡಿ ದನಿಯಾ ಪುಡಿ ಎಣ್ಣೆ ಉಪ್ಪು ಮಟನ್ ಲಿವರ್ ಕರಿ ಮಾಡುವ ವಿಧಾನವೇನು? ಮೊದಲು ಒಂದು ಮಿಕ್ಸಿ ಜಾರ್ ತೆಗೆದುಕೊಂಡು ಅದಕ್ಕೆ ಹಸಿ ಶುಂಠಿ, ಬೆಳ್ಳುಳ್ಳಿ, 1 ಈರುಳ್ಳಿ, 1 ಈರುಳ್ಳಿಯನ್ನು ಸಣ್ಣದಾಗಿ ಹೆಚ್ಚಿಕೊಂಡು ಹಾಕಿಕೊಳ್ಳಿ. ಹಾಗೆ ಸಣ್ಣದಾಗಿ



ಹೆಚ್ಚಿರುವ ತೆಂಗಿನಕಾಯಿ, ಪುದಿನ, ಹುರಿಗಡಲೆ, ಕೊತ್ತಂಬರಿ ಸೊಪ್ಪು, ಗಸೆಗಸೆ, ಚಕ್ಕೆ, ಲವಂಗ ಹಾಗೆ ಸ್ವಲ್ಪ ನೀರು ಹಾಕಿಕೊಂಡು ನುಣ್ಣಗೆ ಪೇಸ್ಟ್ ಮಾಡಿಕೊಳ್ಳಿ. ಈ ಮಸಾಲೆಯನ್ನು ತೆಗೆದು ಬೌಲ್‌ಗೆ ಹಾಕಿಟ್ಟುಕೊಳ್ಳಿ. ಈಗ ಒಂದು ಬಾಣಲೆ ಒಲೆ ಮೇಲೆ ಇಟ್ಟು ಅದಕ್ಕೆ ಎಣ್ಣೆ ಹಾಕಿಕೊಂಡು ಬಳಿಕ ಇದಕ್ಕೆ ಒಂದು ಈರುಳ್ಳಿ, ಹಸಿ ಮೆಣಸು, ಕರಿಬೇವು ಹಾಕಿ ಫ್ರೈ ಮಾಡಿಕೊಳ್ಳಿ. 1 ನಿಮಿಷ ಬಿಟ್ಟು ಇದಕ್ಕೆ ಬೌಲ್‌ನಲ್ಲಿರುವ ಮಸಾಲೆ ಪೇಸ್ಟ್ ಅನ್ನು ಹಾಕಿಕೊಂಡು 2 ನಿಮಿಷಗಳ ಕಾಲ ಫ್ರೈ ಮಾಡಿಕೊಳ್ಳಿ. ಈಗ ತೊಳೆದಿಟ್ಟಿರುವ ಮಟನ್ ಲಿವರ್ ಅನ್ನು ಇದಕ್ಕೆ ಹಾಕಿಕೊಳ್ಳಿ. ಹಾಗೆ ಮಟನ್ ಲವರ್ ಜೊತೆಗೆ ಅರಶಿಣ, ರುಚಿಗೆ ತಕ್ಕಷ್ಟು ಉಪ್ಪು ಕೂಡ ಹಾಕಿಕೊಂಡು ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ.

ಹಾಗೆ 15 ನಿಮಿಷ ಮುಚ್ಚಳ ಮುಚ್ಚಿ ಹಾಗೆಯೇ ಬಿಡಿ. ನಂತರ ಇದಕ್ಕೆ ದನಿಯಾ ಪುಡಿ, ಖಾರದ ಪುಡಿ ಸಹ ಹಾಕಿಕೊಳ್ಳಿ. ನಂತರ ಮಿಕ್ಸ್ ಮಾಡಿ ಸ್ವಲ್ಪವೇ ನೀರು ಹಾಕಿಕೊಂಡು ಮಿಕ್ಸ್ ಮಾಡಿಕೊಂಡು ಕುದಿಯಲು ಬಿಡಿ. ನಿಮಗೆ ಗಟ್ಟಿ ಬೇಕಿದ್ದರೆ ನೀರು ಕಡಿಮೆ ಹಾಕಿಕೊಳ್ಳಿ. ನಂತರ ಮುಚ್ಚಳ ಮುಚ್ಚಿ 5 ನಿಮಿಷ ಕುದಿಸಿಕೊಳ್ಳಿ. ಕೊನೆಯದಾಗಿ ಸಣ್ಣದಾಗಿ ಕೊತ್ತಂಬರಿ ಸೊಪ್ಪು ಹಾಕಿಕೊಂಡು ಮಿಕ್ಸ್ ಮಾಡಿಕೊಂಡರೆ ನಿಮ್ಮ ಮುಂದೆ ಮಟನ್ ಲಿವರ್ ಕರಿ ರೆಡಿಯಾಗುತ್ತದೆ, ನೀವು ಕೂಡ ಮನೆಯಲ್ಲಿ ಇದನ್ನು ಟ್ರೈ ಮಾಡಿ ನೋಡಿ. ಅದರಲ್ಲೂ ಭಾನುವಾರದ ಬಾಡೂಟಕ್ಕೆ ಇದು ಉತ್ತಮ ರುಚಿ ನೀಡಲಿದೆ.

## ಹೊನಗನಹಳ್ಳಿ ರೇಲ್ವೆ ಮೇಲ್ಸೇತುವೆ ಶೀಘ್ರ ಲೋಕಾರ್ಪಣೆ: ಜಿಗಜಿಣಗಿ


ಉದಯವಾಹಿನಿ ಚಿತ್ರ

• ಉದಯವಾಹಿನಿ ವಿಜಯಪುರ

ನಗರ ಹೊರ ಭಾಗದ ಹೊನಗನಹಳ್ಳಿ ಬಳಿಯ ವಿಜಯಪುರ-ಬಾಗಲಕೋಟೆ ರಾಷ್ಟ್ರೀಯ ಹೆದ್ದಾರಿಯ ರೇಲ್ವೆ ಮೇಲ್ಸೇತುವೆ ಕಾಮಗಾರಿ ಸ್ಥಳಕ್ಕೆ ಸಂಸದ ರಮೇಶ ಜಿಗಜಿಣಗಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ರಸ್ತೆಯಲ್ಲಿ ರೇಲ್ವೆ ಮೇಲ್ಸೇತುವೆ ನಿರ್ಮಾಣ ಮಾಡುವಂತೆ ಬಹುದಿನಗಳಿಂದ ಸಾರ್ವಜನಿಕರ ಬೇಡಿಕೆಯಿತ್ತು. ಇದಕ್ಕೆ ಸ್ಪಂದಿಸಿದ ಸಂಸದ ರಮೇಶ ಜಿಗಜಿಣಗಿ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿಯಾಗಿ ಮನವಿ ಮಾಡಿಕೊಂಡ ಹಿನ್ನೆಲೆ, ಕೇಂದ್ರ ಸರ್ಕಾರದ 70 ಕೋಟಿ ರೂ. ಅನುದಾನದ ವೆಚ್ಚದಲ್ಲಿ ನಡೆದ, ಒಂದೂವರೆ ಕಿಮೀನ ರೇಲ್ವೆ ಮೇಲ್ಸೇತುವೆ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಅತೀ ಶೀಘ್ರದಲ್ಲಿ ಲೋಕಾರ್ಪಣೆಗೊಂಡು, ಸಾರ್ವಜನಿಕ ಸಂಚಾರಕ್ಕೆ ಮುಕ್ತವಾಗಲಿದೆ ಎಂದು ಜಿಗಜಿಣಗಿ ಈ ಸಂದರ್ಭದಲ್ಲಿ ಹೇಳಿದರು.

## ಗ್ರಾಮೀಣ ಭಾಗದಲ್ಲಿ ಬಸ್ ತಂಗುದಾಣ ಅಗತ್ಯ

• ಉದಯವಾಹಿನಿ ಔರಾದ್

ಗ್ರಾಮೀಣ ಭಾಗದಲ್ಲಿ ಶಾಲಾ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಹಾಗೂ ಮಹಿಳೆಯರಿಗೆ ಬಸ್ ತಂಗುದಾಣದ ವ್ಯವಸ್ಥೆ ಮಾಡಬೇಕು' ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ ಸಲ್ಲಾವುದ್ದಿನ್ ಜಮಗಿ ಬೇಡಿಕೆ ಮಂಡಿಸಿದರು.

ಸತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸೋಮವಾರ ನಡೆದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು ಶಕ್ತಿ ಯೋಜನೆ ಜಾರಿಯಿಂದ ಮಹಿಳೆಯರ ಓಡಾಟ ಜಾಸ್ತಿಯಾಗಿದೆ. ಆದರೆ ಅವರು ಬಸ್‌ಗಾಗಿ ಬಿಸಿಲಲ್ಲೇ ಕಾಯಬೇಕಾಗಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತಿದೆ. ಹೀಗಾಗಿ ಪ್ರತಿ ಹೋಬಳಿ ಹಾಗೂ ದೊಡ್ಡ ಗ್ರಾಮಗಳಲ್ಲಿ ಬಸ್ ತಂಗುದಾಣ ವ್ಯವಸ್ಥೆ ಆಗಬೇಕು.


ಉದಯವಾಹಿನಿ ಚಿತ್ರ

ಜಮಗಿ ಸೇರಿದಂತೆ ಕೆಲ ಕಡೆ ಬಸ್ ನಿಲ್ದಾಣ ಇದ್ದರೂ ಬಳಕೆ ಆಗುತ್ತಿಲ್ಲ. ಇನ್ನು ಕೆಲ ಕಡೆ ಅತಿಕ್ರಮವಾವಾಗಿವೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು' ಎಂದು ಸಭೆಗೆ ತಿಳಿಸಿದರು.

ಶಕ್ತಿ ಯೋಜನೆ ಅತ್ಯುತ್ತಮ ಯೋಜನೆ. ಆದರೆ ಪ್ರಯಾಣಿಕರಿಗೆ ತೊಂದರೆ ಆಗದಂತೆ ಬಸ್ ಓಡಿಸಬೇಕು. ಔರಾದ್ ಬಸ್ ನಿಲ್ದಾಣದಲ್ಲಿ ಪೊಲೀಸ್ ನಿಗಾ ಘಟಕ ಸ್ಥಾಪಿಸಬೇಕು. ಮಂಜೂರಿಯಾದ ಶುದ್ಧ ನೀರಿನ ಘಟಕ ಅಳವಡಿಸುವಂತೆ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಚೆನ್ನಪ್ಪ ಉಪ್ಪೆ ತಿಳಿಸಿದರು.

ಗ್ಯಾರಂಟಿ ಯೋಜನೆ ಅನಷ್ಠಾನ ಸಮಿತಿ ಉಪಾಧ್ಯಕ್ಷ ಬಾಳಾಸಾಹೇಬ್ ಪಾಟೀಲ, ಸದಸ್ಯ ಡಿ.ಕೆ. ಚಂದು, ಸಂಜುಕುಮಾರ ವಗ್ಗೆ, ಶಿವಕುಮಾರ ಪಾಟೀಲ, ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಶಿವಕುಮಾರ ಘಾಟೆ ಇದ್ದರು.

## ಗಾಂಜಾ ಮಾರಾಟ ಯತ್ನ, ಬಂಧನ

• ಉದಯವಾಹಿನಿ ಶಿವಮೊಗ್ಗ

ಬೊಮ್ಮನಕಟ್ಟೆಯಿಂದ ಬಸವಗಂಗೂರು ಕಡೆ ಹೋಗುವ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ನಾಲ್ವರನ್ನು ಸಿಇಎನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಗಿಗುಡ್ಡ ಶಾಂತಿನಗರದ ನಿವಾಸಿ ಸಿ.ಆಕಾಶ ಅಲಿಯಾಸ್ ಮಚ್ಚೆ (20), ದಾವಣಗೆರೆ ಜಿಲ್ಲೆಯ ನ್ಯಾಮತಿಯ ವಿ.ದರ್ಶನ್ (22), ಬೊಮ್ಮನಕಟ್ಟೆ ಆಶ್ರಯ ಬಡಾವಣೆಯ ನಿವಾಸಿಗಳಾದ ವಿ.ಕೇಶವ (21) ಹಾಗೂ ಎಂ.ನಾಗರಾಜ (21) ಬಂಧಿತ ಆರೋಪಿಗಳು. ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿದ್ದು, ವ್ಯಸನಿಗಳಿಗೆ ಮಾರಾಟ ಮಾಡುತ್ತಿದ್ದಾಗ ಸಿಕ್ಕಿಬಿದ್ದಿದ್ದಾರೆ. ಆರೋಪಿಗಳಿಂದ 20,000 ಮೌಲ್ಯದ 1.25 ಕೆ.ಜಿ ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಸಿಇಎನ್ ಠಾಣೆ ಡಿವೈಎಸ್ಪಿ ಕೃಷ್ಣಮೂರ್ತಿ ನೇತೃತ್ವದಲ್ಲಿ ಎಎಸ್‌ಐ ಶೇಖರ್, ಸಿಬ್ಬಂದಿ ಬಿ.ಧರ್ಮನಾಯ್ಕ, ಬಿ.ರವಿ, ನಾರಾಯಣಸ್ವಾಮಿ, ಫಿರ್ದೋಸ್ ಅಹಮದ್, ಅವಿನಾಶ್, ಪರಮೇಶ್ವರಪ್ಪ ತಂಡ ಕಾರ್ಯಾಚರಣೆ ನಡೆಸಿತ್ತು.

• ನವಿಲುತೀರ್ಥ ಜಲಾಶಯದಿಂದ ನೀರನ್ನು ಮಲಪ್ರಭಾ ಬಲದಂಡೆ ಕಾಲುವೆಯ ಮುಖಾಂತರ ಬಿಡುಗಡೆ ಮಾಡಲು ಆದೇಶ

# ನೀರಿನ ಸದ್ಬಳಕೆ ನಿಗಾಕ್ಕೆ ನೋಡಲ್ ಅಧಿಕಾರಿಗಳ ನೇಮಿಸಿ: ಜಿಲ್ಲಾಧಿಕಾರಿ

• ಉದಯವಾಹಿನಿ ಧಾರವಾಡ

ಮಲಪ್ರಭಾ ಬಲದಂಡೆ ಕಾಲುವೆ ಅಡಿ ಬರುವ ಧಾರವಾಡ ಜಿಲ್ಲೆಯಲ್ಲಿನ ನವಲಗುಂದ, ಅಣ್ಣಿಗೇರಿ ಹುಬ್ಬಳ್ಳಿ ಹಾಗೂ ಕುಂದಗೋಳ ತಾಲ್ಲೂಕಿನ ವಿವಿಧ ಗ್ರಾಮಗಳ ಕುಡಿಯುವ ನೀರಿನ ಕೆರೆಗಳಿಗೆ ನೀರನ್ನು ತುಂಬಿಸಿಕೊಳ್ಳುವ ಸಲುವಾಗಿ ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರು, ಮೇ 13 ರಿಂದ ಮೇ 22 ರ ವರೆಗೆ ನವಿಲುತೀರ್ಥ ಜಲಾಶಯದಿಂದ ನೀರನ್ನು ಮಲಪ್ರಭಾ ಬಲದಂಡೆ ಕಾಲುವೆಯ ಮುಖಾಂತರ ಬಿಡುಗಡೆ ಮಾಡಲು ಆದೇಶಿಸಿದ್ದು, ನೀರು ಸದ್ಬಳಕೆ ಆಗುವಂತೆ ನಿಗಾವಹಿಸಲು ಜಿಲ್ಲಾಮಟ್ಟದ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿ, ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರ ಆದೇಶದನ್ವಯ ಜನ-ಜಾನುವಾರುಗಳಿಗೆ ಕುಡಿಯುವ ಉದ್ದೇಶಕ್ಕಾಗಿ ಮತ್ತು ನರಗುಂದ ಹಾಗೂ ರೋಣ ತಾಲ್ಲೂಕಿನ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಮತ್ತು ಕುಡಿಯುವ ನೀರಿನ ಕೆರೆಗಳನ್ನು ತುಂಬಿಸಲು ನರಗುಂದ ಶಾಖಾ ಕಾಲುವೆಗೆ ಪ್ರತಿ ದಿನ 700 ಕ್ಯೂಸೆಕ್ಸ್ ನಂತೆ 10 ದಿನಗಳವರೆಗೆ, ಮಲಪ್ರಭಾ ಬಲದಂಡೆ ಕಾಲುವೆಗೆ ಪ್ರತಿದಿನ 900 ಕ್ಯೂಸೆಕ್ಸ್ ನಂತೆ 10 ದಿನಗಳವರೆಗೆ, ಹೀಗೆ ಪ್ರತಿದಿನ ಒಟ್ಟು 1600 ಕ್ಯೂಸೆಕ್ಸ್ ನಂತೆ 10 ದಿನಗಳ ಅವಧಿಗೆ ಒಟ್ಟು 1.036 ಟಿಎಂಸಿ ನೀರನ್ನು ದಿನಾಂಕ 13-05-2024 ರಿಂದ 22-05-2024ರ ವರೆಗೆ ನವಿಲುತೀರ್ಥ ಜಲಾಶಯದಿಂದ ಬಿಡುಗಡೆಗೊಳಿಸಲು

### ನಿರಂತರ ನಿಗಾ ಹಾಗೂ ಮೇಲ್ವಿಚಾರಣೆಗಾಗಿ ತಂಡಗಳ ರಚನೆ

**ಧಾರವಾಡ ಜಿಲ್ಲೆಯ ನವಲಗುಂದ, ಅಣ್ಣಿಗೇರಿ, ಹುಬ್ಬಳ್ಳಿ ಮತ್ತು ಕುಂದಗೋಳ ತಾಲ್ಲೂಕಿನಲ್ಲಿರುವ ಕುಡಿಯುವ ನೀರಿನ ಕೆರೆಗಳನ್ನು ತುಂಬಿಸಿಕೊಳ್ಳುವ ಕುರಿತು ಮೇ 13 ರಿಂದ 10 ದಿನಗಳ ಅವಧಿಗೆ ನವಿಲುತೀರ್ಥ ಜಲಾಶಯದಿಂದ ಮಲಪ್ರಭಾ ಬಲದಂಡೆ ಕಾಲುವೆಗೆ ನೀರನ್ನು ಬಿಡುಗಡೆ ಮಾಡುವ ಉದ್ದೇಶವು ಫಲಪ್ರದವಾಗಿ ಈಡೇರುವ ಹಾಗೂ ದುರುಪಯೋಗ ತಡೆಯುವ ಕುರಿತು ಉಸ್ತುವಾರಿ ವಹಿಸಿ ಅವಶ್ಯಕ ಕ್ರಮಗಳನ್ನು ಜರುಗಿಸುವ ನಿಟ್ಟನಲ್ಲಿ ಗ್ರಾಮ ಮಟ್ಟದ ತಂಡಗಳನ್ನು ರಚಿಸಿ, ಸದರಿ ತಂಡಗಳ ಕಾರ್ಯವನ್ನು ಮೇಲ್ವಿಚಾರಣೆ ಮಾಡಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ತಂಡ ರಚಿಸಿ ಆದೇಶಿಸಲಾಗಿದೆ.**


ಉದಯವಾಹಿನಿ ಚಿತ್ರ

ಅಧೀಕ್ಷಕ ಅಭಿಯಂತರರು, ಕ.ನೀ.ನಿ.ನಿ ಎಂ.ಆರ್.ಬಿ.ಸಿ ವೃತ್ತ ಧಾರವಾಡ ಇವರಿಗೆ ಷರತ್ತಿಗೊಳಪಟ್ಟು ಆದೇಶಿಸಿದ್ದಾರೆ.

ಕಾಲುವೆಗೆ ಬಿಡುವ ನೀರನ್ನು ಇತರ ಬಳಕೆಗೆ ಬಳಸದಂತೆ ವಿಧಿಸಿರುವ ನಿರ್ಬಂಧವನ್ನು ಉಲ್ಲಂಘಿಸಿದ್ದು ಕಂಡುಬಂದಲ್ಲಿ ಅಂತಹ ಪಂಪ್ ಸೆಟ್ ಹಾಗೂ ಇತರೆ ಉಪಕರಣಗಳನ್ನು ಜಪ್ತಿ ಮಾಡಿಕೊಂಡು, ಸಂಬಂಧಿಸಿದವರ ಮೇಲೆ ನಿಯಮಾನುಸಾರ ಸೂಕ್ತ ಕಾನೂನಿನ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಸಿದ್ದಾರೆ.

ಕಾರ್ಯ ಅನುಷ್ಠಾನಗೊಳಿಸಲು ಧಾರವಾಡ ಉಪ ವಿಭಾಗಾಧಿಕಾರಿಗಳು, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿಗಳು, ಧಾರವಾಡ ಗ್ರಾಮೀಣ ಪೊಲೀಸ್ ಉಪ ಅಧೀಕ್ಷಕರು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು, ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು, ಹೆಸ್ಕಾಂ ಹುಬ್ಬಳ್ಳಿ ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ.

**ನೋಡಲ್ ಅಧಿಕಾರಿಗಳು ಈ ಕೆಳಕಾಣಿಸಿದ ಕ್ರಮಗಳನ್ನು ಕಟ್ಟು-ನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.**

**ಮಲಪ್ರಭಾ ಬಲದಂಡೆ ಕಾಲುವೆಗೆ ನೀರನ್ನು ಕೇವಲ ಕುಡಿಯುವ ನೀರಿನ ಕೆರೆಗಳನ್ನು ತುಂಬಿಸಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಬಿಡುಗಡೆ ಮಾಡಲಾಗಿದೆ. ಈ ಸಮಯದಲ್ಲಿ ಕಾಲುವೆಯ ಅಚ್ಚುಕಟ್ಟು ಪ್ರದೇಶದ ಸಾರ್ವಜನಿಕರು, ರೈತರು ಈ ನೀರನ್ನು ಕೃಷಿ ಹಾಗೂ ಇನ್ನಿತರೆ ಬೇರೆ ಯಾವುದೇ ಉದ್ದೇಶಕ್ಕೆ ಪಂಪ್ ಸೆಟ್‌ನಿಂದ ಅಥವಾ ಇನ್ನಿತರ ಉಪಕರಣಗಳಿಂದ ಬಳಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆದ್ದರಿಂದ ಎಲ್ಲಾ ಸಾರ್ವಜನಿಕರು, ರೈತರು ಸಹಕಾರ ನೀಡಬೇಕು**

-ದಿವ್ಯ ಪ್ರಭು, ಜಿಲ್ಲಾಧಿಕಾರಿ

**ರೈತರು ಸಹಕಾರ ನೀಡಬೇಕು**

★ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳು ನೀರಿನ ಬೇಡಿಕೆಯು ಮುಂದಿನ ದಿನಗಳಲ್ಲಿ ಹೆಚ್ಚಲಿರುವ ಸಾಧ್ಯತೆ ಇರುವುದರಿಂದ ಹಾಗೂ ಮಲಪ್ರಭಾ ಜಲಾಶಯದಲ್ಲಿ ನೀರಿನ ಪ್ರಮಾಣ ಕಳೆದ ವರ್ಷಕ್ಕಿಂತ ತೀರಾ ಕಡಿಮೆ ಇರುವುದರಿಂದ ಈಗ ಹರಿಬಿಟ್ಟ ನೀರನ್ನು ಪೋಲಾಗದಂತೆ ನಿಗದಿಪಡಿಸಿದಂತೆ ಸಂಗ್ರಹಿಸಿಕೊಂಡು ಅವಶ್ಯವಿರುವಷ್ಟು ನೀರನ್ನು ಹರಿಸಲು ಉಪಯೋಗಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

★ಮಲಪ್ರಭಾ ಬಲದಂಡೆ ಕಾಲುವೆಯಲ್ಲಿ ಬರುವ ನೀರು ಮಾರ್ಗದ ಮಧ್ಯದಲ್ಲಿ ಯಾವುದೇ ರೀತಿಯ ದುರುಪಯೋಗವಾಗದಂತೆ ನೋಡಿಕೊಳ್ಳಲು ಅವಶ್ಯಕತೆ ಇರುವ ಎಲ್ಲ ರೀತಿಯ ಕ್ರಮಗಳನ್ನು ಜರುಗಿಸತಕ್ಕದ್ದು.

★ಕೇವಲ ಕುಡಿಯುವ ನೀರಿನ ಕೆರೆಗಳನ್ನು ತುಂಬಿಸಿಕೊಳ್ಳುವ ಸಲುವಾಗಿ ನೀರು ಬಿಡುಗಡೆ ಮಾಡಿದ್ದು, ಜಿಲ್ಲೆಯಲ್ಲಿನ ಕಾಲುವೆ ಅಂತಿಮ ಬಿಂದುವಿನಿಂದ ಕೆರೆಗೆ ನೀರು ತುಂಬಿಸಿಕೊಳ್ಳಲು ಪ್ರಾರಂಭಿಸಬೇಕು. ಇದರಿಂದ ಕೊನೆಯ ಕೆರೆಯಿಂದ ಮೊದಲಿನ ಕೆರೆಗಳು ಸಹಿತ ನೀರು ಪಡೆಯಲು ಅನುಕೂಲವಾಗುತ್ತದೆ. ಈ ಅಂಶವನ್ನು ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳು ಪರಿಶೀಲಿಸಿ ಅವಶ್ಯಕ ಕ್ರಮ ಜರುಗಿಸತಕ್ಕದ್ದು.

★ಕುಡಿಯುವ ನೀರಿನ ಕೆರೆಗಳು ತುಂಬಿಸಿಕೊಳ್ಳುವ ಸಲುವಾಗಿ ನಿರ್ವಹಿಸಬೇಕಾದ ಎಲ್ಲಾ ರೀತಿಯ ಏರ್ಪಾಡು ಹಾಗೂ ಜರೂರು ಕ್ರಮಗಳನ್ನು ಜರುಗಿಸುವುದು.

## ಇಡೀ ಜಗತ್ತಿಗೆ ಜ್ಞಾನದ ಹಿರಿಮೆಯನ್ನು ತುಂಬಿದ ಗೌತಮ ಬುದ್ಧ: ಪುರಸಭೆ ಅಧ್ಯಕ್ಷ ಆನಂದ ಟೈಗರ್

• ಉದಯವಾಹಿನಿ,ಚಿಂಚೋಳಿ

ಜೀವನದುದ್ದಕ್ಕೂ ನೊಂದವರ ಬಾಳಿನ ಬೆಳಕಾಗಿ ತುಳಿತಕ್ಕೊಳಗಾದವರ ಕಣ್ಣೀರು ಒರೆಸಿ ದ್ವೇಷ ಅಸೂಸೆ ನಿರ್ನಾಮ ಮಾಡಿ ಸಮಾಜದಲ್ಲಿ ಪ್ರೀತಿಯ ಚಿಲುಮೆ ಉಕ್ಕಿಸಿದ ಭಗವಾನ್ ಗೌತಮ ಬುದ್ಧರು ಎಂದು ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಹೇಳಿದರು. ಪಟ್ಟಣದ ತಹಸೀಲ್ ಕಾರ್ಯಾಲಯಲ್ಲಿ ತಾಲ್ಲೂಕಾಡಳಿತ ವತಿಯಿಂದ ಹಮ್ಮಿಕೊಂಡ ಭಗವಾನ್ ಗೌತಮ ಬುದ್ಧರ 2569ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ಇಡೀ ಜಗತ್ತಿಗೆ ಜ್ಞಾನದ ಹಿರಿಮೆಯನ್ನು ಭಗವಾನ್ ಗೌತಮ ಬುದ್ಧರು ತುಂಬಿದರು ಎಂದರು.

ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿಯವರು ಗೌತಮ ಬುದ್ಧರ ಭಾವಚಿತ್ರಕ್ಕೆ ಪುಷ್ಪಾರೋಹಣ ನೇರವೇರಿಸಿ ಮಾತನಾಡಿದ ಅವರು,ಭಗವಾನ್ ಗೌತಮ ಬುದ್ಧರು ದುಃಖದ ಹುಟ್ಟು ದುಃಖದ


ಉದಯವಾಹಿನಿ ಚಿತ್ರ

ಅಡಗುವಿಕೆ ದುಃಖ ನಿವಾರಣೆಗೆ ಅಷ್ಟಾಂಗಿಕ ಮಾರ್ಗವನ್ನು ಕಂಡುಹಿಡಿದ ದಾರ್ಶನಿಕ ಗೌತಮ ಬುದ್ಧರು, ಸಂಶೋಧನೆ ತಿಳುವಳಿಕೆ ಅನುಭವಿಸುವಿಕೆ ಮತ್ತು ಅದನ್ನು ಮನನ ಮಾಡಿಕೊಳ್ಳುವುದೆ ಬೌದ್ಧ ಧರ್ಮ ಎಂದರು.

ಪುರಸಭೆ ಮುಖ್ಯಾಧಿಕಾರಿ ಕಾಶಿನಾಥ ಧನ್ನಿ ಸ್ವಾಗತಿಸಿದರು, ಶಿಕ್ಷಣ ಸಂಯೋಜಕ ಅಶೋಕ ಹೊವಿನಭಾವಿ ನಿರೂಪಿಸಿದರು,.

ಪ್ರಾಂಶುಪಾಲ ಮಲ್ಲಿಕಾರ್ಜುನ ಪಾಲಾಮೋರ್ ವಂದಿಸಿದರು,ಡಾ.ಬಿ.ಆರ್.ತಳವಾರ ವಿಶೇಷ ಉಪಾನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಗ್ರೇಡ್2 ತಹಶೀಲ್ದಾರ್ ವೆಂಕಟೇಶ ದುಗ್ಗನ್,ಭಾರತೀಯ ಬೌದ್ಧ ಮಹಾಸಭಾ ಅಧ್ಯಕ್ಷ ಗೋಪಾಲ ರಾಂಪೂರೆ,ಆರ್.ಗಣಪತರಾವ, ಗೌತಮ್ ಬೋಮ್ನಳ್ಳಿ,ವಕೀಲರ ಸಂಘದ ಅಧ್ಯಕ್ಷ ಶ್ರೀಮಂತ ಕಟ್ಟಿಮನಿ,ಕೆಎಂಬಾರಿ,ಕಾಶಿನಾಥ ಸಿಂದೆ,ಕಸಾಪ ಅಧ್ಯಕ್ಷ ಸುರೇಶ ದೇಶಪಾಂಡೆ,ಸಮಾಜ ಕಲ್ಯಾಣ ಅಧಿಕಾರಿ ಪ್ರಭುಲಿಂಗ ಬುಳ್ಳಾ,ಟಿಹೆಚ್‌ಓ ಮಹ್ಮುದ್ ಗಫಾರ್, ಶ್ರೀಕಾಂತ ಜಾನಕಿ,ಚೇತನ ನಿರಾಳಕರ,ರಾಜು ಕಳಸ್ಕರ,ಅನೇಕರಿದ್ದರು.

## ರಸ್ತೆ ಬದಿ ಕಸ: ಸೌಂದರ್ಯಕ್ಕೆ ಧಕ್ಕೆ: ಕಸ ಎಸೆಯುವವರ ಮೇಲೆ ಕ್ರಮಕ್ಕೆ ಆಗ್ರಹ

• ಉದಯವಾಹಿನಿ ಆಲ್ದೂರು

ಆಲ್ದೂರು ಪಟ್ಟಣದಿಂದ ಚಿಕ್ಕಮಗಳೂರು ತಲುಪುವ ರಸ್ತೆಯ ಇಕ್ಕೆಲಗಳಲ್ಲಿ ಬಿದ್ದಿರುವ ಪ್ಲಾಸ್ಟಿಕ್ ರಾಶಿ ಕಾಫಿನಾಡಿನ ಸೌಂದರ್ಯಕ್ಕೆ ಚ್ಯುತಿ ತರುವಂತಿದೆ. ಇದೇ ಹೆದ್ದಾರಿ ಮೂಲಕ ಪ್ರವಾಸಿಗರು ಶೃಂಗೇರಿ, ಹೊರನಾಡು, ರಂಭಾಪುರಿ ಪೀಠ ಹೀಗೆ ಅನೇಕ ಧಾರ್ಮಿಕ ಕ್ಷೇತ್ರಗಳು, ಪ್ರವಾಸಿ ತಾಣಗಳಿಗೆ ತೆರಳುತ್ತಾರೆ. ರಸ್ತೆ ಬದಿಯಲ್ಲಿ ಬಿದ್ದಿರುವ ಕಸ ನೋಡಿ, ಪ್ರವಾಸಿಗರಿಗೆ ಅಸಹ್ಯ ಮೂಡಬಾರದು. ಈ ಪ್ರದೇಶವನ್ನು ಸ್ವಚ್ಛವಾಗಿಡಲು ಪ್ರಯತ್ನಿಸಬೇಕು ಎಂಬುದು ಸ್ಥಳೀಯರ ಆಗ್ರಹ.

ಪಟ್ಟಣದಿಂದ ಅರ್ಧ ಕಿಲೋಮೀಟರ್ ದೂರದಲ್ಲಿರುವ ಬಿರಂಜಿ ಹೊಳೆ ಹತ್ತಿರದಲ್ಲಿ ಪ್ಲಾಸ್ಟಿಕ್ ಕಸ, ಕೊಳೆತ ತರಕಾರಿ, ಎಳನೀರು ಚಿಪ್ಪನ್ನು ತಂದು ಸುರಿಯಲಾಗುತ್ತದೆ. ಕೊಳೆತ ತರಕಾರಿ, ಹಣ್ಣುತಿನ್ನುವ ಭರದಲ್ಲಿ ಜಾನುವಾರುಗಳು ಪ್ಲಾಸ್ಟಿಕ್ ಅನ್ನು ಸೇವಿಸುತ್ತವೆ. ಅವುಗಳ ಜೀವಕ್ಕೂ ಕುತ್ತು ಬರುವ ಸಾಧ್ಯತೆಗಳು


ಉದಯವಾಹಿನಿ ಚಿತ್ರ

ಹೆಚ್ಚು ಎನ್ನುತ್ತಾರೆ ಪರಿಸರ ಪ್ರೇಮಿಗಳು.

'ನಿರ್ಜನ ಪ್ರದೇಶಗಳಲ್ಲಿ ರಾತ್ರಿ ಹೊತ್ತು ಕಸ ತಂದು ಎಸೆಯುತ್ತರೆ. ಸಾರ್ವಜನಿಕರು, ಕಸ ಹಾಕುವವರನ್ನು ಕಂಡರೆ ಪಂಚಾಯಿತಿಗೆ ಮಾಹಿತಿ ನೀಡಬೇಕು. ಹವಳ್ಳಿ ಗ್ರಾಮದಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ವಿಶೇಷ ಕಾರ್ಯಕ್ರಮಗಳು ನಡೆದಾಗ ಕೆಲವರು, ಊಟದ ತ್ಯಾಜ್ಯ, ಅಡಿಕೆ ಹಾಳೆತಟ್ಟೆ ರಸ್ತೆ ಬದಿಯಲ್ಲಿ ಎಸೆಯುತ್ತಾರೆ. ತೋಟವೊಂದರ ಬಳಿ ಕೋಳಿ ತ್ಯಾಜ್ಯವನ್ನು ತಂದು ಸುರಿಯಲಾಗುತ್ತದೆ. ಈ ರೀತಿ ಮಾಡುವವರಿಗೆ ಪಂಚಾಯಿತಿ ದಂಡ ವಿಧಿಸಬೇಕು ಎನ್ನುತ್ತಾರೆ ರವಿಕುಮಾರ್ ಎಚ್.ಎಲ್. ಕೃಪಾಕ್ಷ ಕೋಟ್ಯಾನ್, ಬಿರಂಜಿ ಹೊಳೆ ಸೇತುವೆ ಪಕ್ಕದಲ್ಲಿ ಹಾಕುತ್ತಿರುವ ಪ್ಲಾಸ್ಟಿಕ್ ಕಸ ಮತ್ತು ಕೊಳೆತ ತರಕಾರಿ, ಹಣ್ಣುಗಳು ಇನ್ನಿತರ ವಸ್ತುಗಳಿಂದ ದುರ್ವಾಸನೆ ಬರುತ್ತಿದ್ದು, ಮೂಗು ಮುಚ್ಚಿಕೊಂಡು ತೆರಳಬೇಕಾದ ಪರಿಸ್ಥಿತಿ ಎದುರಾಗಿದೆ.

**ಕಸ ಬೀಳುವ ಸ್ಥಳದಲ್ಲಿ ಸಿಸಿಟಿವಿ ಕ್ಯಾಮೆರಾವನ್ನು ಅಳವಡಿಸಿದರೆ ಕಸ ಹಾಕುವವರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲು ಸುಲಭವಾಗುತ್ತದೆ. ಸ್ಥಳೀಯ ಗ್ರಾಮಗಳ ನಾಗರಿಕರು ಕೂಡ ಗ್ರಾಮದ ಸ್ವಚ್ಛತೆ, ಪರಿಸರದ ಉಳಿವಿಗಾಗಿ ಕೈಜೋಡಿಸಬೇಕು**

-ತುಡುಕೂರು ಯೋಗೇಶ್,


## ಅವನತಿಯತ್ತ ಔಷಧೀಯ ಸಸ್ಯಗಳ ಸಂರಕ್ಷಣಾ ಕೇಂದ್ರ

• ಉದಯವಾಹಿನಿ ಸಂಡೂರು

ಯಶವಂತನಗರ ಗ್ರಾಮದ ಹೊರ ವಲಯದ ಸ್ವಾಮಿಮಲೈ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಕಂಡು ಬರುವ ಔಷಧೀಯ ಸಸ್ಯಗಳ ಸಂರಕ್ಷಣಾ ಕೇಂದ್ರವು ಸಮರ್ಪಕ ನಿರ್ವಹಣೆಯ ಕೊರತೆಯಿಂದ ಪಾಳು ಬಿದ್ದು ಅವನತಿಯತ್ತ ಸಾಗಿದೆ.

ಜಿಲ್ಲೆಯಲ್ಲಿ ಡಿಎಂಎಫ್, ಕೆಎಂಇಆರ್‌ಸಿ, ಕಲ್ಯಾಣ ಕರ್ನಾಟಕ ಅನುದಾನ ಸೇರದಂತೆ ಇತರೆ ಅನುದಾನಗಳಿಂದ ಸಾವಿರಾರು ಕೋಟಿ ಹಣವಿದ್ದರೂ ಸಹ ಜಿಲ್ಲಾಡಳಿತ, ಅರಣ್ಯ ಇಲಾಖೆ, ಜನ ಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದ ಔಷಧೀಯ ಸಸ್ಯಗಳ ಸಂರಕ್ಷಣಾ ಕೇಂದ್ರವು ಅನಾಭಿವೃದ್ಧಿಹೊಂದಿ ಅವನತಿಯ ಹಂಚಿಗೆ ತಲುಪಿರುವುದು ಪರಿಸರವಾದಿಗಳ, ಸಾಮಾಜಿಕ ಹೋರಾಟಗಾರರ ಆಕ್ರೋಶಕ್ಕೆ ಕಾರಣವಾಗಿದೆ.

ಕರ್ನಾಟಕ ರಾಜ್ಯ ಸರ್ಕಾರದ ಅರಣ್ಯ ಇಲಾಖೆ, ಬಳ್ಳಾರಿ ವೃತ್ತ, ಬಳ್ಳಾರಿ ಪ್ರಾದೇಶಿಕ ವಿಭಾಗ, ಸಂಡೂರು ದಕ್ಷಿಣ ಅರಣ್ಯ ವಲಯದ ಸಹಯೋಗದಲ್ಲಿ 1999ರಲ್ಲಿ ಸುಮಾರು 345.00 ಹೆಕ್ಟರ್ ವಿಶಾಲವಾದ ಅರಣ್ಯ ಪ್ರದೇಶದಲ್ಲಿ ಔಷಧೀಯ ಸಸ್ಯಗಳ ಸಂರಕ್ಷಣಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಸಂಡೂರಿನ ಔಷಧೀಯ ಸಸ್ಯಗಳ ಸಂರಕ್ಷಣಾ ಕೇಂದ್ರವು ಕರ್ನಾಟಕ ರಾಜ್ಯದ 12 ಔಷಧೀಯ ಸಸ್ಯಗಳ ಸಂರಕ್ಷಣಾ ಪ್ರದೇಶಗಳ ಪೈಕಿ ಒಂದಾ


ಉದಯವಾಹಿನಿ ಚಿತ್ರ

ಗಿದ್ದು, ಸುಮಾರು 292 ವಿವಿಧ ಜಾತಿಯ, 50 ಪ್ರಭೇದಗಳ, 46 ಕುಲಗಳಿರುವ ವಿಶಿಷ್ಟ, ಉತ್ಕೃಷ್ಟವಾದ ಔಷಧೀಯ ಅಪಾರ ಸಸ್ಯ ಸಂಪತ್ತನ್ನು ಹೊಂದಿದೆ. ಸಸ್ಯ ಸಂರಕ್ಷಣಾ ಕೇಂದ್ರದ ವ್ಯಾಪ್ತಿಯಲ್ಲಿ ಧ್ವನಂತರಿ, ನಂದಿದೇವರ, ಚರಕ ಮಹಾ ಋಷಿ, ರಾಶಿ, ನವಗ್ರಹ ವನ ಸೇರಿದಂತೆ ಒಟ್ಟು ಐದು ಔಷಧೀಯ ಸಸ್ಯ ವನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅವುಗಳಲ್ಲಿ ರಾಶಿ, ನವಗ್ರಹ ವನಗಳು ಸಂಪೂರ್ಣವಾಗಿ ಅವನತಿ ಹೊಂದಿದ್ದು, ಇನ್ನುಳಿದ ವನಗಳಲ್ಲಿ ಔಷಧೀಯ ಸಸ್ಯಗಳ ಜೊತೆಗೆ ಇತರೆ ವ್ಯರ್ಥವಾದ ಹುಲ್ಲಿನ ಜಾತಿಯ ಸಸ್ಯಗಳು ಗಿಡಮೂಲಿಕೆಯ ಸಸ್ಯಗಳು ಕಾಣದಂತೆ ದಟ್ಟವಾಗಿ ಬೆಳೆದಿವೆ.

### ನಿಧಾನಗತಿಯಲ್ಲಿ ನಾಶ

**ಸಸ್ಯ ಸಂರಕ್ಷಣಾ ಕೇಂದ್ರದಲ್ಲಿ ರಕ್ತ ಚಂದನ, ಮಾವು, ಬಕುಲಾ, ಆಲ, ಕಕ್ಕೆ, ಹಲಸು, ಮುತ್ತುಗ, ಅರಳಿ, ಬೀಟೆ, ಬತ್ತಿ, ಉತ್ತರಾಣಿ, ದರ್ಭಿಹುಲ್ಲು ಸೇರಿದಂತೆ ಇತರೆ ಜಾತಿಗಳ ಔಷಧೀಯ ಸಸ್ಯಗಳನ್ನು ಬೆಳೆಸಲಾಗಿತ್ತು. ಕ್ಯಾನ್ಸರ್, ಅಲ್ಸರ್, ಕೆಮ್ಮು, ದೃಷ್ಟಿ ನಿವಾರಣೆ, ಚರ್ಮ ಕಾಯಿಲೆ, ಸಂತನಾಭಿವೃದ್ಧಿ, ಅಸ್ತಮಾ, ಗುಪ್ತರೋಗಗಳ ನಿವಾರಣೆ ಸೇರಿದಂತೆ ಇತರೆ ಕಾಯಿಲೆಗಳ ನಿವಾರಣೆಯ ಔಷಧೀಯ ಸಸ್ಯಗಳು ಸಂವೃದ್ಧವಾಗಿ ಬೆಳಸಲಾಗಿತ್ತು. ಆದರೆ ಅರಣ್ಯ ಇಲಾಖೆಯ ಅಧಿಕಾರಿ, ಸಿಬ್ಬಂದಿ ನಿರ್ವಹಣೆಯ ಕೊರತೆಯಿಂದ ಪಾರಂಪರಿಕ ಔಷಧೀಯ ಸಸ್ಯಗಳು ನಿಧಾನಗತಿಯಲ್ಲಿ ನಾಶವಾಗುತ್ತೀರುವುದು ಖೇದಕರ ಸಂಗತಿಯಾಗಿದೆ.**

## ಭಾರತ-ಪಾಕಿಸ್ತಾನ್ ನಡುವೆ ಯುದ್ಧದ ಸ್ಥಿತಿ ಜಿಲ್ಲೆಯ ಸೂಕ್ಷ್ಮ, ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ

• ಉದಯವಾಹಿನಿ ಹಾವೇರಿ

ಭಾರತ ಹಾಗೂ ಪಾಕಿಸ್ತಾನ್ ನಡುವೆ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿರುವುದರಿಂದ ಜಿಲ್ಲೆಯಲ್ಲಿ ಹೆಚ್ಚಿನ ನಿಗಾವಹಿಸಿರುವ ಪೊಲೀಸರು, 28 ಕಡೆಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿ ಕಾವಲು ಕಾಯುತ್ತಿದ್ದಾರೆ.

ದಿನದ 24 ಗಂಟೆಯೂ ಚೆಕ್‌ಪೋಸ್ಟ್‌ನಲ್ಲಿ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಜಿಲ್ಲೆಯನ್ನು ಪ್ರವೇಶಿಸುವ ಹಾಗೂ ಅಪರಿಚಿತ ವ್ಯಕ್ತಿಗಳನ್ನು ಚೆಕ್‌ಪೋಸ್ಟ್‌ನಲ್ಲಿ ತಪಾಸಣೆಗೆ ಒಳಪಡಿಸುತ್ತಿದ್ದಾರೆ.

ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಟ್ಟೆಚ್ಚರ ವಹಿಸಬೇಕು. ಜನರಿಗೆ ಸೂಕ್ತ ಭದ್ರತೆ ನೀಡಬೇಕು. ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಸ್ಥಳಗಳಲ್ಲಿ ಹೆಚ್ಚಿನ ಭದ್ರತೆ ಕೈಗೊಳ್ಳಬೇಕು' ಎಂದು ರಾಜ್ಯ ಸರ್ಕಾರದ ಈಗಾಗಲೇ ಪೊಲೀಸರಿಗೆ ಸೂಚನೆ ನೀಡಿದೆ. ಅದೇ ಸೂಚನೆ ಆಧರಿಸಿ ಜಿಲ್ಲಾ ಪೊಲೀಸರು ಸಹ ಹಲವು ಸುರಕ್ಷತಾ ಕ್ರಮಗಳನ್ನು ಕೈಗೊಂಡಿದ್ದಾರೆ. ಭಾರತ ಹಾಗೂ ಪಾಕಿಸ್ತಾನ್ ನಡುವೆ ಯುದ್ಧದ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದೆ.


ಉದಯವಾಹಿನಿ ಚಿತ್ರ

ಹೀಗಾಗಿ, ಜಿಲ್ಲೆಯಾದ್ಯಂತ ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಗಸ್ತು ಹೆಚ್ಚಿಸಲಾಗಿದೆ' ಎಂದು ಜಿಲ್ಲಾ ಎಸ್ಪಿ ಅಂಶುಕುಮಾರ ತಿಳಿಸಿದರು.

ಜಿಲ್ಲೆಯಲ್ಲಿರುವ ಮಾರುಕಟ್ಟೆ, ಬಸ್ ನಿಲ್ದಾಣ, ರೈಲು ನಿಲ್ದಾಣ, ಜನಸಂದಣಿ ಸ್ಥಳಗಳು, ದೇವಸ್ಥಾನ, ಮಸೀದಿ, ಚರ್ಚ್, ವಿದ್ಯುತ್ ಸರಬರಾಜು ಘಟಕ, ಪವನ ಶಕ್ತಿ ಘಟಕ, ಪ್ರವಾಸಿ ತಾಣಗಳು ಸೇರಿದಂತೆ ಹಲವು ಸ್ಥಳಗಳಲ್ಲಿ ನಿರಂತರವಾಗಿ ತಪಾಸಣೆ ನಡೆಸಲಾಗುತ್ತಿದೆ. ತುರ್ತು ಸಂದರ್ಭಗಳಲ್ಲಿ ಭದ್ರತೆಗೆ ನಾಗರಿಕರ ಸಹಕಾರವೂ ಅಗತ್ಯವಿರುತ್ತದೆ. ಈಗಾಗಲೇ ಜಿಲ್ಲೆಯ 186 ನಾಗರಿಕರಿಗೆ ಸ್ವರಕ್ಷಣೆಗಾಗಿ ಬಂದೂಕು ತರಬೇತಿಯನ್ನೂ ನೀಡಲಾಗಿದೆ. ಜಿಲ್ಲೆಯಲ್ಲಿರುವ ರೌಡಿಗಳ ಮನೆಗೂ ಹೋಗಿ ತಪಾಸಣೆ ನಡೆಸಲಾಗಿದ್ದು, ಅಪರಾಧ ಕೃತ್ಯಗಳಲ್ಲಿ ಭಾಗವಹಿಸದಂತೆ ಎಚ್ಚರಿಕೆಯನ್ನೂ ನೀಡಲಾಗಿದೆ' ಎಂದು ಹೇಳಿದರು.

### ಸುಳ್ಳು ಸುದ್ದಿ ಹರಡಿದರೆ ಕ್ರಮ

**ಯುದ್ಧ ಹಾಗೂ ಇತರೆ ವಿಷಯಗಳಿಗೆ ಸಂಬಂಧಪಟ್ಟಂತೆ ಕೆಲವರು ಸುಳ್ಳು ಸುದ್ದಿ ಹರಿಬಿಡುತ್ತಿದ್ದಾರೆ. ಇಂಥವರನ್ನು ಪತ್ತೆ ಮಾಡಲು ವಿಶೇಷ ಘಟಕವನ್ನು ತೆರೆಯಲಾಗಿದೆ ಎಂದು ಅಂಶುಕುಮಾರ ತಿಳಿಸಿದರು.**

## ಸುಳ್ಳು ಸುದ್ದಿ ಅಥವಾ ತಪ್ಪು ಮಾಹಿತಿ ಹರಡಿದರೆ ಕಠಿಣ ಕ್ರಮ: ದಿನೇಶ್ ಗುಂಡೂರಾವ್

• ಉದಯವಾಹಿನಿ ಮಂಗಳೂರು

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಉದ್ವಿಗ್ನ ಸ್ಥಿತಿಯ ಈ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡಿದರೆ, ಸುಳ್ಳು ಸುದ್ದಿ ಹಬ್ಬಿಸಿದರೆ ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಇಂತಹ ಕೃತ್ಯಗಳನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸೈನಿಕರಿಗೆ ಆತ್ಮಸ್ಥೈರ್ಯ



ತುಂಬುವ ಕೆಲಸ ಮಾಡಬೇಕು. ದೇಶದ ವಿಚಾರ ಬಂದಾಗ ನಾವೆಲ್ಲಾ ಒಂದೇ ಎಂದರು. ಸುಹಾಸ್ ಶೆಟ್ಟಿ ಕೊಲೆ ಪ್ರಕರಣದ ಕುರಿತು ಮಾತನಾಡಿದ ಅವರು, ಪ್ರಕರಣದ ಆರೋಪಿಗಳನ್ನು ಬಂಧಿಸಿರುವ ಪೊಲೀಸರು ಸಮರ್ಪಕ ತನಿಖೆ ನಡೆಸುತ್ತಿದ್ದಾರೆ. ಹಾಗಾಗಿ ಇದನ್ನು ಎನ್‌ಐಎಗೆ ವಹಿಸಬೇಕೆ ಬೇಡವೆ ಎಂಬ ಬಗ್ಗೆ ಯೋಚಿಸಬೇಕಿದೆ. ಪೊಲೀಸರು ಈಗಾಗಲೇ ಪ್ರಕರಣದ ಮೂಲ ತಿಳಿಯುವಲ್ಲಿಯೂ ಯಶಸ್ವಿಯಾಗಿದ್ದು, ಬೇರೆ ಯಾರಾದರೂ ಇದ್ದಾರೆಯೇ ಎಂಬ ಬಗ್ಗೆಯೂ ತನಿಖೆ ನಡೆಸುತ್ತಿದ್ದಾರೆ ಎಂದು ಹೇಳಿದರು.

## ಸರ್ಕಾರಿ ಶಾಲೆ ಅಂದ ಹೆಚ್ಚಿಸಿದ ವಿದ್ಯಾರ್ಥಿಗಳು

• ಉದಯವಾಹಿನಿ ಹಾಸನ

ಇಲ್ಲಿನ ನವಕೀಸ್ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕ ಮತ್ತು ಯುವಕ ಸಂಘಗಳ ಆಶ್ರಯದಲ್ಲಿ 'ಸ್ಕೂಲ್ ಬೆಲ್' ಕಾರ್ಯಕ್ರಮದಡಿ ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆಯ ಸರ್ಕಾರಿ ಪ್ರೌಢಶಾಲೆಗೆ ಬಣ್ಣ ಬಳಿದು ನವೀಕರಣ ಮಾಡಲಾಯಿತು.

ರಾಷ್ಟ್ರೀಯ ಸೇವಾ ಯೋಜನೆಯ 40 ವಿದ್ಯಾರ್ಥಿ ಸ್ವಯಂ ಸೇವಕರು ಈ ಸೇವಾ ಕಾರ್ಯದಲ್ಲಿ ಪಾಲ್ಗೊಂಡು ವಿಜ್ಞಾನ, ಗಣಿತ ಹಾಗೂ ಸಮಾಜ ಶಾಸ್ತ್ರಗಳಿಗೆ ಸಂಬಂಧಪಟ್ಟ ರೇಖಾ ಚಿತ್ರಗಳನ್ನು ರಚಿಸಿ, ಬಣ್ಣ ತುಂಬಿದರು. ಈ ಚಿತ್ರಗಳು ಮಕ್ಕಳ ಕಲಿಕೆಗೆ ಸಹಾಯಕವಾಗಿದ್ದು, ಶಿಕ್ಷಕರು ಬೋಧಿಸಲು


ಉದಯವಾಹಿನಿ ಚಿತ್ರ

ಅನುಕೂಲವಾಗಿವೆ. ಬೋಧನಾ ಕೊಠಡಿಯ ಒಳಗೆ ಹಾಗೂ ಕಟ್ಟಡದ ಹೊರಗೆ ಬಣ್ಣ ಬಳಿದು ಆಕರ್ಷಕ ಚಿತ್ರಗಳನ್ನು ರಚಿಸಲಾಯಿತು.

# ನಬಾರ್ಡ್ ನೆರವು ಪಡೆದು ಕೋಲ್ಡ್ ಸ್ಟೋರೇಜ್, ವೇರ್ ಹೌಸ್ ನಿರ್ಮಿಸಿ

### ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ

• ಉದಯವಾಹಿನಿ ಕಲಬುರಗಿ

ರೈತರು ಬೆಳೆಯುವ ತೋಟಗಾರಿಕೆ ಬೆಳೆಗಳನ್ನು,ಕೃಷಿ ಉತ್ಪನ್ನಗಳನ್ನು ಶೇಖರಿಸಲು ನಬಾರ್ಡ್-ವಿಶ್ವ ಬ್ಯಾಂಕ್ ನೆರವು ಪಡೆದು ಕೋಲ್ಡ್ ಸ್ಟೋರೇಜ್, ವೇರ್ ಹೌಸ್ ನಿರ್ಮಿಸಬೇಕು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸೋಮವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ ಪಾಟೀಲ ಮತ್ತು ಸಂಸದ ರಾಧಾಕೃಷ್ಣ ದೊಡ್ಡಮನಿ ಅವರೊಂದಿಗೆ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ನಬಾರ್ಡ್ ಮತ್ತು ವಿಶ್ವ ಬ್ಯಾಂಕ್ ನಲ್ಲಿ ಸಾಕಷ್ಟು ಅನುದಾನ ಲಭ್ಯವಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದರು.

ತೋಟಗಾರಿಕೆ ಉಪನಿರ್ದೇಶಕ ಸಂತೋಷ ಇನಾಂದಾರ ಮಾತನಾಡಿ, ಜೇವರ್ಗಿಯಲ್ಲಿ ಮೆಣಸಿನ ಕಾಯಿ ಶೇಖರಣೆಗೆ 7.50 ಕೋಟಿ ರೂ. ವೆಚ್ಚದಲ್ಲಿ 5,000 ಮೆಟ್ರಿಕ್ ಟನ್ ಸಾಮರ್ಥ್ಯದ ಕೋಲ್ಡ್ ಸ್ಟೋರೇಜ್ ತೆರೆಯಲು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಕಲಬುರಗಿ ರೊಟ್ಟಿಗೆ ಬೇಡಿಕೆ ಹೆಚ್ಚುತ್ತಿರುವುದರಿಂದ ಸಂಸ್ಕರಣೆ, ಮಾರುಕಟ್ಟೆ ಸರಿಯಾಗಿ ಒದಗಿಸಿದಲ್ಲಿ ಸಿರಿ ಧಾನ್ಯದ ರೊಟ್ಟಿ ತಯಾರಿಸುವ ಮಹಿಳೆಯರು ಇನ್ನು ಹೆಚ್ಚು ಆರ್ಥಿಕ ಲಾಭ ಪಡೆಯಬಹುದಾಗಿದೆ. ಭೌಗೋಳಿಕ ಸೂಚ್ಯಂಕ ಹೊಂದಿರುವ, ತೊಗರಿ, ಭೀಮಾ ಪಲ್ಸಸ್, ಕೆಂಬಾಳೆಗೂ ಮಾರುಕಟ್ಟೆ ಕಲ್ಪಿಸಿ ರೈತರಿಗೆ ನೆರವಾಗಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಚರ್ಚೆ ವೇಳೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಪರ ನಿರ್ದೇಶಕ ಅಲ್ಲಾಭಕ್ಷ ಅವರು ಮಾತನಾಡಿ, ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ಶಾಲೆ, ಅಂಗನವಾಡಿ, ಆರೋಗ್ಯ ಕೇಂದ್ರ, ದುರಸ್ತಿ, ರಸ್ತೆ-ಚರಂಡಿ ನಿರ್ಮಾಣದಂತಹ ಕಾರ್ಯಕ್ರಮಗಳು ಹಾಕಿಕೊಳ್ಳುತ್ತಿದ್ದು, ಕಳೆದ 2024-25ನೇ ಸಾಲಿಗೆ ಜಿಲ್ಲೆಯ 11 ಗ್ರಾಮ ಆಯ್ಕೆ ಮಾಡಿದೆ ಎಂದರು. ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡಿ ತಮ್ಮ ಕ್ಷೇತ್ರದ ಪಾಣೆಗಾಂವ, ಕೆರಿಭೋಸಗಾ ಗ್ರಾಮದಲ್ಲಿ ಅಪೂರ್ಣ ಕಾಮಗಾರಿಗಳಾಗಿದ್ದು, ಬಾಕಿ ಕೆಲಸ ಕೂಡಲೆ ಗಮನಹರಿಸಿ ಪೂರ್ಣಗೊಳಿಸಬೇಕು ಎಂದರು.

ಕಲಬುರಗಿ ಔಟರ್ ರಿಂಗ್ ರೋಡ್ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ರಾಷ್ಟ್ರೀಯ ಹೆದ್ದಾರಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತ ಇಬ್ರಾಹಿಂ ಮಾತನಾಡಿ, ಹಿಂದೆ ಕಳುಹಿಸಿದ ಪ್ರಸ್ತಾವನೆ ಕೇಂದ್ರ ತಿರಸ್ಕರಿಸಿದೆ ಎಂದರು.

ಸಚಿವ ಡಾ.ಶರಣಪ್ರಕಾಶ ಪಾಟೀಲ ಮಾತನಾಡಿ, ಕೂಡಲೆ ಜಮೀನು ಭೂಸ್ವಾಧೀನಕ್ಕೆ ಬೇಕಾದ ಮೊತ್ತದ ಕುರಿತು ಅಧ್ಯಯನ ಮಾಡಿ. ರೈತರ ಜೊತೆಗೂ ಚರ್ಚಿಸಿ ಎಂದು ಸಲಹೆ ನೀಡಿದರು.


ಉದಯವಾಹಿನಿ ಚಿತ್ರ

### ಪಿ.ಎಂ.ಮಿತ್ರ ಟೆಕ್ಸ್‌ಟೈಲ್ ಪಾರ್ಕ್ ಕೆಲಸ ತ್ವರಿತಗೊಳಿಸಿ

**ಒಂದು ಸಾವಿರ ಎಕರೆ ಪ್ರದೇಶದಲ್ಲಿ ಪಿ.ಎಂ.ಮಿತ್ರ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಗೆ ರಾಜ್ಯ ಸರ್ಕಾರ ಕಳೆದ ಕಲಬುರಗಿ ಕ್ಯಾಬಿನೆಟ್ ನಲ್ಲಿ 392 ಕೋಟಿ. ರೂ. ಮೊತ್ತದ ವಿವಿಧ ಮೂಲಸೌಕರ್ಯ ಒದಗಿಸುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಬಿಡುಗಡೆಯಾದ ಹಣಕ್ಕೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಘಟಕದಲ್ಲಿ ಕೆಲಸ ಮಾಡಲು ಬೇಕಾದ ಕೌಶಲ್ಯತೆ ಬಗ್ಗೆ ತಿಳಿಸಿದಲ್ಲಿ ಈಗಿನಿಂದಲೆ ಸ್ಥಳೀಯರಿಗೆ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಕೌಶಲ್ಯ ನೀಡಲಾಗುವುದು ಎಂದು ಸಚಿವ ಡಾ.ಶರಣಪ್ರಕಾಶ ಪಾಟೀಲ ತಿಳಿಸಿದರು.**

### ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ

**ಕಲಬುರಗಿ ರಿಂಗ್ ರಸ್ತೆಯ ಖರ್ಗೆ ಪೆಟ್ರೋಲ್ ಪಂಪ್-ಹುಮನಾಬಾದ ರಸ್ತೆ ಮಧ್ಯದಲ್ಲಿ ಸರ್ವಿಸ್ ರಸ್ತೆ ಕಾಮಗಾರಿ ನಿಧಾನಗತಿಯಿಂದ ರಸ್ತೆ ಅಪಘಾತಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇದನ್ನು ತಪ್ಪಿಸಲು ರಸ್ತೆ ಕೆಲಸ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತ ಮಾಡಬೇಕೆಂದು ಕರ್ನಾಟಕ ರೇಷ್ಮೆ ಅಭಿವೃದ್ಧಿ ನಿಯಮಿತದ ಅಧ್ಯಕ್ಷರು ಹಾಗೂ ಕಲಬುರಗಿ ಉತ್ತರ ಶಾಸಕಿ ಕನೀಜ್ ಫಾತಿಮಾ ಹೇಳಿದರು. ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಅನಗತ್ಯ ವಿಳಂಬ ದೋರಣೆ ಸಹಿಸಲ್ಲ. ಕೆಲಸ ಮಾಡದಿದ್ದರೆ ಗುತ್ತಿಗೆದಾರನನ್ನು ಕಪ್ಪು ಪಟ್ಟಿಗೆ ಸೇರಿಸಬೇಕು ಮತ್ತು ಈಗಾಗಲೆ ಸರ್ವಿಸ್ ರಸ್ತೆ ಮಾಡಿರುವ ಸ್ಥಳದಲ್ಲಿ ಅಂಗಡಿ ಮುಂಗಟ್ಟುಗಳು ತಮ್ಮ ವಸ್ತುಗಳನ್ನು ಮಾರಾಟಕ್ಕೆ ಇಟ್ಟುಕೊಂಡಿದ್ದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಕೂಡಲೆ ಅತಿಕ್ರಮಣ ತೆರವುಗೊಳಿಸಬೇಕು ಎಂದು ಕಲಬುರಗಿ ಪಾಲಿಕೆ ಅವಿನಾಶ ಶಿಂಧೆ ಅವರಿಗೆ ಸಚಿವರು ಸೂಚನೆ ನೀಡಿದರು.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ**: ಸಂತೋಷದ ಚೈತನ್ಯದಾಯಕ – ಪ್ರಿಯವಾದ ಚಿತ್ತದ – ನಿಮ್ಮ ಖುಷಿಯ ಸ್ವಭಾವ ನಿಮ್ಮ ಸುತ್ತಲಿನವರಿಗೆ ಸಂತೋಷ ಮತ್ತು ಖುಷಿಯನ್ನು ತರುತ್ತದೆ. ಪ್ರೀತಿಯ ಇಂದ್ರಜಾಲ ನಿಮ್ಮನ್ನು ಕಟ್ಟಿಹಾಕಲಿದೆ.

**ವೃಷಭ**: ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ.

**ಮಿಥುನ**: ಎಲ್ಲರಿಗೂ ಸಹಾಯ ಮಾಡುವ ನಿಮ್ಮನ್ನು ದಣಿಸುತ್ತದೆ. ಕೆಲವು ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ ಹಾಗೂ ಅವು ನಿಮಗೆ ಹೊಸ ಆರ್ಥಿಕ ಲಾಭ ತರುತ್ತವೆ.

**ಕರ್ಕಾಟಕ**: ಮುಂಗೋಪ ನಿಮ್ಮನ್ನು ಇನ್ನೂ ಹೆಚ್ಚು ತೊಂದರೆಯಲ್ಲಿ ಸಿಲುಕಿಸಬಹುದು. ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಡೆಯುವ ಕಾರಣದಿಂದಾಗಿ ಇಂದು ನೀವು ನಿಮ್ಮ ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ಸಿಂಹ**: ಇಂದು ನೀವು ಪ್ರಮುಖ ನಿರ್ಧಾರ ಕೈಗೊಳ್ಳಬೇಕು. ಇದು ನಿಮ್ಮನ್ನು ಒತ್ತಡ ಹಾಗೂ ಉದ್ವೇಗಕ್ಕೆ ಒಳಪಡಿಸುತ್ತದೆ. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ.

**ಕನ್ಯಾ**: ತಪ್ಪು ಸಮಯದಲ್ಲಿ ತಪ್ಪು ವಿಷಯಗಳನ್ನು ಹೇಳದಿರಲು ಪ್ರಯತ್ನಿಸಿ – ನೀವು ಪ್ರೀತಿಸುವವರನ್ನು ನೋಯಿಸದಂತೆ ಎಚ್ಚರ ವಹಿಸಿ. ಇಂದು ನೀವು ಒಂದು ಹೃದಯ ಒಡೆಯುವುದನ್ನು ತಪ್ಪಿಸುತ್ತೀರಿ.

**ತುಲಾ**: ಕಣ್ಣಿನ ಪೊರೆ ರೋಗಿಗಳಿಗೆ ಧೂಮಪಾನವು ಅವರ ಕಣ್ಣುಗಳಿಗೆ ಮತ್ತಷ್ಟು ಹಾನಿಯುಂಟುಮಾಡಬಹುದಾದ್ದರಿಂದ ಅವರು ಕಲುಷಿತ ಪರಿಸರದಲ್ಲಿ ಹೋಗಬಾರದು.

**ವೃಶ್ಚಿಕ**: ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಉದ್ಯೋಗವನ್ನು ಮಾಡುವ ಜನರು, ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ.

**ಧನಸ್ಸು**: ಆರೋಗ್ಯದ ಆರೈಕೆ ಮಾಡಿಕೊಳ್ಳಬೇಕು. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಅದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ.

**ಮಕರ**: ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ.

**ಕುಂಭ**: ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ತಪ್ಪದೆ ಮಾಡಿ. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ.

**ಮೀನ**: ಆರೋಗ್ಯ ಪರಿಪೂರ್ಣವಾಗಿರುತ್ತದೆ. ಇಂದು, ಒಂದು ಪಾರ್ಟಿಯಲ್ಲಿ ನೀವು ಆರ್ಥಿಕ ಭಾಗವನ್ನು ಬಲಪಡಿಸಲು ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು.

## 6 ವರ್ಷದಲ್ಲಿ 4,338 ಪಡಿತರ ಚೀಟಿ ರದ್ದು

• ಉದಯವಾಹಿನಿ ಕಾರವಾರ

ಕಳೆದ ಆರು ವರ್ಷಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ನಿಯಮ ಮೀರಿ ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿದ್ದ 4,338 ಜನರ ಕಾರ್ಡ್ ರದ್ದುಪಡಿಸಲಾಗಿದೆ. ಅವುಗಳ ಪೈಕಿ 228 ಸರ್ಕಾರಿ ನೌಕರರೂ ಸೇರಿದ್ದಾರೆ.'ಸರ್ಕಾರಿ ನೌಕರಿಯಲ್ಲಿರುವವರು, ಮೂರು ಹೆಕ್ಟೇರ್‌ಗಿಂತ ಹೆಚ್ಚು ಕೃಷಿ ಭೂಮಿ ಹೊಂದಿದ್ದವರು, ಆದಾಯ ತೆರಿಗೆ ಪಾವತಿದಾರರು ಸೇರಿದಂತೆ ಸರ್ಕಾರ ನಿಗದಿಪಡಿಸಿದ ಮಾನದಂಡ ಹೊಂದಿಲ್ಲದವರು ಬಡತನ ರೇಖೆಗಿಂತ ಕೆಳಗಿನವರು (ಬಿಪಿಎಲ್) ಎಂದು ಘೋಷಿಸಿಕೊಂಡು ಪಡಿತರ ಚೀಟಿ ಪಡೆಯುವಂತಿಲ್ಲ' ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಮಂಜುನಾಥ ರೇವಣಕರ್ ತಿಳಿಸಿದ್ದಾರೆ. 2019 ರಿಂದ ಇದುವರೆಗೆ 228 ಸರ್ಕಾರಿ ನೌಕರರು, ನಿಗದಿಗಿಂತ ಹೆಚ್ಚಿನ ಆದಾಯ ಹೊಂದಿರುವ 379 ಮಂದಿ, 3



ಹೆಕ್ಟೇರ್‌ಗಿಂತ ಹೆಚ್ಚು ಜಮೀನು ಹೊಂದಿರುವ 97 ಮಂದಿ, ಆದಾಯ ತೆರಿಗೆ ಪಾವತಿಸುವ 1,170 ಮಂದಿ ಮತ್ತು ಇತರ 2,216 ಮಂದಿಯ ಪಡಿತರ ಚೀಟಿ ರದ್ದುಪಡಿಸಲಾಗಿದೆ. ಅಂತಹವರಿಂದ 46,29,100 ದಂಡ ಸಂಗ್ರಹಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಸಾರ್ವಜನಿಕರಿಗೆ ಪಡಿತರ ವಿತರಣೆಯಲ್ಲಿ ಉತ್ತರ ಕನ್ನಡ ಜಿಲ್ಲೆ ರಾಜ್ಯದಲ್ಲೇ ನಾಲ್ಕನೇ ಸ್ಥಾನದಲ್ಲಿದೆ. ಏಪ್ರಿಲ್ ತಿಂಗಳಿನಲ್ಲಿ ಶೇ 90.34ರಷ್ಟು ಜನರಿಗೆ ಪಡಿತರ ವಿತರಿಸುವ ಮೂಲಕ ಈ ಸಾಧನೆ ಮಾಡಲಾಗಿದೆ' ಎಂದು ಹೇಳಿದರು. ಜಿಲ್ಲೆಯಲ್ಲಿನ 410 ನ್ಯಾಯಬೆಲೆ ಅಂಗಡಿಗಳ ಮೂಲಕ 3,08,351 ಪಡಿತರ ಚೀಟಿಗಳ ಪೈಕಿ 2,78,578 ಪಡಿತರ ಚೀಟಿದಾರರಿಗೆ ಪಡಿತರ ವಿತರಣೆ ಮಾಡಲಾಗಿದೆ. 53,094 ಕ್ವಿಂಟಲ್‌ನಷ್ಟು ಪಡಿತರವನ್ನು ವಿತರಿಸಲಾಗಿದೆ. ಅವುಗಳ ಪೈಕಿ ಭಟ್ಕಳದಲ್ಲಿ 6,063.7 ಕ್ವಿಂ., ಕುಮಟಾದಲ್ಲಿ 6,183.9 ಕ್ವಿಂ, ಶಿರಸಿಯಲ್ಲಿ 5,995.91 ಕ್ವಿಂಟಲ್ ಪಡಿತರ ವಿತರಣೆ ಮಾಡಲಾಗಿದ್ದು, ಮೊದಲ ಮೂರು ಸ್ಥಾನಗಳಲ್ಲಿವೆ' ಎಂದೂ ತಿಳಿಸಿದ್ದಾರೆ.

### • ಪಾದಚಾರಿಗಳ ಸಂಚಾರಕ್ಕೆ ತೊಂದರೆ, ಕೆಲವೆಡೆ ವ್ಯಾಪಾರಿಗಳಿಂದ ಫುಟ್ಪಾತ್ ಅತಿಕ್ರಮಣ

## ಇದೇನು ಫುಟ್‌ಪಾತೋ, ಪಾರ್ಕಿಂಗ್ ಮೈದಾನವೋ?

• ಉದಯವಾಹಿನಿ ಬೆಳಗಾವಿ

ಪಾದಚಾರಿಗಳಿಗೆ ನಡೆದುಕೊಂಡು ಹೋಗಲು ನೆರವಾಗಲೆಂದು ಮಹಾನಗರ ಪಾಲಿಕೆ ಹಾಗೂ ಸ್ಮಾರ್ಟ್‌ಸಿಟಿ ವತಿಯಿಂದ ನಗರದ ವಿವಿಧೆಡೆ ನಿರ್ಮಿಸಿದ ಪಾದಚಾರಿ ಮಾರ್ಗಗಳು ಈಗ ವಾಹನ ನಿಲುಗಡೆ ತಾಣಗಳಾಗಿ ಮಾರ್ಪಟ್ಟಿವೆ.

ಇಲ್ಲಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಿಂದ ಧರ್ಮನಾಥ ಭವನ ಮಾರ್ಗವಾಗಿ ಶ್ರೀನಗರದ ರಾಷ್ಟ್ರೀಯ ಹೆದ್ದಾರಿಯ ಕೆಳ ಸೇತುವೆವರೆಗೆ ಸಾಗಿದರೆ, ರಸ್ತೆಯ ಎರಡೂ ಬದಿ ಫುಟ್‌ಪಾತ್‌ನಲ್ಲಿ ಸಾಲು ಸಾಲಾಗಿ ವಾಹನ ನಿಲ್ಲಿಸಿರುವುದು ಕಂಡುಬರುತ್ತದೆ. ದ್ವಿಚಕ್ರ ವಾಹನ, ಕಾರುಗಳಷ್ಟೇ ಅಲ್ಲ; ಖಾಸಗಿ ಬಸ್‌ಗಳನ್ನೂ ನಿರಾತಂಕವಾಗಿ ನಿಲ್ಲಿಸಲಾಗುತ್ತಿದೆ. ಸಂಗೊಳ್ಳಿ ರಾಯಣ್ಣ ವೃತ್ತದಿಂದ ಶ್ರೀಕೃಷ್ಣದೇವರಾಯ ವೃತ್ತಕ್ಕೆ ಸಾಗುವ ಮಾರ್ಗ, ಧರ್ಮನಾಥ ಭವನದಿಂದ ನೆಹರು ನಗರದ ಮಾರ್ಗ, ಸುಭಾಷ ನಗರದ ಮರಾಠ ಮಂಡಳ ಕಾಲೇಜು ಎದುರಿನ ಮಾರ್ಗ, ಕಾಲೇಜು ರಸ್ತೆ, ಶಿವಬಸವ ನಗರದ ಕೆಪಿಟಿಸಿಎಲ್ ರಸ್ತೆ ಮತ್ತು ಟಿಳಕವಾಡಿಯ ಮಹಾತ್ಮ ಗಾಂಧಿ ರಸ್ತೆ ಮತ್ತಿತರ ಮಾರ್ಗಗಳಲ್ಲೂ ಇದಕ್ಕಿಂತ ಪರಿಸ್ಥಿತಿ ಭಿನ್ನವಿಲ್ಲ.





ಉದಯವಾಹಿನಿ ಚಿತ್ರ

> ನಗರ ವಿವಿಧ ಫುಟ್‌ಪಾತ್‌ಗಳನ್ನು ಅತಿಕ್ರಮಿಸಿಕೊಂಡವರ ವಿರುದ್ಧ ಅಧಿಕಾರಿಗಳು ಕಠಿಣ ಕ್ರಮ ಜರುಗಿಸಬೇಕು. ಪಾದಚಾರಿ ಮಾರ್ಗದಲ್ಲಿ ಬೇಕಾಬಿಟ್ಟಿಯಾಗಿ ನಿಲ್ಲಿಸುವ ವಾಹನಗಳನ್ನು ಸಂಚಾರ ಪೊಲೀಸರು ವಶಕ್ಕೆ ಪಡೆದು, ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಬೇಕು
> – ವೀರೇಂದ್ರ ಗೊಬರಿ, ಸ್ಥಳೀಯ

> ನಗರದ ವಿವಿಧ ರಸ್ತೆಗಳಲ್ಲಿನ ಪಾದಚಾರಿ ಮಾರ್ಗ ಅತಿಕ್ರಮಿಸಿಕೊಂಡವರ ವಿರುದ್ಧ ಕ್ರಮ ಜರುಗಿಸುತ್ತಿದ್ದೇವೆ. ಯಾರೇ ನಿಯಮ ಉಲ್ಲಂಘಿಸಿದರೂ ಶಿಸ್ತು ಕ್ರಮ ವಹಿಸುತ್ತೇವೆ –ಬಿ.ಶುಭ,
> ಆಯುಕ್ತ, ಮಹಾನಗರ ಪಾಲಿಕೆ

> ಬೆಳಗಾವಿಯ ಕೆಲವು ಫುಟ್‌ಪಾತ್‌ಗಳ ಮೇಲಿನ ಅತಿಕ್ರಮಣ ಈಚೆಗೆ ತೆರವುಗೊಳಿಸಿದ್ದೇವೆ. ಈಗ ಮತ್ತೆ ಕಾರ್ಯಾಚರಣೆ ಚುರುಕುಗೊಳಿಸುತ್ತೇವೆ. ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿ ವಾಹನ ನಿಲುಗಡೆಗೆ ಬಳಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ
> – ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ನಗರ ಪೊಲೀಸ್ ಕಮಿಷನರ್

**ಆತಂಕದಲ್ಲೇ ಸಂಚಾರ:** ಕಳೆದೊಂದು ದಶಕದಲ್ಲಿ ಬೆಳಗಾವಿ ಮಹಾನಗರದಲ್ಲಿ ವಾಹನಗಳ ಸಂಖ್ಯೆ ಸಾಕಷ್ಟು ಹೆಚ್ಚಿದೆ. ಸವಾರರೂ ವೇಗವಾಗಿ ವಾಹನ ಓಡಿಸುತ್ತಿದ್ದಾರೆ ಎನ್ನುವ ಆರೋಪ ಕೇಳಿಬರುತ್ತಿವೆ. ಇದರಿಂದ ಪಾದಚಾರಿಗಳಿಗೆ ತೊಂದರೆ ಆಗಬಾರದು. ಅವರು ಸುರಕ್ಷಿತವಾಗಿ ನಡೆದುಕೊಂಡು ಹೋಗಲೆಂದು ಪಾದಚಾರಿ ಮಾರ್ಗಗಳನ್ನು ನಿರ್ಮಿಸಲಾಗಿದೆ. ಆದರೆ, ಈಗ ಅವುಗಳೆಲ್ಲ ಅತಿಕ್ರಮಣವಾದ ಕಾರಣ, ಪಾದಚಾರಿಗಳು ರಸ್ತೆಯಲ್ಲೇ ಆತಂಕದಿಂದ ಹೆಜ್ಜೆ ಹಾಕುತ್ತಿರುವುದು ಕಂಡುಬರುತ್ತಿದೆ. ಜತೆಗೆ ಸಂಚಾರ ಸಮಸ್ಯೆಯೂ ತಲೆದೋರುತ್ತಿದೆ.

### ಅತಿಕ್ರಮಣ ತೆರವು ವೇಗ ಪಡೆಯಲಿ: ಸಾರ್ವಜನಿಕರ ಒತ್ತಾಯ

ಬೆಳಗಾವಿಯ ಪ್ರಮುಖ ರಸ್ತೆಗಳಲ್ಲಿ ಪಾದಚಾರಿ ಮಾರ್ಗ ಅತಿಕ್ರಮಣ ಮಾಡಿಕೊಂಡಿದ್ದ ಅಂಗಡಿಗಳನ್ನು ಪಾಲಿಕೆ ಅಧಿಕಾರಿಗಳು ಮತ್ತು ಸಂಚಾರ ಪೊಲೀಸರು ಇತ್ತೀಚೆಗೆ ತೆರವುಗೊಳಿಸಿದ್ದಾರೆ. ಪರವಾನಗಿ ಇಲ್ಲದೆ ವ್ಯಾಪಾರ ನಡೆಸುತ್ತಿರುವ ಅಂಗಡಿಕಾರರಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಪಾಲಿಕೆ ಸಿಬ್ಬಂದಿ ಮತ್ತು ಸಂಚಾರ ಪೊಲೀಸರು ಆಗೊಮ್ಮೆ ಈಗೊಮ್ಮೆ ಅತಿಕ್ರಮಣ ತೆರವುಗೊಳಿಸಿದರೆ ಸಾಲದು. ಈ ಪ್ರಕ್ರಿಯೆಗೆ ವೇಗ ನೀಡಿ ಎಲ್ಲಾ ಪಾದಚಾರಿ ಮಾರ್ಗಗಳನ್ನು ಪಾದಚಾರಿಗಳ ಸಂಚಾರಕ್ಕೆ ಮುಕ್ತಗೊಳಿಸಬೇಕು' ಎಂಬುದು ಸಾರ್ವಜನಿಕರ ಒತ್ತಾಯ.

### ವ್ಯಾಪಾರಕ್ಕೆ ಬಳಕೆ

ಬೆಳಗಾವಿಯ ವಿವಿಧ ರಸ್ತೆಗಳಲ್ಲಿ ನಿರ್ಮಿಸಿದ ಪಾದಚಾರಿ ಮಾರ್ಗಗಳನ್ನು ತರಕಾರಿ ಹಣ್ಣು-ಹಂಪಲು ಪಾತ್ರೆಗಳು ಮತ್ತಿತರ ವಸ್ತುಗಳ ಮಾರಾಟಕ್ಕೆ ಬಳಕೆ ಮಾಡಲಾಗುತ್ತಿದೆ. ಫುಟ್‌ಪಾತ್ ಮೇಲೆಯೇ ಕುರ್ಚಿಗಳು ಮೇಜುಗಳನ್ನು ಇರಿಸಿ ಕೆಲವರು ವ್ಯಾಪಾರ ಮಾಡುತ್ತಿದ್ದಾರೆ. ಕೆಲವು ಕಂಪನಿಯವರು ತಮ್ಮ ಜಾಹೀರಾತು ಫಲಕಗಳನ್ನು ಇರಿಸಿ ನಗರದ ಮುಖ್ಯ ರಸ್ತೆಗಳಲ್ಲಿನ ಫುಟ್‌ಪಾತ್ ಅತಿಕ್ರಮಿಸಿಕೊಂಡಿದ್ದಾರೆ. ಆದರೆ ಪಾಲಿಕೆ ಅಧಿಕಾರಿಗಳು ಮತ್ತು ಸಂಚಾರ ಪೊಲೀಸರು ಕ್ರಮ ವಹಿಸದಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

## ಆಸ್ತಿ ಮಾಡಲು ರಾಜಕೀಯ ಸಲ್ಲ : ನಿವೃತ್ತ ನ್ಯಾ. ಸಂತೋಷ್ ಹೆಗ್ಡೆ

• ಉದಯವಾಹಿನಿ ಜಮಖಂಡಿ

ರಾಜಕೀಯಕ್ಕೆ ಬರುವವರು ಸೇವೆ ಮಾಡಲು ಬರಬೇಕು. ಆಸ್ತಿ ಮಾಡಲು ಬರಬಾರದು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಹೇಳಿದರು.

ನಗರದಲ್ಲಿ ಭಾನುವಾರ ಸಾಹಿತಿ ಶಿಶುಕವಿ ಪ್ರಕಾಶ ಮಠಪತಿ ಅವರ ಹೊಯ್ಸಳ ಗ್ರಂಥಾಲಯದಲ್ಲಿ ಮಾತನಾಡಿದ ಅವರು, ರಾಜಕಾರಣ ಎಂದರೆ ಹಣ ಗಳಿಸಿ ಶ್ರೀಮಂತರಾಗುವುದಲ್ಲ, ಸಾಮಾನ್ಯ ಜನರಿಗೆ ಸೇವೆ ಒದಗಿಸುವುದಾಗಿದೆ ಎಂದರು.

ಎಲ್ಲಾ ಪಕ್ಷಗಳು ಒಂದೇ ಶಾಲೆಯಿಂದ ಬಂದವು. ಆಮಿಷವೊಡ್ಡಿ ಜನರಿಂದ ಮತ ಪಡೆಯುತ್ತಿವೆ. ಶ್ರೀಮಂತರಾಗುವುದು ತಪ್ಪಲ್ಲ. ಆದರೆ ಅಕ್ರಮವಾಗಿ ಗಳಿಸಬಾರದು. ಸರ್ಕಾರದ ಸಂಪತ್ತನ್ನು ಅಕ್ರಮವಾಗಿ ಬಳಸಬಾರದು. ರಾಜಕಾರಣಕ್ಕೆ ಒಳ್ಳೆಯವರು ಬರಬೇಕು. ಒಳ್ಳೆಯ ಕಾರ್ಯ ಮಾಡುವವರು ರಾಜಕಾರಣದಲ್ಲಿ ಇರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

ಮೀಸಲಾತಿ ಲಾಭ ಪಡೆದ ಕುಟುಂಬದವರೇ ಮತ್ತೆ ಅದರ ಲಾಭ ಪಡೆಯುತ್ತಿದ್ದಾರೆ. ಸಚಿವರು, ಅಧಿಕಾರಿಗಳ ಮಕ್ಕಳೇ ಇದರ ಲಾಭ ಪಡೆಯುತ್ತಿದ್ದಾರೆ. ಕೆಳಹಂತದವರು ಅದರ ಲಾಭ ಪಡೆಯದೆ ಅವರು ಅಲ್ಲೇ ಇದ್ದಾರೆ. ಈಗ ಒಳ ಮೀಸಲಾತಿ ಹುಡುಕುತ್ತಿದ್ದಾರೆ. ಒಳ ಮೀಸಲಾತಿಯಲ್ಲೂ ಅದೇ ಆಗುತ್ತದೆ ಎಂದರು. ಲೋಕಾಯುಕ್ತರಿಂದ ಜನರಿಗೆ ಏನೆಲ್ಲ ಸಹಾಯ ಆಗುತ್ತದೆ ಎಂದು ನ್ಯಾಯಮೂರ್ತಿಯಾಗಿದ್ದ ಎನ್. ವೆಂಕಟಾಚಲ ಮತ್ತು ನಾನು ಜನರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಲೋಕಾಯುಕ್ತ ಸಂಸ್ಥೆ ಉತ್ತಮವಾದ ಸಂಸ್ಥೆಯಾಗಿದೆ. ಜನರಿಗಾಗುವ ಅನ್ಯಾಯಕ್ಕೆ ಪರಿಹಾರ ಕೊಡಿಸುವುದು, ಭ್ರಷ್ಟಾಚಾರದ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ಲೋಕಾಯುಕ್ತಕ್ಕೆ ಇದೆ. ಲೋಕಾಯುಕ್ತಕ್ಕೆ ಹಲ್ಲು ಇದೆ. ಆದರೆ ಕಚ್ಚಾಕ್ಕಾಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

### ಹೊಯ್ಸಳ ಗ್ರಂಥಾಲಯ ಕಾರ್ಯಕ್ಕೆ ಶ್ಲಾಘನೆ

ನಗರ ಸಮೀಪದ ಕಡಪಟ್ಟಿ ಹೊಯ್ಸಳ ಗ್ರಂಥಾಲಯಕ್ಕೆ ಭೇಟಿ ನೀಡಿದ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಮಾತನಾಡಿ, ಗ್ರಂಥಾಲಯ ಮೂಲಕ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮ ಪುಸ್ತಕಗಳನ್ನು ಒದಗಿಸಿದ್ದು, ಓದುವ ವಾತಾವರಣ ಸೃಷ್ಟಿಸಿದ್ದು ಶ್ಲಾಘನೀಯ ಎಂದರು.

> ನಾನು ಅಧಿಕಾರದಲ್ಲಿದ್ದಾಗ ನನಗೆ ಪಕ್ಷಕ್ಕೆ ಬರುವಂತೆ ಆಹ್ವಾನ ಬಂದಿತ್ತು. ಆದರೆ, ನಾನು ಅದಕ್ಕೆ ಸಹಮತಿಸಲಿಲ್ಲ. ನನ್ನ ಹತ್ತಿರ ಯಾರೂ ಬರಲ್ಲ. ನನ್ನನ್ನು ಕಂಡರೆ ಯಾರಿಗೂ ಆಗಲ್ಲ. ರಾಜಕೀಯ ಎಂದರೆ ಸೇವೆ. ಅದೊಂದು ವೃತ್ತಿ ಅಲ್ಲ. ಇವತ್ತು ಅದು ಉಲ್ಟಾ ಆಗಿದೆ –ಸಂತೋಷ ಹೆಗ್ಡೆ,
> ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ.

## ಜೇನುಕಲ್ ಸಿದ್ಧೇಶ್ವರ ಬೆಟ್ಟದಲ್ಲಿ ನ್ಯಾಯ ಬೆಲೆ ಅಂಗಡಿ ಮಾಲೀಕರಿಂದ ತಿಂಗಳ ಜಾತ್ರೆ ಪೂಜೆ ಪ್ರಸಾದ ವ್ಯವಸ್ಥೆ

• ಉದಯವಾಹಿನಿ ಅರಸೀಕೆರೆ

ಅರಸೀಕೆರೆ ತಾಲ್ಲೂಕು ಪಡಿತರ ವಿತರಕರ ಸಂಘದಿಂದ ರಾಜ್ಯದಲ್ಲಿಯೇ ಹೆಸರುವಾಸಿಯಾಗಿರುವ ಪ್ರತಿ ತಿಂಗಳ ಹುಣ್ಣಿಮೆಯ ಪೂಜೆಗೆ ರಾಜ್ಯಾದ್ಯಂತ ತನ್ನ ಭಕ್ತರನ್ನು ಎಳೆಯುತ್ತಾ ಕೋಟ್ಯಾಂತರ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ಬಗೆಹರಿಸಿ ಶ್ರೀ ಜೇನುಕಲ್ ಸಿದ್ದೇಶ್ವರ ಬೆಟ್ಟವನ್ನು ಏರಿ ಭಕ್ತಿಯಿಂದ ಪೂಜೆ ಸಲ್ಲಿಸಿದರೆ ತಮ್ಮ ಕಷ್ಟ ಕಾರ್ಪಣ್ಯಗಳು ದೂರವಾಗುತ್ತದೆ ಎಂಬ ಬಲವಾದ ನಂಬಿಕೆಯನ್ನು ಹೊಂದಿರುವ ಅರಸೀಕೆರೆ ತಾಲ್ಲೂಕಿನ ಶ್ರೀ ಜೇನುಕಲ್ ಸಿದ್ದೇಶ್ವರ ಸ್ವಾಮಿಯವರ ತಿಂಗಳ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನಡೆಯಿತು. ಈ ಜಾತ್ರಾ ಮಹೋತ್ಸವದಲ್ಲಿ ಭಾನುವಾರ ರಾತ್ರಿಯಿಂದಲೇ ಸೋಮವಾರ ಸಂಜೆಯವರೆಗೂ ಸಹ ಸಹಸ್ರಾರು ಭಕ್ತಾದಿಗಳು ಶ್ರೀ ಜೇನುಕಲ್ ಸಿದ್ದೇಶ್ವರ ಸ್ವಾಮಿಯ ಬೆಟ್ಟವನ್ನು ಏರಿ ಪೂಜೆ ಮತ್ತು ತಿಂಗಳ ಜಾತ್ರೆಯಲ್ಲಿ ಪಾಲ್ಗೊಂಡು ಪುನೀತರಾದರು. ಸಮಾಜ ಸೇವೆಯಲ್ಲಿ ನಿರಂತರ ಸೇವೆ ಸಲ್ಲಿಸುತ್ತಿರುವ ತಾಲ್ಲೂಕಿನ ಪಡಿತರ ವಿತರಕ ಸಂಘ ಪ್ರತಿ ವರ್ಷದಂತೆ ಈ ವರ್ಷವೂ ಸಹ ತಿಂಗಳ ಜಾತ್ರೆಯ ಪೂಜೆ ಮತ್ತು ಪ್ರಸಾದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.



ಉದಯವಾಹಿನಿ ಚಿತ್ರ



ಪಡಿತರ ವಿತರಕರ ಸಂಘದ ಅಧ್ಯಕ್ಷರಾದ ವೇದಮೂರ್ತಿ ಕಾರ್ಯದರ್ಶಿಗಳಾದ ರಾಮಸ್ವಾಮಿ ಉಪಾಧ್ಯಕ್ಷರಾದ. ಚನ್ನಾಪುರ ಶಿವರಾಜ್. ಖಜಾಂಚಿಗಳಾದ ಬಾಣಾವರ ಜಯಣ್ಣ. ತಳಲುತೊರೆ ಲೋಕೇಶ್ .ಹಾರನಹಳ್ಳಿ ದೇವರಾಜ್ ಸೇರಿದಂತೆ ಹಿರಿಯ ನ್ಯಾಯಬೆಲೆ ಅಂಗಡಿ ಮಾಲೀಕರಾದ ಶಂಕರಪ್ಪ. ಯಳವಾರೆ. ಕೇಶವಮೂರ್ತಿ. ಸೇರಿದಂತೆ ಹಲವಾರು ನ್ಯಾಯಬೆಲೆ ಅಂಗಡಿ ಮಾಲೀಕರು ಸಹ ಸ್ರಾರು ಭಕ್ತಾದಿಗಳಿಗೆ ಸ್ವಯಂಸೇವಕರಂತೆ ಪ್ರಸಾದ ವ್ಯವಸ್ಥೆಯಲ್ಲಿ ಪಾಲ್ಗೊಂಡರು.


ಆಹಾರ ಶಿರಸ್ತೇದಾರರಾದ ಬಾಲಚಂದ್ರ.ರವರು ಆಹಾರ ನಿರೀಕ್ಷಕರುಗಳಾದ.ಕುಮಾರ ಸ್ವಾಮಿ. ಮತ್ತು.ಶುಭಾರವರು ಗೋಡನ್ ವ್ಯವಸ್ಥಾಪಕರಾದ ಶ್ರೀನಾಥ್ ಪಡಿತರ ವಿತರಕರ ಸಂಘದಿಂದ ನಡೆದ ಪೂಜಾ ಮತ್ತು ಪ್ರಸಾದ ವ್ಯವಸ್ಥೆ ಸಮಾರಂಭದಲ್ಲಿ ಪಾಲ್ಗೊಂಡರು.

## ತಾಯಿಯು ದೇವರ ಪವಿತ್ರ ಸೃಷ್ಟಿ: ಸಂತೋಷ ಬಂಡೆ

• ಉದಯವಾಹಿನಿ ವಿಜಯಪುರ

ತಾಯಿಯು ದೇವರ ಪವಿತ್ರ ಸೃಷ್ಟಿ ಮತ್ತು ನಮಗೆ ಜೀವ ನೀಡುವ ಮೂಲ. ಅವಳು ನಿಸ್ವಾರ್ಥ ಪ್ರೀತಿ, ತ್ಯಾಗ, ಕ್ಷಮೆ ಮತ್ತು ತಾಳ್ಮೆಯ ಪವಿತ್ರ ಪ್ರತಿಮೆ. ಅವಳ ನಿಸ್ವಾರ್ಥ ಪ್ರೀತಿ ಮತ್ತು ಅಚಲ ಸಮರ್ಪಣೆಗೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು. ತಾಲ್ಲೂಕಿನ ನಾಗಠಾಣ ಗ್ರಾಮದ ಶ್ರೀ ಮಲ್ಲಿಕಾರ್ಜುನ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ 'ವಿಶ್ವ ತಾಯಂದಿರ ದಿನ' ವನ್ನು ಉದ್ಘಾಟಿಸಿ ಮಾತನಾಡಿದರು.

ವಾತ್ಸಲ್ಯದ ಮೂರ್ತಿಯಾದ ತಾಯಿಯು ತನ್ನ ಹಸಿವು, ದಣಿವು ಮರೆತು ಮಕ್ಕಳ ಸಂತೋಷ, ಗೆಲುವನ್ನು ತನ್ನ ಜೀವನದ ಗುರಿಯಾಗಿಸಿಕೊಂಡು ಅವಿರತವಾಗಿ ಶ್ರಮಿಸುವಳು. ಮಗುವಿನ ಭಾವನಾತ್ಮಕ ಮತ್ತು ಮಾನಸಿಕ ಬೆಳವಣಿಗೆಯನ್ನು ನಿರ್ಮಿಸುವ ಮೂಲಾಧಾರವೇ ತಾಯಿಯಾಗಿದ್ದಾಳೆ ಎಂದು ಹೇಳಿದರು. ಶಿಕ್ಷಣ ಪ್ರೇಮಿ ಸಾಹೇಬಲಾಲ ವಾಲೀಕಾರ ಮಾತನಾಡಿ, ಮಕ್ಕಳಿಗೆ ಸೂಕ್ತ ಮಾರ್ಗದಲ್ಲಿ ಮುನ್ನಡೆಸಿ, ಜೀವನದಲ್ಲಿ ಯಶಸ್ಸನ್ನು ಸಾಧಿಸಲು ಸಹಾಯ ಮಾಡುವ ಮಾರ್ಗದರ್ಶಕ ಆತ್ಮವೇ ತಾಯಿ. ಎಲ್ಲಾ ಸಂದರ್ಭಗಳಲ್ಲಿ ತನ್ನ ಮಗು ಮತ್ತು ಕುಟುಂಬಕ್ಕೆ ದೃಢವಾಗಿ ನಿಲ್ಲುವ ತಾಯಿಯ ಶುದ್ಧ ಮತ್ತು ಶ್ರದ್ಧಾಭರಿತವಾದ ಪ್ರೀತಿಗೆ ಸರಿಸಾಟಿ ಯಾವುದು ಇಲ್ಲ ಎಂದು ಹೇಳಿದರು.



ಉದಯವಾಹಿನಿ ಚಿತ್ರ

## ಅನಧಿಕೃತ ಅಂಗಡಿ ತೆರವಿಗೆ ನಿರ್ದೇಶನ

• ಉದಯವಾಹಿನಿ ಕಲಬುರಗಿ

ನಗರದ ಎಪಿಎಂಸಿಯಲ್ಲಿರುವ ಅನಧಿಕೃತ ಅಂಗಡಿಗಳನ್ನು ತೆರವುಗೊಳಿಸಲು ಈಗಲೆ ಕಾರ್ಯದರ್ಶಿಗಳಿಗೆ ಆದೇಶಿಸಿ ಅಂಗಡಿಗಳನ್ನು ಖಾಲಿ ಮಾಡಿಸಿ ವರದಿ ಸಲ್ಲಿಸಲು ಹೇಳಿದ್ದೇನೆ ಎಂದು ಕೃಷಿ ಮಾರುಕಟ್ಟೆ ಮಹಾಮಂಡಳಿ ನಿರ್ದೇಶಕ ಶಿವಾನಂದ ಕಾಪಾಸಿ ಹೇಳಿದ್ದಾರೆ.

ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂಎಸ್ ಪಾಟೀಲ ನರಿಬೋಳ ನೇತೃತ್ವದಲ್ಲಿ ವಿವಿಧ ಸಂಘಟನೆ ಮುಖಂಡರಾದ ಲಕ್ಷ್ಮೀಕಾಂತ ಸ್ವಾದಿ, ಸಿದ್ದು ಕಂದಗಲ್, ಶಂಕರ್ ಚೌಕಾಕಾಳಗಿ ಮೊದಲಾದವರ ನಿಯೋಗದೊಂದಿಗೆ ಅವರು ಮಾತನಾಡಿದರು. ಖಾಲಿ ಮಾಡಿಸುವವರೆಗೂ ಹೋರಾಟ ನಿರಂತರವಾಗಿ ಇರುತ್ತದೆ ಎಂದು ನಿಯೋಗದ ಮುಖಂಡರು ತಿಳಿಸಿದರು.

## ಅಂಗಡಿಗೆ ಸಿಸಿ ಕ್ಯಾಮರಾ ಕಡ್ಡಾಯ ಹಾಕದೆ ಹೋದ್ರೆ ಕ್ರಮ: ಪಿಎಸ್‌ಐ ಸಂಜಯ ತಿಪ್ಪರೆಡ್ಡಿ

• ಉದಯವಾಹಿನಿ ಮುದ್ದೇಬಿಹಾಳ

ಸಿಸಿ ಕ್ಯಾಮರಾ ಅಳವಡಿಸಿಕೊಳ್ಳದೇ ದಿನನಿತ್ಯ ದ ವ್ಯಾಪಾರ ಮಾಡುತ್ತಿರುವ ಅಂಗಡಿ ಮಾಲೀಕರಿಗೆ ಸಾಯಂಕಾಲ ಪಿಎಸ್‌ಐ ಸಂಜಯ ತಿಪ್ಪರೆಡ್ಡಿ ಹಾಗೂ ಪೊಲೀಸ್ ಸಿಬ್ಬಂದಿಗಳು ಕರ್ನಾಟಕ ಸಾರ್ವಜನಿಕ ಸುರಕ್ಷತೆ ಅಧಿನಿಯಮ 2017ರಡಿ ನೋಟಿಸ್ ನೀಡಿ ಅಂಗಡಿ ಮಾಲೀಕರಿಗೆ ಸಹಕರಿಸಬೇಕು ಎಂದು ಹೇಳಿದರು. ಕೆಲವು ಅಂಗಡಿಗಳಿಗೆ ಸಿಸಿ ಕ್ಯಾಮರಾ ಅಳವಡಿಸಿಕೊಂಡಿದ್ದಾರೆ ಇನ್ನೂ ಕೆಲವು ಅಂಗಡಿಗಲ್ಲಿ ಅಂಗಡಿಗಳಲ್ಲಿ ಸಿ ಸಿ ಕ್ಯಾಮರಾ ಅಳವಡಿಸಿಕೊಂಡಿಲ್ಲ. ಒಂದು ವಾರದಲ್ಲಿ ಅಂಗಡಿ ಒಳಗಡೆ ಹಾಗೂ ಹೊರಗಡೆ ಕ್ಯಾಮರಾ ಅಳವಡಿಸಿಕೊಳ್ಳಬೇಕೆಂದು ಹೇಳಿದರು. ತಮ್ಮ ಅಂಗಡಿ ಒಳಗೆ ಹಾಗೂ ಹೊರಗಡೆ ಸಂಪೂರ್ಣವಾಗಿ ಹಗಲು ಮತ್ತು ರಾತ್ರಿ ದೃಶ್ಯಗಳು ಸಂಗ್ರಹವಾಗುವಂತೆ ಕರ್ನಾಟಕ ಸಾರ್ವಜನಿಕ ಸುರಕ್ಷತೆಯ ನಿಯಮ-2017ರಲ್ಲಿ ಸೂಚಿಸಿದ ನಮೂನೆಯ ಸಿಸಿ ಕ್ಯಾಮರಾಗಳನ್ನು ಅಳವಡಿಸಬೇಕು. ಒಂದು ತಿಂಗಳಿನ ದೃಶ್ಯಾವಳಿಗಳ ಸಂಗ್ರಹ ಇರಬೇಕು. ತಮ್ಮ ಅಂಗಡಿಯಲ್ಲಿ ಎಷ್ಟು ಜನ ಸೆಕ್ಯೂರಿಟಿ ಗಾರ್ಡ್‌ಗಳನ್ನು ಯಾವ ಏಜೆನ್ಸಿಯಿಂದ ನೇಮಕ ಮಾಡಿಕೊಂಡಿರುವ ಮಾಹಿತಿ ಪೊಲೀಸ್ ಠಾಣೆಗೆ ನೀಡಬೇಕು ಮತ್ತು ಅಂಗಡಿಯ ನೀಲಿ ನಕ್ಷೆ ಸಹ ನೀಡಬೇಕು.



ಉದಯವಾಹಿನಿ ಚಿತ್ರ

> ನೋಟೀಸ್ ನೀಡಿದ 7 ದಿನಗಳ ಒಳಗಾಗಿ ಅಂಗಡಿ ಮಾಲೀಕರು ಸಿಸಿ ಕ್ಯಾಮರಗಳನ್ನು ಅಳವಡಿಸಿಕೊಳ್ಳಬೇಕು. ಪಾಲನೆ ಮಾಡದೇ ಹೋದ್ರೆ 10,000 ರೂ. ದಂಡ ವಿಧಿಸಲಾಗುವುದು. ಕಾರಣ ಕರ್ನಾಟಕ ಸಾರ್ವಜನಿಕ ಸುರಕ್ಷತೆಯ ಅಧಿನಿಯಮ-2017ರಲ್ಲಿ ಬರುವ ಅಂಶಗಳನ್ನು ಪಾಲಿಸಿ ಈ ನೋಟಿಸ್ ಮುಟ್ಟಿದ ಏಳು ದಿನದಲ್ಲಿ ಮಾಹಿತಿಯನ್ನು ಪೊಲೀಸ್ ಠಾಣೆಗೆ ಸಲ್ಲಿಸಬೇಕೆಂದು ಅಂಗಡಿ ಮಾಲೀಕರಿಗೆ ನೋಟಿಸ್‌ನಲ್ಲಿ ತಿಳಿಸಲಾಗಿದೆ -ಸಂಜಯ ತಿಪ್ಪರೆಡ್ಡಿ , ಪಿಎಸ್‌ಐ ಮುದ್ದೇಬಿಹಾಳ

### ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣ

## ನೀರಿನ ಸಮಸ್ಯೆ: ಖಾಸಗಿ ಕೊಳವೆಬಾವಿ ಬಾಡಿಗೆ ಪಡೆದು ನೀರು ಸರಬರಾಜು

• ಉದಯವಾಹಿನಿ ಹಾನಗಲ್

ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುತ್ತಿದೆ. ಖಾಸಗಿ ಕೊಳವೆಬಾವಿಗಳನ್ನು ಆಶ್ರಯಿಸುವ ಅನಿವಾರ್ಯತೆ ಎದುರಾಗುತ್ತಿದೆ.

ಅಂಗವಿಕಲರ ಹಕ್ಕುಗಳ ಹೋರಾಟಗಾರ ನಿರೀಕ್ಷೆಯಂತೆ ಮಳೆ ಬೀಳದ ಕಾರಣಕ್ಕಾಗಿ ಗ್ರಾಮಗಳಲ್ಲಿ ನೀರು ಪೂರೈಸಲು ಸ್ಥಳೀಯ ಆಡಳಿತ ಮತ್ತು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಹರಸಾಹಸ ಪಡುತ್ತಿದೆ.

**ವಾಡಿಕೆಯಷ್ಟು ಉತ್ತಮ ಮಳೆಯಾಗಿಲ್ಲ**

ತಾಲ್ಲೂಕಿನ 7 ಗ್ರಾಮಗಳಲ್ಲಿ 8 ಖಾಸಗಿ ಕೊಳವೆಬಾವಿಯನ್ನು ಬಾಡಿಗೆ ಪಡೆದು ಅವುಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ತಾಲ್ಲೂಕಿನ 52 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಇರುವುದಾಗಿ ಗುರುತಿಸಲಾಗಿದೆ. ಗಿರಿಸಿನಕೊಪ್ಪ, ಗುರುರಾಯಪಟ್ಟಣ, ನೀರಲಗಿ, ಗಡೆಗುಂಡಿಯಲ್ಲಾಪೂರ, ಹೊಂಕಣ, ಬೈಚವಳ್ಳಿ, ಆಲದಕಟ್ಟಿ ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಆಧಾರದಲ್ಲಿ ಪಡೆದು ನೀರು ಪೂರೈಕೆಗೆ ವ್ಯವಸ್ಥೆ ಮಾಡಲಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ, ಈ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಕ್ಕಮಟ್ಟಿಗೆ ಹತೋಟಿಯಲ್ಲಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಕಳೆದ ಸಾರಿ ಇದೇ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ 50 ಗ್ರಾಮ ಗಳಲ್ಲಿ 78 ಖಾಸಗಿ ಕೊಳವೆಬಾವಿ ಆಶ್ರಯಿಸಲಾಗಿತ್ತು. ಆ ಸಮಯದಲ್ಲಿ ಹೊಸದಾಗಿ ಕೊರೆಸಿದ ಕೊಳವೆ ಬಾವಿಗಳೂ ಬತ್ತಿದ್ದವು.

ಸದ್ಯಕ್ಕೆ ವರದಾ ಮತ್ತು ಧರ್ಮಾ ನದಿಯಲ್ಲಿ ನೀರಿಲ್ಲ. ವರದಾ ನದಿ ನೀರನ್ನು ಅವಲಂಬಿಸಿ ಚಾಲ್ತಿಯಲ್ಲಿರುವ ಕೂಡಲ, ಕೂಸನೂರ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಪುನಶ್ಚೇತನ ಕಾಮಗಾರಿಯ ನೆಪದಲ್ಲಿ ಬಂದ್ ಸ್ಥಿತಿಯಲ್ಲಿವೆ. ಚಾಲ್ತಿಯಲ್ಲಿರುವ ಉಪ್ಪಣಶಿ, ಚಿಕ್ಕಾಂಶಿ ಹೊಸೂರ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ನದಿ ನೀರಿನ ಅಭಾವದಿಂದ ಬಂದ್ ಆಗುವ ದಿನಗಳೂ ದೂರವಿಲ್ಲ. ಕಳೆದ ವರ್ಷ ಸುರಿದ



ಉದಯವಾಹಿನಿ ಚಿತ್ರ

ಉತ್ತಮ ಮಳೆಯಿಂದಾಗಿ ಧರ್ಮಾ, ವರದಾ ನದಿಗಳು ತುಂಬಿ ಹರಿದಿದ್ದವು. ಬಾಳಂಬೀಡ, ಹಿರೇಕಾಂಶಿ ಏತ ನೀರಾವರಿ ಯೋಜನೆಗಳು ಚಾಲನೆಗೊಂಡು ನೂರಾರು ಕೆರೆಗಳು ಭರ್ತಿಯಾಗಿದ್ದ ಪರಿಣಾಮವಾಗಿ ಈ ಬೇಸಿಗೆಯ ಆರಂಭದಲ್ಲಿಯೂ ಅಂತರ್ಜಲಮಟ್ಟ ಸುಧಾರಿತ ಸ್ಥಿತಿಯಲ್ಲಿತ್ತು. ಆದರೆ, ಹಾನಗಲ್ ತಾಲ್ಲೂಕಿನಲ್ಲಿ ವಾಡಿಕೆಯಷ್ಟು ಉತ್ತಮ ಮಳೆಯಾಗಿಲ್ಲ.

ಮಾರ್ಚ್ ಅಂತ್ಯ ಮತ್ತು ಏಪ್ರಿಲ್ ಆರಂಭದ ಮೊದಲ ವಾರದಲ್ಲಿ ಸಂಜೆಯಾಗುತ್ತಲೇ ಮಳೆಯ ಮೋಡಗಳ ಆರ್ಭಟ ಶುರುವಾಗುತ್ತಿತ್ತು. ಆಗಲೂ ವರುಣ ಕೃಪೆ ತೋರಲಿಲ್ಲ.

ಅಲ್ಲಿಂದ ಈಗ ಮೇ ತಿಂಗಳು ಆರಂಭಗೊಂಡರೂ ಮಳೆ ಮರೀಚಿಕೆಯಾಗಿದೆ. ಮಾರ್ಚ್ ಆರಂಭದಿಂದಲೇ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳ ಪಟ್ಟಿ ಮಾಡಿದ್ದೇವೆ. ನಿರೀಕ್ಷೆಯಂತೆ ಮಳೆ ಬಂದಿದ್ದರೆ, ಕೊಳವೆಬಾವಿಗಳು ಪುನಶ್ಚೇತನಗೊಳ್ಳುತ್ತಿದ್ದವು. ಈಗ ಮೇನಿಂದ ನೀರಿನ ಅಭಾವ ಅಲ್ಲಲ್ಲಿ ಸೃಷ್ಟಿಯಾಗುತ್ತಿದೆ. ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಪಡೆಯಲು ಮುಂಚಿತವಾಗಿ ಗುರುತಿಸಿಟ್ಟುಕೊಳ್ಳಲಾಗಿದೆ. ನೀರಿನ ಸಮಸ್ಯೆ ನಿಭಾಯಿಸಲು ಅನುದಾನದ ಕೊರತೆಯಿಲ್ಲ. ಆದರೆ, ಈತನಕ ಟ್ಯಾಂಕರ್ ಮೂಲಕ ನೀರೊದಗಿಸುವ ಸ್ಥಿತಿ ಬಂದಿಲ್ಲ' ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಎಇಇ ಚಂದ್ರಶೇಖರ ನೆಗಳೂರ ಹೇಳಿದರು.

ಗೆಜ್ಜಿಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಎ.ಎಂ. ಯಲವಿಗಿ, 'ಗೆಜ್ಜಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಿರಿಸಿನಕೊಪ್ಪ ಮತ್ತು ಗುರುರಾಯಪಟ್ಟಣ ಗ್ರಾಮಕ್ಕೆ ಕಳೆದ ತಿಂಗಳು ಕುಡಿಯುವ ನೀರಿನ ಸಮಸ್ಯೆ ಉಂಟಾಗಿತ್ತು. ಸ್ಥಳೀಯ ಕೊಳವೆಬಾವಿಯನ್ನು ಬಾಡಿಗೆ ಪಡೆದು ಗ್ರಾಮಗಳ ಮೇಲ್ಮಟ್ಟದ ಜಲಾಗಾರಕ್ಕೆ ನೀರು ಪೂರೈಕೆ ಮಾಡಲಾಗುತ್ತಿದೆ' ಎಂದರು.

### ಕೊಳವೆಬಾವಿ ಬಾಡಿಗೆ ಪಡೆದು ನೀರು ಸರಬರಾಜು

ನೀರಲಗಿ ಗ್ರಾಮದಲ್ಲಿ ಸ್ಥಳೀಯ ಆಡಳಿತದ ಕೊಳವೆಬಾವಿಗಳು ಬತ್ತಿದ ಸಂದರ್ಭದಲ್ಲಿ ತೆರೆದ ಕೊಳವೆಬಾವಿಯನ್ನು ನಿರ್ಮಿಸಿ ನೀರಿನ ದಾಹ ನೀಗಿಸುವ ಕೆಲಸ ನಾಲ್ಕೈದು ವರ್ಷದಿಂದ ನಡೆದುಕೊಂಡು ಬಂದಿದೆ. ಪ್ರತಿ ಬೇಸಿಗೆಯಲ್ಲಿ ಈ ತೆರೆದ ಕೊಳವೆಬಾವಿಯ ಜಲ ನಿಸ್ತೇಜಗೊಳ್ಳುತ್ತದೆ. ಹೀಗಾಗಿ ಸಮೀಪದ ರೈತರ ಕೊಳವೆಬಾವಿಯನ್ನು ಬಾಡಿಗೆ ಪಡೆದು ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಸಮ್ಮಸಗಿ ಗ್ರಾಮ ಪಂಚಾಯಿತಿ ಪಿಡಿಒ ಹನುಮಂತ ತಹಶೀಲ್ದಾರ್ ಹೇಳಿದರು.

## ಪುರಾಣಗಳಿಂದ ದೈವ ಭಕ್ತಿಯ ಶಕ್ತಿ ಹೆಚ್ಚುತ್ತದೆ:ಅಣಕಲ್

• ಉದಯವಾಹಿನಿ ಕಾಳಗಿ

ಪುರಾಣಗಳಿಂದ ದೇವ ಭಕ್ತಿಯ ಶಕ್ತಿ ಹೆಚ್ಚುತ್ತದೆ, ಕಾಳಿದಾಸ, ಕನಕದಾಸ ಕುರುಬ ಸಮಾಜದವರು ಹಾಲುಮತ ಸಮಾಜ ಸರ್ವ ಸಮಾಜದವರನ್ನು ಗೌರವದಿಂದ ಕಾಣುವ ಸಮಾಜ ಆಗಿದೆ ಎಂದು ಕರ್ನಾಟಕ ಪ್ರದೇಶದ ಕುರುಬ ಸಂಘದ ಕಾಳಗಿ ತಾಲ್ಲೂಕಿನ ಅಧ್ಯಕ್ಷರಾದ ರೇವಣಸಿದ್ದಪ್ಪ ಅಣಕಲ್ ಹೇಳಿದ್ದರು. ಗಡಿಕೇಶ್ವಾರ ಗ್ರಾಮದಲ್ಲಿ 2ನೇ ವರ್ಷದ ಶ್ರೀ ಹುಲಜಂತಿ ಮಾಳಿಂಗರಾಯರ 11 ದಿನಗಳ ಮಹಾಪುರಣ ಮುಕ್ತಾಯ ಸಮಾರಂಭ ಹಾಗೂ ಧರ್ಮ ಸಭೆಯನ್ನು ಗ್ರಾಮದ ಬೀರಲಿಂಗೇಶ್ವರ ದೇವಾಲಯದಲ್ಲಿ ಹಮ್ಮಿಕೊಂಡ ಸಂದರ್ಭದಲ್ಲಿ ಮಾತನಾಡಿದ ಅವರು ಹಾಲು ಕೆಡಬಹುದು ಆದರೆ ಹಾಲುಮತ ಸಮಾಜ ಎಂದಿಗೂ ಕೆಡುವುದಿಲ್ಲ, ವಿದ್ಯಾ, ಶ್ರೀಮಂತಿಕ್ಕಿಂತ ದೇವರ ಬಗ್ಗೆ ಇರುವ ಭಕ್ತಿ ಪ್ರಿತಿಯ ಶಕ್ತಿ ದೊಡ್ಡದು ಎಂದು ಹೇಳಿದ್ದರು. ಪುರಾಣಕತೆಗಳನ್ನು ಪೂಜ್ಯ ಪಾದಶ್ರೀ ಅಭಿನವ ಸಿದ್ದ ರತ್ನ ಮದಗೊಂಡೇಶ್ವ ಮಹಾರಾಜರು 11 ದಿನಗಳ ಕಾಲ ಪ್ರಭಾವಶಾಲಿಯಾಗಿ ವರ್ಣಿಸಿದರು.

ಅವರ ಆಧ್ಯಾತ್ಮಿಕ ಪ್ರಭಚನಗಳು ಶ್ರದ್ಧಾ, ಭಕ್ತಿ ಮತ್ತು ಜೀವನದ ಮೌಲ್ಯಗಳನ್ನು ಭಕ್ತರಲ್ಲಿ ತಿಳಿ ಹೇಳಿದ್ದರು.

## ಪಾಕ್ ಮೂಲದ ಸಂಖ್ಯೆಯಿಂದ ಅನುಮಾನಾಸ್ಪದ ವಾಟ್ಸಾಪ್ ಸಂದೇಶ: ಪೊಲೀಸರಿಂದ ಎಚ್ಚರಿಕೆ

• ಉದಯವಾಹಿನಿ ಕಾರ್ಕಳ

ಪಾಕಿಸ್ತಾನ ಮೂಲದ ಸಂಖ್ಯೆಯಿಂದ ಕಾರ್ಕಳದ ಯುವಕನೋರ್ವನಿಗೆ ಅನುಮಾನಾಸ್ಪದ ವಾಟ್ಸಾಪ್ ಸಂದೇಶ ಬಂದಿರುವುದಾಗಿ ವರದಿಯಾಗಿದೆ. ಈ ಬಗ್ಗೆ ತಕ್ಷಣವೇ ಆತ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ.

ಈ ಘಟನೆಯ ಬೆನ್ನಲ್ಲೇ ''ಅಂತರಾಷ್ಟ್ರೀಯ ಸಂಖ್ಯೆಗಳಿಂದ ಬರುವ ಅನುಮಾನಾಸ್ಪದ ಸಂದೇಶಗಳು ಅಥವಾ ಲಿಂಕ್‌ಗಳಿಗೆ ಪ್ರತಿಕ್ರಿಯಿಸಬೇಡಿ. ಯಾವುದೇ ಕಾರಣಕ್ಕೂ ವೈಯಕ್ತಿಕ ಮಾಹಿತಿ ಅಥವಾ ಒಟಿಪಿಗಳನ್ನು ಹಂಚಿಕೊಳ್ಳಬೇಡಿ ಎಂದು ಉಡುಪಿ ಜಿಲ್ಲಾ ಪೊಲೀಸರು ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ.

ಸಂಭಾವ್ಯ ಸೈಬರ್ ಬೆದರಿಕೆಗಳ ಬಗ್ಗೆ ಎಚ್ಚರಿಕೆಯಿಂದಿರುವಂತೆ ಪೊಲೀಸರು ಸಾರ್ವಜನಿಕರಿಗೆ ಸೂಚನೆ ನೀಡಿದ್ದಾರೆ.

ಇಂತಹ ಯಾವುದೇ ಘಟನೆಗಳು ಕಂಡುಬಂದಲ್ಲಿ ತಕ್ಷಣವೇ ವರದಿ ಮಾಡುವಂತೆ ಕೋರಿದ್ದಾರೆ. ತುರ್ತು ಪರಿಸ್ಥಿತಿಗಳು ಅಥವಾ ಸೈಬರ್ ಅಪರಾಧಗಳ ಕುರಿತು ದೂರು ನೀಡಲು 1930 ಗೆ ಕರೆ ಮಾಡಿ, ಅಥವಾ ಹತ್ತಿರದ ಪೊಲೀಸ್ ಠಾಣೆಗೆ ದೂರು ನೀಡಿ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಉದಯ ವಾಹಿನಿ
ಪ್ರಾದೇಶಿಕ
ಮಂಗಳವಾರ 13 ಮೇ 2025


## ಅಮೆರಿಕದಲ್ಲಿ ಪ್ರಿಸ್ಕ್ರಿಪ್ಷನ್ ಔಷಧಿಗಳ ಬೆಲೆ ಕಡಿತಗೊಳಿಸಲು ಟ್ರಂಪ್ ಹೊಸ ಪ್ಲಾನ್; ಶೇ.30ರಿಂದ 80ರಷ್ಟು ಇಳಿಕೆ

# ಇತರ ದೇಶಗಳು ಕಡಿಮೆ ಬೆಲೆಗೆ ಔಷಧ ಕೊಂಡು ಲಾಭ ಪಡೆಯುತ್ತಿವೆ

**ವಾಷಿಂಗ್ಟನ್:** ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಮೆರಿಕಾದಲ್ಲಿ ಪ್ರಿಸ್ಕ್ರಿಪ್ಷನ್ ಔಷಧ ಮತ್ತು ಫಾರ್ಮಾಸ್ಯುಟಿಕಲ್ ಬೆಲೆಗಳನ್ನು ಶೇ.80ರಷ್ಟು ಇಳಿಕೆ ಮಾಡಲು ನಿರ್ಧರಿಸಿ, ಎಕ್ಸ್‌ನಲ್ಲಿ ಈ ಬಗ್ಗೆ ಪೋಸ್ಟ್ ಹಂಚಿಕೊಂಡಿದ್ದಾರೆ. ಶೇ.80ರಷ್ಟು ಇಳಿಕೆ ಮಾಡ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಲು ಯೋಜಿಸಿದ್ದಾರೆ. ಮೇ 11 ರಂದು ಈ ಬಗ್ಗೆ ಘೋಷಣೆ ಮಾಡಿದ್ದಾರೆ. ಅಮೆರಿಕದಲ್ಲಿ ಔಷಧಿಗಳ ಬೆಲೆಗಳು ಬೇರೆ ದೇಶಗಳಿಗಿಂತ ಹೆಚ್ಚಾಗಿವೆ. ಇದನ್ನು ಸರಿಪಡಿಸಲು ಟ್ರಂಪ್ ಈ ಕ್ರಮ ಕೈಗೊಂಡಿದ್ದಾರೆ. ಅತ್ಯಂತ ಅನುಕೂಲಕರ ರಾಷ್ಟ್ರ ನೀತಿಯನ್ನು ಜಾರಿಗೆ ತರಲು ಟ್ರಂಪ್ ಇಚ್ಛಿಸಿದ್ದಾರೆ.

**ಶೇ.80ರಷ್ಟು ಔಷಧದ ಬೆಲೆ ಇಳಿಕೆ ಪ್ಲಾನ್:** ಡೊನಾಲ್ಡ್ ಟ್ರಂಪ್ ಅವರು ಅಮೆರಿಕವನ್ನು ಮತ್ತೆ ನ್ಯಾಯಯುತವಾಗಿಸಲು ಹೊರಟಿದ್ದಾರೆ. ಪ್ರಿಸ್ಕ್ರಿಪ್ಷನ್ ಡ್ರಗ್ ಮತ್ತು ಫಾರ್ಮಾಸ್ಯುಟಿಕಲ್ ಬೆಲೆಗಳನ್ನು ತಕ್ಷಣವೇ ಶೇ.80ರಷ್ಟು ಕಡಿಮೆ ಮಾಡಲು ಒಂದು ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಲಿದ್ದಾರೆ. ಬೆಲೆ ಕಡಿತಗಳು ತಕ್ಷಣವೇ ಜಾರಿಗೆ ಬರುತ್ತವೆ ಎಂದು ಭರವಸೆ ನೀಡಿದ್ದಾರೆ. ಅಮೆರಿಕದಲ್ಲಿ ಔಷಧಿಗಳ ಬೆಲೆಗಳು ಇತರ ದೇಶಗಳಿಂತ



ಹೆಚ್ಚಾಗಿವೆ. ಇದು ಬಹಳ ಸಮಯದಿಂದ ಇರುವ ಸಮಸ್ಯೆ. ಇದನ್ನು ಪರಿಹರಿಸಲು ಟ್ರಂಪ್ ಮುಂದಾಗಿದ್ದಾರೆ.

ಟ್ರಂಪ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಟ್ರುತ್ ಸೋಶಿಯಲ್‌ನಲ್ಲಿ ಒಂದು ಪೋಸ್ಟ್ ಮಾಡಿದ್ದಾರೆ. ಅದರಲ್ಲಿ ಅಮೆರಿಕಾದಲ್ಲಿ ಪ್ರಿಸ್ಕ್ರಿಪ್ಷನ್ ಡ್ರಗ್ ಬೆಲೆಗಳ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಬೇರೆ ದೇಶಗಳಲ್ಲಿ ತಯಾರಾಗುವ ಔಷಧಿಗಳಿಗಿಂತ ಐದರಿಂದ ಹತ್ತು ಪಟ್ಟು ಹೆಚ್ಚು ಬೆಲೆ ಇಲ್ಲಿ ಇರುತ್ತದೆ. ಬೇರೆ ಯಾವುದೇ ರಾಷ್ಟ್ರಕ್ಕಿಂತ ಪ್ರಿಸ್ಕ್ರಿಪ್ಷನ್ ಡ್ರಗ್, ಫಾರ್ಮಾಸ್ಯುಟಿಕಲ್ ಬೆಲೆಗಳು ಅಮೆರಿಕದಲ್ಲಿ ಏಕೆ ಹೆಚ್ಚಿವೆ ಎಂದು ಟ್ರಂಪ್ ಪ್ರಶ್ನೆ ಮಾಡಿದ್ದಾರೆ. ಈ ಬೆಲೆ ವ್ಯತ್ಯಾಸಗಳಿಗೆ ಸರಿಯಾದ ಕಾರಣಗಳಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಇತರ ದೇಶಗಳು ಕಡಿಮೆ ಬೆಲೆಗೆ ಔಷಧ ಕೊಂಡು ಲಾಭ ಪಡೆಯುತ್ತಿವೆ:** ಔಷಧ ಕಂಪನಿಗಳು ಔಷಧಿಗಳ ಹೆಚ್ಚಿನ ಬೆಲೆಗೆ ಸಂಶೋಧನೆ, ಅಭಿವೃದ್ಧಿ ವೆಚ್ಚಗಳನ್ನು ಕಾರಣವಾಗಿ ಹೇಳುತ್ತಾರೆ. ಆದರೆ ಅಮೆರಿಕನ್ನರು ಈ ವೆಚ್ಚವನ್ನು ಭರಿಸುತ್ತಾರೆ. ಅಮೆರಿಕದ ಔಷಧ ಗಳು ಇಷ್ಟು ದುಬಾರಿಯಾಗಿ ಯಾಕಿವೆ ಎಂದು ಜಗತ್ತು ಪ್ರಶ್ನಿಸುತ್ತಿದೆ. ಇತರ ದೇಶಗಳು ಕಡಿಮೆ ಬೆಲೆಯಲ್ಲಿ ಲಾಭ ಪಡೆಯುತ್ತವೆ ಎಂದು ಟ್ರಂಪ್ ಟೀಕಿಸಿದ್ದಾರೆ. ಈ ಸಮಸ್ಯೆಗಳನ್ನು




ಕಡಿಮೆ ಮಾಡಲು, ಹೊಸ ಬೆಲೆ ರಚನೆಯು ಅಮೆರಿಕದಲ್ಲಿ ಡ್ರಗ್ ಬೆಲೆಗಳನ್ನು ಕಡಿಮೆ ಮಾಡುತ್ತದೆ. ಜೊತೆಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಇದು ಹೆಚ್ಚು ಸಮಾನವಾದ ವ್ಯವಸ್ಥೆಯನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ. ಅಮೆರಿಕದಲ್ಲಿ ಮಾರಾಟವಾಗುವ ಔಷಧಿಗಳ ಬೆಲೆಯನ್ನು ಇತರ ದೇಶಗಳು ಅದೇ ಔಷಧಿಗೆ ಪಾವತಿಸುವ ಕಡಿಮೆ ಬೆಲೆಗೆ ನಿಗದಿಪಡಿಸುವ ಅತ್ಯಂತ ಅನುಕೂಲಕರ ರಾಷ್ಟ್ರ ನೀತಿಯನ್ನು ಸ್ಥಾಪಿಸಲು ಅವರು ಯೋಜಿಸಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ. ಅಮೆರಿಕದಲ್ಲಿ ಪ್ರಿಸ್ಕ್ರಿಪ್ಷನ್ ಡ್ರಗ್ ಬೆಲೆಗಳ ಕಡಿತವನ್ನು ಇತರ ದೇಶಗಳಲ್ಲಿನ ಹೆಚ್ಚಿನ ಬೆಲೆಗಳಿಂದ ಸರಿದೂಗಿಸಲಾಗುತ್ತದೆ ಎಂದು ಅವರು ಹೇಳಿದರು. ಪ್ರಿಸ್ಕ್ರಿಪ್ಷನ್ ಡ್ರಗ್ ಮತ್ತು ಫಾರ್ಮಾಸ್ಯುಟಿಕಲ್ ಬೆಲೆಗಳು ತಕ್ಷಣವೇ ಶೇ.30 ರಿಂದ ಶೇ.80 ರಷ್ಟು ಕಡಿಮೆಯಾಗುತ್ತವೆ. ಹಲವು ವರ್ಷಗಳಲ್ಲಿ ಮೊದಲ ಬಾರಿಗೆ ಅಮೆರಿಕಕ್ಕೆ ನ್ಯಾಯವನ್ನು ತರುತ್ತವೆ. ಎಂದು ಅವರು ಘೋಷಿಸಿದರು. ಅತ್ಯಂತ ಅನುಕೂಲಕರ ರಾಷ್ಟ್ರ ಸ್ಥಾನವು ವಿಶ್ವ ವ್ಯಾಪಾರ ಸಂಸ್ಥೆಯ ನಿಯಮವಾಗಿದೆ. ಇದು ಒಂದು ದೇಶ ಮತ್ತು ಅದರ ವ್ಯಾಪಾರ ಪಾಲುದಾರರ ನಡುವೆ ತಾರತಮ್ಯವನ್ನು ತಡೆಯುವ ಗುರಿಯನ್ನು ಹೊಂದಿದೆ. ಇದು ಅಂತರಾಷ್ಟ್ರೀಯ ವ್ಯಾಪಾರಕ್ಕೆ ಸಮಾನವಾದ ಅವಕಾಶವನ್ನು ನೀಡುತ್ತದೆ.

**ಅಮೆರಿಕದಲ್ಲಿ ದುಬಾರಿ ಔಷಧ ಯಾವುವು?**

**2025ರಂತೆ, ಅಮೆರಿಕಾದಲ್ಲಿ ಸಾಮಾನ್ಯವಾಗಿ ಬಳಸುವ ಮತ್ತು ದುಬಾರಿ ಪ್ರಿಸ್ಕ್ರಿಪ್ಷನ್ ಡ್ರಗ್‌ಗಳು ಮಧುಮೇಹ, ಹೃದಯರಕ್ತನಾಳದ ಕಾಯಿಲೆಗಳು ಮತ್ತು ಸ್ವಯಂ ನಿರೋಧಕ ಕಾಯಿಲೆಗಳಂತಹ ದೀರ್ಘಕಾಲದ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ. ಅಮೆರಿಕನ್ ಜರ್ನಲ್ ಆಫ್ ಹೆಲ್ತ್-ಸಿಸ್ಟಮ್ ಫಾರ್ಮಸಿಯಲ್ಲಿ ಏಪ್ರಿಲ್ 24 ರಂದು ಪ್ರಕಟವಾದ ಅಧ್ಯಯನದ ಪ್ರಕಾರ, ಅಮೆರಿಕಾ 2023 ರಲ್ಲಿ ಪ್ರಿಸ್ಕ್ರಿಪ್ಷನ್ ಡ್ರಗ್‌ಗಳಿಗಾಗಿ 722 ಬಿಲಿಯನ್ ಡಾಲರ್ ಗಿಂತ ಹೆಚ್ಚು ಖರ್ಚು ಮಾಡಿದೆ. ಇದು 2022 ರಿಂದ 13.6% ಹೆಚ್ಚಳವಾಗಿದೆ. ಇದು 20 ವರ್ಷಗಳಲ್ಲಿ ಅತಿ ದೊಡ್ಡ ಏರಿಕೆಯಾಗಿದೆ. ಈ ಔಷಧಿಗಳನ್ನು ವ್ಯಾಪಕವಾಗಿ ಸೂಚಿಸಲಾಗುತ್ತದೆ ಮತ್ತು ಆರೋಗ್ಯ ರಕ್ಷಣಾ ವೆಚ್ಚಗಳಿಗೆ ಗಣನೀಯವಾಗಿ ಕೊಡುಗೆ ನೀಡುತ್ತವೆ.**

## ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಶ್ರಮಿಸುವೆ

**ನ್ಯೂಯಾರ್ಕ್:** ಕಾಶ್ಮೀರ ಸಮಸ್ಯೆಗೆ ಸಾವಿರ ವರ್ಷಗಳ ಬಳಿಕ ಪರಿಹಾರ ದೊರೆಯಬಹುದೇ ಎಂಬುದನ್ನು ನೋಡಲು ನಿಮ್ಮಿಬ್ಬರ ಜತೆಗೆ ನಾನು ಕೆಲಸ ಮಾಡುತ್ತೇನೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಸೇನಾ ಸಂಘರ್ಷ ಶಮನಗೊಳಿಸಿ 'ಕದನ ವಿರಾಮ'ಕ್ಕೆ ತಲುಪಿದ್ದಕ್ಕಾಗಿ ಭಾರತ ಮತ್ತು ಪಾಕಿಸ್ತಾನವನ್ನು ಶ್ಲಾಘಿಸುತ್ತೇನೆ ಎಂದಿರುವ ಅವರು, ಉಭಯ ದೇಶಗಳ ನಾಯಕರನ್ನು ದೇವರು ಆಶೀರ್ವದಿಸಲಿ ಎಂದು 'ಟೂತ್'ನಲ್ಲಿ ಪೋಸ್ಟ್ ಮಾಡಿದ್ದಾರೆ.



**ವ್ಯಾಪಾರ ಹೆಚ್ಚಿಸುವೆ:** 'ಈ ಎರಡೂ ಪ್ರಮುಖ ದೇಶಗಳ ಜತೆಗೆ ವ್ಯಾಪಾರವನ್ನು ಗಣನೀಯವಾಗಿ ಹೆಚ್ಚಿಸಲಿದ್ದೇನೆ' ಎಂದೂ ಅವರು ಹೇಳಿದ್ದಾರೆ. 'ಹಲವರ ಸಾವು, ನೋವು ಮತ್ತು ವಿನಾಶಕ್ಕೆ ಕಾರಣ ಆಗಬಹುದಾದ ಸೇನಾ ಸಂಘರ್ಷವನ್ನು ನಿಲ್ಲಿಸುವ ಅಗತ್ಯವನ್ನು ಅರಿತುಕೊಂಡ ಎರಡೂ ದೇಶಗಳ ಬಲಿಷ್ಠ ನಾಯಕತ್ವದ ಬಗ್ಗೆ ನನಗೆ ತುಂಬಾ ಹೆಮ್ಮೆಯಿದೆ' ಎಂದು ಅವರು ಹೇಳಿದ್ದಾರೆ.

**ಟ್ರಂಪ್ ಕಾರ್ಯಕ್ಕೆ ಮೆಚ್ಚುಗೆ:** ಭಾರತ– ಪಾಕ್ ಮಧ್ಯೆ ಸೇನಾ ಸಂಘರ್ಷ ಶಮಕ್ಕೆ ಟ್ರಂಪ್ ನಡೆಸಿದ ಯತ್ನವನ್ನು ಹಲವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

'ದೀರ್ಘ ಕಾಲದಿಂದ ಅಸ್ಥಿರವಾಗಿದ್ದ ಪ್ರದೇಶ ಈಗ ಸ್ಥಿರತೆಯತ್ತ ಸಾಗಿದೆ. ಇದು ಅಷ್ಟು ಸುಲಭದ ಕೆಲಸವಲ್ಲ. ಈ ಮೂಲಕ ಟ್ರಂಪ್ ಅವರು ಶಾಂತಿಯತ್ತ ತಮ್ಮ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ' ಎಂದು ಅಮೆರಿಕದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕ್ ವಾಲ್ಸ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅಮೆರಿಕದ ವಿದೇಶಾಂಗ ವ್ಯವಹಾರಗಳ ಸದನ ಸಮಿತಿಯು ಟ್ರಂಪ್ ಅವರನ್ನು ಶಾಂತಿಯ ಅಧ್ಯಕ್ಷ ಎಂದು ಕರೆದಿದೆ. 'ಭಾರತ ಮತ್ತು ಪಾಕಿಸ್ತಾನದ ಸಂಘರ್ಷ ತಿಳಿಗೊಳಿಸಲು ಯತ್ನಿಸಿದ ಟ್ರಂಪ್ ಅವರು ನೊಬೆಲ್ ಶಾಂತಿ ಪ್ರಶಸ್ತಿಗೆ ಅರ್ಹರು' ಎಂದು ಬಲಪಂಥೀಯ ರಾಜಕೀಯ ಕಾರ್ಯಕರ್ತರಾದ ಲಾರಾ ಲೂಮರ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

## ತಂತ್ರಗಾರಿಕೆಯ ಅದ್ಭುತ ಕಲೆ ಹೊರಹಾಕಿದ ಪಾಕಿಸ್ತಾನ



**ಪುಲ್ವಾಮಾ ಹೊಣೆ ಹೊತ್ತುಕೊಂಡ ನೆರೆ ರಾಷ್ಟ್ರ**

**ಇಸ್ಲಾಮಾಬಾದ್:** ಮೈಗಂಟಿದ ಕಳೆ ತೊಳೆಯಬಹುದು, ಮೆದುಳಿಗಂಟಿದ ಕಳೆಯನ್ನು ತೊಳೆಯುವು ಕಷ್ಟ. ಆದರೆ ಪಾಕಿಸ್ತಾನಿಯರ ಪಾಲಿಗೆ ಆ ಕಳೆಯೇ ಅವರ ಕಲೆಯಾಗಿ ಮಾರ್ಪಟ್ಟಿದೆ. ತಮ್ಮ ತಂತ್ರಗಾರಿಕೆ ಸಾಬೀತುಪಡಿಸುವ ಧಾವಂತದಲ್ಲಿ ಕೆಲವೊಮ್ಮೆ ಈ ಕಳೆಯನ್ನು ತಾವಾಗಿಯೇ ತೋರಿಸಿ ಬಿಡುತ್ತಾರೆ ನೆರೆಯವರು. ತನ್ನ ಅದ್ಭುತ ತಂತ್ರಗಾರಿಕೆ ಪ್ರದರ್ಶನದ ಭಾಗವಾಗಿ, 2019ರ ಪುಲ್ವಾಮಾ ದಾಳಿಯಲ್ಲಿ ತನ್ನ ಪಾತ್ರವಿದೆ ಎಂಬುದನ್ನು ಪಾಕಿಸ್ತಾನ ಒಪ್ಪಿಕೊಂಡಿದೆ. ಇದನ್ನು ಬೇರಾರೂ ಅಲ್ಲ, ಖುದ್ದು ಪಾಕಿಸ್ತಾನದ ಏರ್ ವೈಸ್ ಮಾರ್ಷಲ್ ಔರಂಗಜೇಬ್ ಅಹ್ಮದ್ ಬಹಿರಂಗವಾಗಿ ಒಪ್ಪಿ ಕೊಂಡಿದ್ದಾರೆ. ವಿದೇಶಿ ಪತ್ರಕರ್ತರ ಜೊತೆ ನಡೆದ ಪತ್ರಿಕಾಗೋಷ್ಠಿಯಲ್ಲಿ, ಪಾಕಿಸ್ತಾನದ ವಾಯುಪಡೆಯ ಸಾರ್ವಜನಿಕ ಸಂಪರ್ಕದ ಮಹಾನಿರ್ದೇಶಕರೂ ಆಗಿರುವ ಏರ್ ವೈಸ್ ಮಾರ್ಷಲ್ ಔರಂಗಜೇಬ್ ಅಹ್ಮದ್, ಪುಲ್ವಾಮಾ ದಾಳಿಯನ್ನು ತಂತ್ರಗಾರಿಕೆಯ ಅದ್ಭುತ ಪ್ರದರ್ಶನ ಎಂದು ಹೊಗಳಿದ್ದಾರೆ.

ಔರಂಗಜೇಬ್ ಅಹ್ಮದ್ ಅವರ ಈ ಹೇಳಿಕೆ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆಯನ್ನು ಹೆಚ್ಚಿಸಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಪಾಕಿಸ್ತಾನದ ಸೇನಾ ಪಡೆಗಳ ಉನ್ನತ ಮಟ್ಟದ ಅಧಿಕಾರಿ ಯೋರ್ವ ಪುಲ್ವಾಮಾ ದಾಳಿಯನ್ನು ಹೊಗಳಿ ಮಾತನಾಡಿದ್ದು ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಪಾಕಿಸ್ತಾನವು ಪುಲ್ವಾಮಾ ದಾಳಿಯಲ್ಲಿ ಭಾಗಿಯಾಗಿದೆ ಎಂದು ಆರೋಪಿಸಲಾಗಿದ್ದರೂ, ಆ ದೇಶವು ಈವರೆಗೂ ತನ್ನ ಪಾತ್ರವನ್ನು ನಿರಾಕರಿಸುತ್ತಲೇ ಬಂದಿದೆ. ಆದರೆ ಈಗ ಔರಂಗಜೇಬ್ ಅಹ್ಮದ್ ಅವರಿಂದ ಇಂತಹ ಹೇಳಿಕೆ ಹೊರಬಿದ್ದಿರುವುದು ಅಚ್ಚರಿ ಮೂಡಿಸಿದೆ.

ಪಾಕಿಸ್ತಾನದ ಭೂಮಿ, ಆಕಾಶ ಅಥವಾ ಜಲ ಗಡಿಗೆ ಅಪಾಯವಾದರೆ, ಯಾವುದೇ ರಾಜಿ ಮಾಡಿಕೊಳ್ಳಲಾಗುವುದಿಲ್ಲ. ಪುಲ್ವಾಮಾದಲ್ಲಿ ನಮ್ಮ ತಂತ್ರಗಾರಿಕೆಯ ಅದ್ಭುತ ಪ್ರದರ್ಶನದಿಂದ ನಾವು ಇದನ್ನು ಸಾಬೀತು ಪಡಿಸಿದ್ದೇವೆ ಎಂದು ಪಾಕಿಸ್ತಾನ ಏರ್ ವೈಸ್ ಮಾರ್ಷಲ್ ಬಹಿರಂಗ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. 2019 ರಲ್ಲಿ ಪುಲ್ವಾಮಾದಲ್ಲಿ ನಡೆದ ಭಯಾನಕ ದಾಳಿಯಲ್ಲಿ 40 ಭಾರತೀಯ ಅರೆಸೇನಾ ಸಿಬ್ಬಂದಿ ಸಾವನ್ನಪ್ಪಿದ್ದರು. ಪಾಕಿಸ್ತಾನ ಬೆಂಬಲಿತ ಜೈಶ್-ಎ-ಮೊಹಮ್ಮದ್, ಸಂಘಟನೆಯ ಆತ್ಮಹತ್ಯಾ ಬಾಂಬರ್, ಸಿಆರ್‌ಪಿಎಫ್ ಬೆಂಗಾವಲು ಪಡೆಯನ್ನು ಗುರಿಯಾಗಿಸಿ ಈ ದಾಳಿ ನಡೆಸಿದ್ದ. ಇದಕ್ಕೆ ಪ್ರತಿಕ್ರಿಯೆಯಾಗಿ ಭಾರತವು ಬಾಲಾ ಕೋಟ್ ವೈಮಾನಿಕ ದಾಳಿಯನ್ನು ನಡೆಸಿತ್ತು. ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿರುವ ಜೈಶ್ ತರಬೇತಿ ಶಿಬಿರವನ್ನು ಗುರಿಯಾಗಿಸಿ ಭಾರತವು ದಾಳಿ ಮಾಡಿತ್ತು. ಭಾರ ತದ ಕ್ರಮವು ಪಾಕಿಸ್ತಾನದ ಜೆಟ್‌ಗಳೊಂದಿಗೆ ವೈಮಾನಿಕ ಯುದ್ಧಕ್ಕೆ ಕಾರಣವಾಯಿತು. ಈ ವೇಳೆ

- **2019ರ ಪುಲ್ವಾಮಾ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನದ ಪಾತ್ರ, ಬಹಿರಂಗೊಳಿಸಿದ ಪಾಕ್ ವಾಯುಪಡೆ ಅಧಿಕಾರಿ**
- **ಪುಲ್ವಾಮಾ ದಾಳಿಯನ್ನು ತಂತ್ರಗಾರಿಕೆಯ ಅದ್ಭುತ ಪ್ರದರ್ಶನ ಎಂದ ಪಾಕಿಸ್ತಾನ ಏರ್ ವೈಸ್ ಮಾರ್ಷಲ್ ಔರಂಗಜೇಬ್ ಅಹ್ಮದ್**
- **ಪುಲ್ವಾಮಾ ದಾಳಿಯಲ್ಲಿ ಪಾಕಿಸ್ತಾನದ ಕೈವಾಡದ ಭಾರತದ ಆರೋಪ ಮತ್ತಷ್ಟು ಗಟ್ಟಿ. ಈಗೇನು ಹೇಳುತ್ತದೆ ನೆರೆ ರಾಷ್ಟ್ರ**

ಭಾರತೀಯ ಫೈಟರ್ ಪೈಲಟ್ ಅಭಿನಂದನ್ ವರ್ಧಮಾನ್ ಅವರನ್ನು ಪಾಕಿಸ್ತಾನದಲ್ಲಿ ಸೆರೆಹಿಡಿಯಲಾಗಿತ್ತು. ಆದರೆ, ಉಭಯ ದೇಶಗಳ ನಡುವೆ ಉದ್ವಿಗ್ನತೆ ಹೆಚ್ಚಾದ ಕಾರಣ ಪಾಕಿಸ್ತಾನವು ಕೆಲವೇ ದಿನಗಳಲ್ಲಿ ಅವರನ್ನು ಬಿಡುಗಡೆ ಮಾಡಿತು. ಏಪ್ರಿಲ್ 22 ರಂದು ನಡೆದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಪಾಕಿಸ್ತಾನವು ತಾನು ಭಯೋತ್ಪಾದನೆಯನ್ನು ಬೆಂಬಲಿಸುತ್ತಿಲ್ಲ ಎಂದು ಹೇಳಿಕೊಂಡಿದೆ. ಆದರೆ ಇದೀಗ ಅದರದ್ದೇ ವಾಯುಪಡೆಯ ಉನ್ನತ ಮಟ್ಟದ ಅಧಿಕಾರಿ ಯೋರ್ವರು, ಪುಲ್ವಾಮಾ ದಾಳಿಯಲ್ಲಿ ತಮ್ಮ ಪಾತ್ರದ ಕುರಿತು ಬಹಿರಂಗ ಹೇಳಿಕೆ ನೀಡಿದ್ದಾರೆ. ಇತ್ತೀಚಿಗೆ ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್ ಕೂಡ, ಪಾಕಿಸ್ತಾನವು ಭಯೋತ್ಪಾದಕರಿಗೆ ಆಶ್ರಯ ನೀಡಿದೆ ಎಂಬ ಆರೋಪವನ್ನು ಒಪ್ಪಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.


## ಕದನ ವಿರಾಮ: ಟ್ರಂಪ್ ನಡೆಗೆ ತರೂರ್ ಖಂಡನೆ

**ನವದೆಹಲಿ:** ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮ ಒಪ್ಪಂದ ಜಾರಿಯಾಗಲು ಅಮೆರಿಕ ಕಾರಣ ಎನ್ನುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಯನ್ನು ಕಾಂಗ್ರೆಸ್ ಸಂಸದ ಶಶಿತರೂರ್ ತೀವ್ರವಾಗಿ ಖಂಡಿಸಿದ್ದಾರೆ. ಭಾರತ್ ಪಾಕಿಸ್ತಾನದ ಕದನ ವಿರಾಮದ ಕ್ರೆಡಿಟ್‌ಅನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತೆಗೆದುಕೊಳ್ಳಲು ಮುಂದಾಗಿರುವುದು ಕುಹಕದ ನಡೆ ಎಂದು ಅವರು ಹೇಳಿದ್ದಾರೆ.

ಉಭಯ ದೇಶಗಳ ನಡುವಿನ ಕದನ ವಿರಾಮದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಸ್ಥಿಕೆಯಾಗಲಿ ಅಥವಾ ಇನ್ಯಾವುದೇ ಪಾತ್ರ ಇಲ್ಲ ಹೀಗಿದ್ದರೂ ಅವರು ಭಾರತ ಪಾಕಿಸ್ತಾನದ ನಡುವೆ ಕದನ ವಿರಾಮಕ್ಕೆ ತಾವೇ ಕಾರಣ ಎಂದು ಬೆನ್ನು ತೊಟ್ಟಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ.

ಎರಡು ನೆರೆಹೊರೆ ದೇಶಗಳು ಪೂರ್ಣ ಮತ್ತು ತಕ್ಷಣದ ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದಾರೆ.

ಒಂದು ಗಂಟೆಯೊಳಗೆ ಎರಡೂ ದೇಶಗಳು ಕದನ ವಿರಾಮವನ್ನು ಅಧಿಕೃತವಾಗಿ ಘೋಷಿಸಿವೆ . ಹೀಗಿರುವಾಗ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾತ್ರ ಏನಿದೆ ಎಂದು ಪ್ರಶ್ನಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರಿಗೆ ಬರೆದ ಪತ್ರದಲ್ಲಿ ಡೊನಾಲ್ಡ್ ಟ್ರಂಪ್ ಮೊದಲು ಕದನ ವಿರಾಮವನ್ನು ಘೋಷಿ ಸಿದರು ಎಂದು ತಮ್ಮ ಪಕ್ಷದ



**ಭಾರತ, ಪಾಕಿಸ್ತಾನದ ಕದನ ವಿರಾಮದ ಒಪ್ಪಂದದ ಕ್ರೆಡಿಟ್ ಅನ್ನು ಡೊನಾಲ್ಡ್ ಟ್ರಂಪ್ ತನ್ನದಾಗಿಸಿಕೊಳ್ಳುವ ಪ್ರಯತ್ನ ಅತ್ಯಂತ ದುರದೃಷ್ಟಕರ ಮಾರ್ಗವಾಗಿದೆ ಎಂದು ಭಾವಿಸುತ್ತೇನೆ. ಅಂತಾರಾಷ್ಟ್ರೀಯ ರಾಜ ತಾಂತ್ರಿಕತೆಯಲ್ಲಿ ಖಂಡಿತವಾಗಿಯೂ ಅಂತಹದನ್ನು ನೋಡಿಲ್ಲ ಎಂದು ವಿಶ್ವಸಂಸ್ಥೆಯಲ್ಲಿ ಕೆಲಸ ಮಾಡಿದ ಅನುಭವ ಇರುವಲ್ಲಿ ತಿರುವನಂತಪುರಂನ ಸಂಸದ ಶಶಿ ತರೂರ್ ಹೇಳಿದ್ದಾರೆ. ಕಳೆದ ಕೆಲವು ದಿನಗಳಿಂದ ಭಾರತ, ಪಾಕಿಸ್ತಾನದ ವಿದೇಶಾಂಗ ಮಂತ್ರಿಗಳು ವಿದೇಶಿ ನಾಯಕರೊಂದಿಗಿನ ಮಾತುಕತೆಗಳ ಕುರಿತು ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.**

ಮಾಜಿ ಮುಖ್ಯಸ್ಥ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಒತ್ತಿ ಹೇಳಿದ ಕೆಲವೇ ಗಂಟೆಗಳ ನಂತರ ಶಶಿ ತರೂರ್ ಹೇಳಿದ್ದು ಭಾರತ ಪಾಕಿಸ್ತಾನದ ನಡುವೆ ಕದನ ವಿರಾಮ ಘೋಷಣೆಗೂ ಮುನ್ನ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಸಂಬಂಧ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡಿದ್ದು ಸರಿಯಲ್ಲ ಎಂದು ತಿಳಿಸಿದ್ದಾರೆ.

ವಿದೇಶಾಂಗ ಸಚಿವ ಡಾ. ಜೈಶಂಕರ್ ಕಾರ್ಯದರ್ಶಿ ಅಮೆರಿಕಾದ ವಿದೇ ಶಾಂಗ ಅಮೆರಿ ಕಾದ ವಿದೇಶಾಂಗ ಕಾರ್ಯದರ್ಶಿ ರುಬಿಯೊ ಅವರೊಂದಿಗೆ ಮಾತನಾಡಿದ್ದಾತೆ. ರುಬಿಯೊ ಪಾಕಿಸ್ತಾನದ ವಿದೇಶಾಂಗ ಸಚಿವ ರೊಂದಿಗೆ ಮಾತನಾಡಿದ್ದಾರೆ. ಈ ರೀತಿಯ ಸಂಪರ್ಕಗಳು ಈ ಮೂರ್ನಾಲ್ಕು ದಿನಗಳ ಸಂಘರ್ಷದ ಉದ್ದಕ್ಕೂ ನಡೆಯುತ್ತಿವೆ.

ಆದರೆ ಭಾರತ ಮಧ್ಯಸ್ಥಿಕೆಗೆ ವಿನಂತಿಸುತ್ತಿದೆ ಎಂದು ಅರ್ಥವಲ್ಲ ಎಂದು ಅವರು ಹೇಳಿದ್ದಾರೆ. ಅಮೆರಿಕಾ ಜೊತೆಗಿನ ಭಾರತದ ಮಾತುಕತೆಗಳನ್ನು ಮಧ್ಯಸ್ಥಿಕೆ ಎಂದು ಕರೆಯಲಾಗುವುದಿಲ್ಲ, ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

## ಬಿಎಸ್‌ಎಫ್ ಯೋಧನ ಬಿಡುಗಡೆಗೆ ಪವನ್ ಖೇರಾ ಮನವಿ

**ನವದೆಹಲಿ:** ಬಿಎಸ್‌ಎಫ್ ಯೋಧ ಪೂರ್ಣಂ ಸಾಹು ಅವರನ್ನು ಪಾಕಿಸ್ತಾನದ ಸೆರೆಯಿಂದ ಯಾವಾಗ ಬಿಡುಗಡೆ ಮಾಡಲಾಗುತ್ತದೆ ಎಂದು ಕಾಂಗ್ರೆಸ್ ನಾಯಕ ಪವನ್ ಖೇರಾ ಸಾಮಾಜಿಕ ಮಾಧ್ಯಮದಲ್ಲಿ ಪ್ರಶ್ನಿಸಿದ್ದಾರೆ.

ನಮ್ಮ ಬಿಎಸ್‌ಎಫ್ ಜವಾನ ಪೂರ್ಣಂ ಸಾಹು ಅವರನ್ನು ಪಾಕಿಸ್ತಾನದ ಸೆರೆಯಿಂದ ಯಾವಾಗ ಬಿಡುಗಡೆ ಮಾಡಲಾಗುತ್ತದೆ ಎಂದು ಅವರು ಟ್ವೀಟ್ ಮಾಡಿದ್ದಾರೆ, ಈ ವಿಷಯವಾಗಿ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಟ್ಯಾಗ್ ಮಾಡಿದ್ದಾರೆ. ಇದಕ್ಕೂ ಮೊದಲು, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೂಡ ಪಾಕಿಸ್ತಾನ ರೇಂಜರ್ಸ್ ಬಂಧಿಸಿರುವ ಹೂಗ್ಲಿಯ ಬಿಎಸ್‌ಎಫ್ ಜವಾನರ ಬಗ್ಗೆ ತಮ್ಮ ಕಳವಳ ವ್ಯಕ್ತಪಡಿಸಿದ್ದರು. ತೃಣಮೂಲ ಕಾಂಗ್ರೆಸ್ ನಾಯಕ ಕಲ್ಯಾಣ್ ಬ್ಯಾನರ್ಜಿ ಅವರು ಕುಟುಂಬ ಸದಸ್ಯರೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಬ್ಯಾನರ್ಜಿ ಹೇಳಿದ್ದಾರೆ.

ಇದು ಅತ್ಯಂತ ದುಃಖಕರ ಪರಿಸ್ಥಿತಿ. ಅವರ ಹೆಸರು ಸಾಹು. ನಮ್ಮ ಪಕ್ಷದ ಕಲ್ಯಾಣ್ ಬ್ಯಾನರ್ಜಿ ಅವರು ಕುಟುಂಬ ಸದಸ್ಯರೊಂದಿಗೆ ಸಂಪರ್ಕದಲ್ಲಿದ್ದಾರೆ. ಅವರನ್ನು ಆದಷ್ಟು ಬೇಗ ರಕ್ಷಿಸಬೇಕೆಂದು ನಾನು ಬಯಸುತ್ತೇನೆ. ಆಂತರಿಕ ಮತ್ತು ಬಾಹ್ಯ ಭದ್ರತೆಯ ವಿಷಯಗಳಲ್ಲಿ ನಮ್ಮ ಪಕ್ಷ ಸರ್ಕಾರದೊಂದಿಗಿದೆ ಎಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ನಾವು ಇಲ್ಲಿ ಒಡೆದು ಆಳುತ್ತಿಲ್ಲ, ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಏಪ್ರಿಲ್ 23 ರಂದು ಪಂಜಾಬ್‌ನ ಫಿರೋಜ್‌ಪುರ ಬಳಿ ಅಂತರರಾಷ್ಟ್ರೀಯ ಗಡಿಯನ್ನು ಆಕಸ್ಮಿಕವಾಗಿ ದಾಟಿದ ನಂತರ ಪಾಕಿಸ್ತಾನ ರೇಂಜರ್‌ಗಳು ಬಿಎಸ್‌ಎಫ್ ಯೋಧನನ್ನು ಬಂಧಿಸಿದರು.

ಆರಂಭಿಕ ವರದಿಗಳ ಪ್ರಕಾರ, ಯೋಧ ಆಕಸ್ಮಿಕವಾಗಿ ಪಾಕಿಸ್ತಾನಿ ಪ್ರದೇಶಕ್ಕೆ ಕಾಲಿಟ್ಟಿದ್ದರು.



**ಗಡಿಗಳಲ್ಲಿ ಜಮೀನುಗಳಲ್ಲಿ ಕೆಲಸ ಮಾಡುವ ರೈತರು ಸಹ ಜಾಗರೂಕರಾಗಿರಲು ಕೇಳಲಾಗಿದೆ, ಪಂಜಾಬ್ ಗಡಿಯಲ್ಲಿ ಇಂತಹ ಘಟನೆಗಳು ಸಾಮಾನ್ಯವಾಗಿದೆ ಎಂದು ಮತ್ತೊಬ್ಬ ಬಿಎಸ್‌ಎಫ್ ಅಧಿಕಾರಿ ಹೇಳಿದರು.**


ಜಮ್ಮು, ಕಾಶ್ಮೀರ, ಪಂಜಾಬ್, ರಾಜಸ್ಥಾನ, ಗುಜರಾತ್ ರಾಜ್ಯಗಳನ್ನು ವ್ಯಾಪಿಸಿರುವ 3, 323 ಕಿ.ಮೀ ಉದ್ದದ ಭಾರತ–ಪಾಕಿಸ್ತಾನ ಗಡಿಯನ್ನು ಕಾಪಾಡುವ ಜವಾಬ್ದಾರಿ ಬಿಎಸ್‌ಎಫ್‌ನ ಪ್ರಮುಖ ಪಡೆಯಾಗಿದೆ. ಗಡಿಯಲ್ಲಿ ನಡೆಯುತ್ತಿರುವ ಉದ್ವಿಗ್ನತೆಯ ನಡುವೆ, ಗಸ್ತು ಕರ್ತವ್ಯದ ಸಮಯದಲ್ಲಿ ಯೋಧರು ಹೆಚ್ಚುವರಿ ಜಾಗರೂಕರಾಗಿರಲು, ಅಜಾಗರೂಕತೆಯಿಂದ ಗಡಿ ದಾಟುವುದನ್ನು ತಪ್ಪಿಸಲು ಸೂಚಿಸಲಾಗಿದೆ.

## ಬ್ರಹ್ಮೋಸ್ ಕ್ಷಿಪಣಿ ದಾಳಿಯಿಂದ ನಡುಗಿದ ಭೂಮಿ

**ಇಸ್ಲಾಮಾಬಾದ್:** ಆಪರೇಷನ್ ಸಿಂಧೂರ್ ಮೂಲಕ ಭಾರತೀಯ ಪಡೆಗಳು ಪಾಕಿಸ್ತಾನದಲ್ಲಿ ವಿಧ್ವಂಸ ಸೃಷ್ಟಿಸಿದೆ. ಇದರ ಬೆನ್ನಲ್ಲೇ ಪಾಕಿಸಾನದಲ್ಲಿ ಸೋಮವಾರ ಮಧ್ಯಾಹ್ನ 1:26ಕ್ಕೆ ಮತ್ತೆ ಭೂಕಂಪನದ ಅನುಭವವಾಗಿದೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ಪ್ರಕಾರ, ಈ ಭೂಕಂಪದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 4.6 ರಷ್ಟು ದಾಖಲಾಗಿದೆ. ಭೂಕಂಪದ ಕೇಂದ್ರಬಿಂದು ಪಾಕಿಸ್ತಾನದಲ್ಲಿ 29.12 ಡಿಗ್ರಿ ಉತ್ತರದಲ್ಲಿ ಮತ್ತು 67.26 ಡಿಗ್ರಿ ಪೂರ್ವ ರೇಖಾಂಶದಲ್ಲಿದ್ದು, 10 ಕಿಲೋಮೀಟರ್ ಆಳದಲ್ಲಿ ಕಂಪನ ಸಂಭವಿಸಿದೆ.

ಎನ್‌ಸಿಎಸ್ ಹಂಚಿಕೊಂಡ ನಕ್ಷೆಯ ಪ್ರಕಾರ, ಭೂಕಂಪದ ಕೇಂದ್ರಬಿಂದು ಪಾಕಿಸ್ತಾನದ ಬಲೂಚಿಸ್ತಾನ್ ಪ್ರದೇಶದಲ್ಲಿತ್ತು. ಇದು ಅಫ್ಘಾನಿಸ್ತಾನದ ಗಡಿಯ ಸಮೀಪ ದಲ್ಲಿದೆ. ನಕ್ಷೆಯಲ್ಲಿ ತೋರಿಸಿರುವ ಪ್ರಭಾವದ ಪ್ರದೇಶವು ಕ್ವೆಟ್ಟಾ ಮತ್ತು ಸುತ್ತಮುತ್ತಲಿನ ಪಟ್ಟಣಗಳಾದ ಚಮನ್ ಮತ್ತು ಸಿಬಿಯನ್ನು ಒಳಗೊಂಡಿದೆ. ಆದಾಗ್ಯೂ, ಯಾವುದೇ ಹಾನಿ ಅಥವಾ ಸಾವುನೋವುಗಳ ಬಗ್ಗೆ ತಕ್ಷಣದ ವರದಿಗಳು ಇನ್ನೂ ಬಂದಿಲ್ಲ.

ಇತ್ತೀಚಿನ ದಿನಗಳಲ್ಲಿ ಪಾಕಿಸ್ತಾನದಲ್ಲಿ ಸಂಭವಿಸಿದ



ಎರಡನೇ ಪ್ರಮುಖ ಭೂಕಂಪ ಇದಾಗಿದೆ. ಇದಕ್ಕೂ ಮೊದಲು ಮೇ 9 ರಂದು, 4.0 ತೀವ್ರತೆಯ ಭೂಕಂಪ ದಾಖಲಾಗಿತ್ತು. ಇದರ ಕೇಂದ್ರಬಿಂದು ಬಲೂಚಿಸ್ತಾನದಲ್ಲಿಯೂ ಇತ್ತು. ತಜ್ಞರ ಪ್ರಕಾರ, ಪಾಕಿಸ್ತಾನವು ಭಾರತೀಯ ಮತ್ತು ಯುರೇಷಿಯನ್ ಟೆಕ್ಟೋನಿಕ್ ಪ್ಲೇಟ್‌ಗಳ ಜಂಕ್ಷನ್‌ನಲ್ಲಿ ಅಸ್ತಿತ್ವದಲ್ಲಿರುವ ಕಾರಣ ಭೂಕಂಪನಶೀಲ ಸಕ್ರಿಯ ವಲಯದಲ್ಲಿದೆ. ಇದರಿಂದಾಗಿ, ಈ ಪ್ರದೇಶದಲ್ಲಿ ಭೂಕಂಪಗಳು ಸಾಮಾನ್ಯ. ಬಲೂಚಿಸ್ತಾನ್, ಖೈಬರ್ ಪಖ್ತುನ್ಖ್ವಾ, ಗಿಲ್ಗಿಟ್–ಬಾಲ್ಟಿಸ್ತಾನ್‌ನಂತಹ ಪ್ರದೇಶಗಳು ಯುರೇಷಿಯನ್ ಪ್ಲೇಟ್‌ನ ದಕ್ಷಿಣ ಅಂಚಿನಲ್ಲಿದ್ದರೆ, ಪಂಜಾಬ್ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರಗಳು ಭಾರತೀಯ ಪ್ಲೇಟ್‌ನ ವಾಯುವ್ಯ ಅಂಚಿನಲ್ಲಿವೆ.

# ಬೂದಿಯಿಂದ ಬೂದಿಗೆ, ಧೂಳಿನಿಂದ ಧೂಳಿಗೆ

## ಆ್ಯಷಸ್ ಸರಣಿ ಪ್ರಸ್ತಾಪಿಸಿ ಭಾರತದ ಆಕ್ರಮಣ ವಿವರಿಸಿದ ಸೇನಾಧಿಕಾರಿ

**ಹೊಸದಿಲ್ಲಿ:** ಬೂದಿಯಿಂದ ಬೂದಿಗೆ, ಧೂಳಿನಿಂದ ಧೂಳಿಗೆ ಎಂದು ಆ್ಯಷಸ್ ಸರಣಿ ಪ್ರಸ್ತಾಪಿಸುವ ಮೂಲಕ ಸೇನಾಧಿಕಾರಿಯು ಭಾರತ ಸೇನೆಯು ಪಾಕಿಸ್ತಾನ, ಉಗ್ರರಿಗೆ ಯಾವ ರೀತಿ ತಕ್ಕ ಶಾಸ್ತಿ ಮಾಡಿತು ಎಂದು ವಿವರಿಸಿದ್ದಾರೆ. 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಕುರಿತು ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕ (ಡಿಜಿಎಂಒ) ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್, ಭೂಸೇನೆಯ ಜನರಲ್ ಸಂದೀಪ್ ಶಾರದಾ, ವಾಯುಪಡೆಯ ಏರ್ ಮಾರ್ಷಲ್ ಎಕೆ ಭಾರ್ತಿ, ನೌಕಾಪಡೆಯ ವೈಸ್ ಅಡ್ಮಿರಲ್ ಎಎನ್ ಪ್ರಮೋದ್, ಅವರು ಹೊಸದಿಯಲ್ಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಸಮಗ್ರ ಮಾಹಿತಿ ನೀಡಿದರು.

ಈ ವೇಳೆ ಮಾತನಾಡಿದ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಅವರು ಕ್ರಿಕೆಟ್, ಮಿಲಿಟರಿ ಕಾರ್ಯಾಚರಣೆಗಳ ನಡುವಿನ ಹೋಲಿಕೆಯನ್ನು ಚಿತ್ರಿಸಿದರು. ಮೊದಲಿಗೆ ವಿರಾಟ್ ಕೊಹ್ಲಿ ನನ್ನ ನೆಚ್ಚಿನ ಕ್ರಿಕೆಟಿಗ ಎಂದ ಅವರು, ಮುಂದುವರೆದು ಆ್ಯಷಸ್‌ನಿಂದ ಆ್ಯಷಸ್‌ಗೆ, ಧೂಳಿನಿಂದ ಧೂಳಿಗೆ ಎಂಬಂತೆ ಭಾರತ ಸೇನೆಯು ರಕ್ಷಣೆಯನ್ನು ಹೇಗೆ ಆಕ್ರಮಣ ವಾಗಿ ಪರಿವರ್ತಿಸಿತು ಎಂದು ಹೇಳಿದರು.

70ರ ದಶಕದಲ್ಲಿ, ಆಸ್ಟ್ರೇಲಿಯಾ, ಇಂಗ್ಲೆಂಡ್ ನಡುವಿನ ಪ್ರಸಿದ್ಧ ಆ್ಯಷಸ್ ಸರಣಿಯ ಸಮಯದಲ್ಲಿ ಆಸ್ಟ್ರೇಲಿಯಾದ ಇಬ್ಬರು ದಂತಕಥೆಯ ವೇಗದ ಬೌಲರ್‌ಗಳಾದ ಜೆಫ್ ಥಾಮ್ಸನ್, ಡೆನ್ನಿಸ್ ಲಿಲ್ಲಿ ಇಂಗ್ಲಿಷ್ ಬ್ಯಾಟಿಂಗ್ ಲೈನ್‌ಅಪ್‌ನಲ್ಲಿ ಹಾನಿಯನ್ನುಂಟು ಮಾಡಿದ್ದರು. ಅವರ ಪ್ರಾಬಲ್ಯವು ಎಷ್ಟು ಅಗಾಧವಾಗಿತ್ತೆಂದರೆ,



**ತಕ್ಕ ಶಾಸ್ತಿ ಮಾಡಿತು**

ಆಸ್ಟ್ರೇಲಿಯನ್ನರು ಬೂದಿಯಿಂದ ಬೂದಿಗೆ ಮತ್ತು ಧೂಳಿ ನಿಂದ ಧೂಳಿಗೆ. ಥಾಮ್ಸನ್ ಸಿಕ್ಕಿಲ್ಲ ಅಂದ್ರೆ ಲಿಲ್ಲಿ ಸಿಕ್ತಾನೆ ಎಂಬ ಮಾತನ್ನು ಅವರು ಹೇಳಿದ್ದರು. ಅಂದರೆ, ಭಾರತದ ವಾಯು ರಕ್ಷಣಾ ವ್ಯವಸ್ಥೆಯು ಹಲವು ಪದರ ಗಳನ್ನು ಹೊಂದಿದೆ. ಒಂದು ಪದರ ತಪ್ಪಿಸಿಕೊಂಡರೂ, ಇನ್ನೊಂದು ಪದರವು ನಿಮ್ಮನ್ನು ಹೊಡೆಯುತ್ತದೆ ಎಂಬರ್ಥ. ಈ ವಿಚಾರವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಭಾರತ ಸೇನೆಯು ಉಗ್ರರು, ಪಾಕಿಸ್ತಾನಿ ಸೇನೆ ವಿರುದ್ಧ ದಾಳಿ ಹೇಗೆ ಮಾಡಿತ್ತು ಎಂದು ಅರ್ಥವಾಗುತ್ತದೆ ಎಂದು ಲೆಫ್ಟಿನೆಂಟ್ ಜನರಲ್ ಹೇಳಿದರು.

**ವಾಯುನೆಲೆಗಳ ಮೇಲೆ ನಿಖರ ದಾಳಿ**

**ನಮ್ಮ ಹೋರಾಟ ಭಯೋತ್ಪಾದಕ ಮೂಲಸೌಕರ್ಯ, ಭಯೋತ್ಪಾದಕರ ವಿರುದ್ಧವಾಗಿತ್ತು. ಆದರೆ ಪಾಕಿಸ್ತಾನದ ಸೈನ್ಯ ಭಯೋತ್ಪಾದಕರನ್ನು ಬೆಂಬಲಿಸಲು ನಿರ್ಧರಿಸಿತು. ಇದರಿಂದ ಸಂಘರ್ಷ ಹೆಚ್ಚಾಯಿತು. ಪಾಕಿಸ್ತಾನದ ಸೈನ್ಯ ಭಯೋತ್ಪಾದಕರಿಗಾಗಿ ಮಧ್ಯಪ್ರವೇಶಿಸಿದ್ದು ದುರದೃಷ್ಟಕರ. ಹಾಗಾಗಿ ನಾವು ಪ್ರತಿಕ್ರಿಯಿಸಲು ನಿರ್ಧರಿಸಿದೆವು. ಭಾರತೀಯ ವಾಯುಪಡೆಯು ಪಾಕಿಸ್ತಾನದ ರಹಿಮ್ ಯಾರ್ ಖಾನ್, ನೂರ್ ಖಾನ್ ವಾಯುನೆಲೆಗಳ ಮೇಲೆ ನಿಖರ ದಾಳಿ ಮಾಡಿದೆ. ಇದರ ಪರಿಣಾಮವಾಗಿ ದೊಡ್ಡ ಹಾನಿಯಾಗಿದೆ**

**ಪತ್ರಿಕಾಗೋಷ್ಠಿಯ ಪ್ರಮುಖ ಅಂಶಗಳಿವು:** ಭಾರತದ ಮುಖ್ಯ ಗುರಿ ಭಯೋತ್ಪಾದಕರನ್ನು ಮಟ್ಟಹಾಕುವುದು. ಆದರೆ, ಪಾಕಿಸ್ತಾನದ ಸೈನ್ಯ ಅವರನ್ನು ರಕ್ಷಿಸಲು ಮುಂದಾಯಿತು. ಇದರಿಂದ

**ಭಾರತದ ಎಲ್ಲಾ ಮಿಲಿಟರಿ ನೆಲೆಗಳು ಮತ್ತು ವ್ಯವಸ್ಥೆಗಳು ಕಾರ್ಯಾಚರಣೆಗೆ ಸಿದ್ಧವಾಗಿವೆ ಎಂದು ಏರ್ ಮಾರ್ಷಲ್ ಎ.ಕೆ.ಭಾರ್ತಿ ಯಾವುದೇ ಭವಿಷ್ಯದ ಕಾರ್ಯಾಚರಣೆಗಳನ್ನು ಕೈಗೊಳ್ಳಲು ನಾವು ಸಿದ್ಧರಿದ್ದೇವೆ ಎಂದು ಹೇಳಿದ್ದಾರೆ.**

ಭಾರತವು ತನ್ನ ಪ್ರತಿಕ್ರಿಯೆಯನ್ನು ಹೆಚ್ಚಿಸಬೇಕಾಯಿತು ಎಂದು ಏರ್ ಮಾರ್ಷಲ್ ಎ.ಕೆ.ಭಾರ್ತಿ ಹೇಳಿದರು.

ಸಂಘರ್ಷದಲ್ಲಿ ಸ್ವದೇಶಿ ಆಕಾಶ್ ಕ್ಷಿಪಣಿ ವ್ಯವಸ್ಥೆಯು ಉತ್ತಮವಾಗಿ ಕಾರ್ಯನಿರ್ವಹಿಸಿದೆ. ಕಳೆದ ದಶಕದಲ್ಲಿ ಸರ್ಕಾರದ ನಿರಂತರ ಬೆಂಬಲದಿಂದ ನಾವು ಬಲವಾದ ವಾಯು ರಕ್ಷಣಾ ವ್ಯವಸ್ಥೆಯನ್ನು ಸ್ಥಾಪಿಸಿದ್ದೇವೆ. ಪಾಕಿಸ್ತಾನವು ಚೀನಾ ನಿರ್ಮಿತ ಪಿಎಲ್–15 ಕ್ಷಿಪಣಿಯನ್ನು ಬಳಸಿದೆ ಎಂದು ತಿಳಿದುಬಂದಿದೆ. ಈ ಕ್ಷಿಪಣಿಯ ಅವಶೇಷಗಳನ್ನು ಭಾರತೀಯ ಸೇನೆ ತೋರಿಸಿದೆ. ಟರ್ಕಿ ನಿರ್ಮಿತ YIHA, ಸೋಂಗರ್ ಡ್ರೋನ್‌ಗಳನ್ನು ಸಹ ಭಾರತ ಹೊಡೆದುರುಳಿಸಿದೆ. ಆಕಾಶ್ ಕ್ಷಿಪಣಿಗಳು ಸೇರಿದಂತೆ ಹಲವು ಶಸ್ತ್ರಾಸ್ತ್ರಗಳನ್ನು ಭಾರತ ಸೇನೆ ಬಳಸಲಾಯಿತು. ಈ ಕ್ಷಿಪಣಿ ವ್ಯವಸ್ಥೆಯು ಉತ್ತಮವಾಗಿ ಕಾರ್ಯನಿರ್ವಹಿಸಿದೆ ಎಂದು ಸೇನಾಧಿಕಾರಿಗಳು ತಿಳಿಸಿದರು.

## ಮಿನಿ ನ್ಯೂಸ್

### ಕದನ ವಿರಾಮದ ನಂತರ ಷೇರುಪೇಟೆ ಚೇತರಿಕೆ

**ಮುಂಬೈ:** ಭಾರತ, ಪಾಕಿಸ್ತಾನ ನಡುವಿನ ಕದನ ವಿರಾಮ ನಂತರ ಹೂಡಿಕೆದಾರರಿಗೆ ನಿರಾಳತೆಯನ್ನುಂಟು ಮಾಡಿದ್ದು, ಇಂದು ಷೇರು ಮಾರುಕಟ್ಟೆ ವಹಿವಾಟು ಅದ್ಭುತವಾಗಿ ಪ್ರಾರಂಭವಾಗಿ ಸೂಚ್ಯಂಕ ಭಾರಿ ಏರಿಕೆ ಕಂಡಿದೆ. ಬೆಳಿಗ್ಗೆ 9:59 ರ ಸುಮಾರಿಗೆ ಬಿಎಸ್‌ಇ ಸೆನ್ಸೆಕ್ಸ್ 2270.26 ಪಾಯಿಂಟ್‌ಗಳ ಏರಿಕೆಯಾಗಿ 81,724.73 ಕ್ಕೆ ತಲುಪಿತು, ಆದೇ ರೀತಿ ಎನ್‌ಎಸ್‌ಇ ನಿಫ್ಟಿ ಕೂಡ 50 714.10 ಪಾಯಿಂಟ್‌ಗಳ ಏರಿಕೆಯಾಗಿ 24,722.30 ಕ್ಕೆ ವಹಿವಾಟು ನಡೆಸಿತು. ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ಸಡಿಲಿಕೆ, ಸಕಾರಾತಕ ಜಾಗತಿಕ ಸೂಚನೆಗಳಿಂದ ಬಹುತೇಕ ಎಲ್ಲಾ ಕಂಪನಿಗಳ ಕ್ಷೇರು ಒಮಲೆ ಗಗನಕ್ಕೇರಿದವು ಎಂದು ವಿಶ್ಲೇಷಕರು ಬಣ್ಣಿಸಿದ್ದಾರೆ. ಆಕ್ಸಿಸ್ ಬ್ಯಾಂಕ್, ಬಜಾಜ್‌ಫಿನ್ ಸರ್ವ್, ಬಜಾಜ್ ಫೈನಾನ್ಸ್, ಅದಾನಿ ಪೋರ್ಟ್ಸ್ ರಿಲಯನ್ಸ್ ನಂತಹ ಹೆವಿವೇಯ್ಟ್ ಷೇರುಗಳು ಸಹ 4% ರಷ್ಟು ಏರಿತು. ವಾರಾಂತ್ಯದ ಬೆಳವಣಿಗೆಗಳಿಂದಾಗಿ ಷೇರು ಮಾರುಕಟ್ಟೆ ಬಲವಾದ ಚೇತರಿಕೆ ಕಾಣುವ ನಿರೀಕ್ಷೆಯಿದೆ ಎಂದು ಬಹುತೇಕ ಎಲ್ಲಾ ವಿಶ್ಲೇಷಕರು ಸೂಚಿಸಿದ್ದರು. ಹೂಡಿಕೆದಾರರಲ್ಲಿ ಉತ್ಸಾಹ ಕಂಡುಬಂದಿದ್ದು , ಕಳೆದ ವಾರದ ಕಹಿ ಅನುಭವ ಮರೆತಂತಾಗಿದೆ .ಆದರೆ ಭಾರತ –ಪಾಕ್ ನಡುವೆ ನಡೆಯುವ ಮಾತುಕತೆ, ನಂತರ ಬೆಳವಣಿಗೆ ಭಾರಿ ಮಹತ್ವ ಪಡೆದಿದೆ.

### ಬಂದ್ ಮಾಡಲ್ಪಟ್ಟಿದ್ದ 32 ವಿಮಾನ ನಿಲ್ದಾಣಗಳು ಮತ್ತೆ ಓಪನ್

**ನವದೆಹಲಿ:** ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆಯಿಂದ ಮುಚ್ಚಲ್ಪಟ್ಟಿದ್ದ ದೇಶದ 32 ವಿಮಾನ ನಿಲ್ದಾಣಗಳು ಮತ್ತೆ ಕಾರ್ಯಾರಂಭ ಮಾಡಲು ಸಿದ್ಧತೆ ನಡೆಸಿವೆ. 32 ವಿಮಾನ ನಿಲ್ದಾಣಗಳನ್ನು ತೆರೆಯುವಂತೆ ಭಾರತೀಯ ವಾಯುಪಡೆ ಅಧಿಕಾರಿಗಳು ಸೂಚನೆ ನೀಡಿದ ಬಳಿಕ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಸಂಬಂಧಪಟ್ಟ ವಿಮಾನ ನಿಲ್ದಾಣಗಳಿಗೆ ಇಂತಹ ಸೂಚನೆ ನೀಡಿದೆ. ಹೀಗಾಗಿ ದೇಶದ ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ತಾತ್ಕಾಲಿಕವಾಗಿ ಮುಚ್ಚಲಾಗಿದ್ದ ಏರ್‌ಪೋರ್ಟ್‌ಗಳು ಮತ್ತೆ ಕಾರ್ಯಾರಂಭ ಮಾಡಲಿವೆ. ಇತ್ತೀಚೆಗೆ ಭಾರತ ಪಾಕ್ ನಡುವಿನ ಸಂಘರ್ಷ ತೀವ್ರಗೊಂಡಿತ್ತು. ಈ ಹಿನ್ನೆಲೆ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು 32 ವಿಮಾನ ನಿಲ್ದಾಣಗಳನ್ನು ಮೇ 15ರವರೆಗೆ ತಾತ್ಕಾಲಿಕವಾಗಿ ಬಂದ್ ಮಾಡುವಂತೆ ಸೂಚಿಸಿತ್ತು.

ಪಂಜಾಬ್‌ನ ಅಮೃತಸರ, ಲುಧಿಯಾನ, ಪಟಿಯಾಲ, ಬಟಿಂಡಾ, ಹಲ್ವಾರಾ, ಪಠಾಣ್ ಕೋಟ್, ಹಿಮಾಚಲ ಪ್ರದೇಶದ ಭುಂತರ್, ಶಿಮ್ಲಾ ಮತ್ತು ಕಾಂಗ್ರಾ, ಗಗ್ಗಲ್, ಚಂಡೀಗಢ, ಜಮ್ಮು ಮತ್ತು ಕಾಶ್ಮೀರದ ಶ್ರೀನಗರ, ಜಮ್ಮು, ಲಡಾಖ್‌ನ ಲೇಹ್, ರಾಜಸ್ಥಾನದ ಕಿಶನ್‌ಗಢ, ಜೈಪುರ್, ಜೋದ್‌ಪುರ ಮತ್ತು ಬಿಕಾನೇರ್ ಮತ್ತು ಗುಜರಾತ್‌ನ ಮುಂದ್ರ, ಜಾಮ್‌ನಗರ ಸೇರಿದಂತೆ ಹಲವು ವಿಮಾನ ನಿಲ್ದಾಣಗಳನ್ನು ಬಂದ್ ಮಾಡಲಾಗಿತ್ತು. ಆದ್ರೆ ಭಾರತ–ಪಾಕ್ ನಡುವೆ ಕದನ ವಿರಾಮ ಘೋಷಣೆಯಾದ ಬೆನ್ನಲ್ಲೇ ಏರ್ ಪೋರ್ಟ್‌ಗಳನ್ನು ಕಾರ್ಯಾಚರಣೆ ಪುನರಾರಂಭಿಸುತೆ ಭಾರತೀಯ ವಾಯುಸೇನೆ ಸೂಚನೆ ನೀಡಿದೆ.

### ಗಡಿಯಲ್ಲಿ ಕೇಳಿಸದ ಗುಂಡಿನ ಸದ್ದು, ಶಾಂತತೆ, ಸಹಜ ಸ್ಥಿತಿಯತ್ತ ಕಾಶ್ಮೀರ




**ಶ್ರೀನಗರ:** ಭಾರತ, ಪಾಕಿಸ್ತಾನವು ಶನಿವಾರ ಸಂಜೆ ಶಾಂತಿ ಒಪ್ಪಂದಕ್ಕೆ ಒಪ್ಪಿದ ನಂತರ ಮಧ್ಯರಾತ್ರಿ ಜಮ್ಮು ಮತ್ತು ಕಾಶ್ಮೀರ ಇತರ ಪ್ರದೇಶಗಳಲ್ಲಿ ಶಾಂತವಾಗಿತ್ತು. ಗಡಿ ಪ್ರದೇಶಗಳಲ್ಲಿ ಯಾವುದೇ ಶೆಲ್ಲಿಂಗ್ ಮತ್ತು ಗುಂಡಿನ ಮೊರೆತ ನಡೆದ ಘಟನೆಗಳು ವರದಿಯಾಗಿಲ್ಲ, ಇದು 19 ದಿನಗಳಲ್ಲಿ ಮೊದಲ ಬಾರಿಗೆ ಶಾಂತ ರಾತ್ರಿಯಾಗಿತ್ತು. ಏಪ್ರಿಲ್ 23 ರಿಂದ ಮೇ 6 ರ ತನಕ, ಕ್ಯುರೋಲ್ಮನ್ ವಿಭಾಗಗಳಲ್ಲಿ ಸಣ್ಣ ಶಸ್ತ್ರಗಳು ಕಾರ್ಯಾಚರಣೆಗಳ ಘಟನೆಗಳು ವರದಿಯಾಗಿದ್ದವು, ಮೇ 7, 11ರ ನಡುವೆ ತೀವ್ರ ಶೆಲ್ಲಿಂಗ್, ಏಕಗತ ದಾಳಿಗಳಿಗೆ ಏಕಕಾಲಕ್ಕೆ ಏರಿಕೆಯಾಗಿ ಪರಿಸ್ಥಿತಿ ಯುದ್ಧದ ಭೀತಿ ಸೃಷ್ಟಿಸಿತ್ತು. ಪೂಂಚ್ ನ ಸುರಾಂಕೋಟ್‌ನಲ್ಲಿ ಶಾಂತಿಯನ್ನು ಪುನಸ್ಥಾಪಿಸಲು ಪ್ರಯತ್ನಿಸಲಾಗಿದೆ. ಇದು ಶಾಂತಿಗೆ ಒಪ್ಪಿಕೊಂಡ ನಂತರದ ರಾತ್ರಿ ವ್ಯಾಪಾರ ಪ್ರದೇಶಗಳಲ್ಲಿ ಶಾಂತತೆ ಕಂಡು ಬರತೊಡಗಿದೆ. ಎರಡು ದಿನಗಳ ಹಿಂದೆ, ಸುರಣಕೋಟಿನಲ್ಲಿ ಭಾರಿ ಗುಂಡಿನ ಚಕಮಕಿ ನಡೆದಿತ್ತು. ಇದರಿಂದ ನಿವಾಸಿಗಳ ನಡುವೆ ಆತಂಕ ಉಂಟಾಗಿತ್ತು. ಪ್ರಹಾರದ ನಂತರ, ನಿವಾಸಿಗಳು ನಗರವನ್ನು ಬಿಟ್ಟು ಹೋಗಿದರು. ಕೆಲವರು ಹತ್ತಿರದ ಬೆಟ್ಟಗಳಲ್ಲಿ ಮತ್ತು ಬಂಕರ್‌ಗಳಲ್ಲಿ ಅಡಗಿಕೊಂಡಿದ್ದರು.

ಇತರರು ಜಮ್ಮು ಗಡಿಯ ಸುರಕ್ಷಿತ ಭಾಗಗಳಿಗೆ ಹೋಗಿದರು. ಸ್ಥಿತಿ ಈಗ ಉತ್ತಮಗೊಳ್ಳುತ್ತಿರುವಾಗ, ಜನರು ಪೂಂಚ್‌ನಲ್ಲಿರುವ ತಮ್ಮ ಮನೆಗಳಿಗೆ ಶೀಘ್ರದಲ್ಲಿ ಮರಳುವ ನಿರೀಕ್ಷೆ ಹೊಂದಿದ್ದಾರೆ. ಶ್ರೀನಗರ, ಪಠಾಣಕೋಟ್, ರಾಜೇರಿ, ಅಷ್ಟೂರ, ಜಮ್ಮು, ಕುಲ್ಬಾಂ, ಶ್ರೀಗಂಗಾನಗರ, ಬಡ್ಡಮ್ ಇತ್ಯಾದಿಗಳಿಂದ ಅನೇಕ ದೃಶ್ಯಗಳು ಆನ್‌ಲೈನ್‌ನಲ್ಲಿ ಬರುವುದಾಗಿದೆ. ಇದು ಸ್ಥಿತಿಯು ಸಾಮಾನ್ಯವಾಗಿದೆ ಎಂದು ತೋರಿಸುತ್ತದೆ. ಪ್ರಕಟಣೆ ಸಾಮಾನ್ಯತೆ ಕೇವಲ ಗಡಿಪಂತ ಪ್ರದೇಶ ಗಳಿಗೆ ಮಾತ್ರವಲ್ಲದೆ, ಚಂಡೀಗಡ ಸೇರಿದಂತೆ ಇತರ ನಗರಗಳಿಗೆ ಕೂಡ ಮರಳುತೊಡಗಿವೆ.

### ಭಾರತದೊಂದಿಗಿನ ಸಂಘರ್ಷದಲ್ಲಿ ಒಂದು ವಿಮಾನಕ್ಕೆ ಹಾನಿಯಾಗಿದೆ

**ಇಸ್ಲಾಮಾಬಾದ್:** ಭಾರತದೊಂದಿಗಿನ ಮಿಲಿಟರಿ ಸಂಘರ್ಷದಲ್ಲಿ ತನ್ನ ಒಂದು ವಿಮಾನಕ್ಕೆ ಸಣ್ಣ ಹಾನಿಯಾಗಿದೆ ಎಂದು ಪಾಕಿಸ್ತಾನ ಸೇನೆ ಒಪ್ಪಿಕೊಂಡಿದೆ. ವಾಯುಪಡೆ, ನೌಕಾಪಡೆಯ ಅಧಿಕಾರಿಗಳೊಂದಿಗೆ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಪಾಕಿಸ್ತಾನ ಸೇನಾ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಷರೀಫ್ ಚೌಧರಿ, ಅಪರೇಷನ್ ಬನ್ಯನ್ – ಉಮ್–ಮರ್ಸೂಸ್ ತೀರ್ಮಾನದ ಬಗ್ಗೆ ತಿಳಿಸುವುದು ಈ ಪತ್ರಿಕಾಗೋಷ್ಠಿಯ ಉದ್ದೇಶವಾಗಿದೆ ಎಂದು ಹೇಳಿದ್ದಾರೆ.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಪಾಕಿಸ್ತಾನದ ಒಂದು ವಿಮಾನ ಮಾತ್ರ ಸ್ವಲ್ಪ ಹಾನಿಗೊಳಗಾಗಿದೆ ಎಂದಿದ್ದಾರೆ. ಆದರೆ ವಿಮಾನದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅವರು ನೀಡಿಲ್ಲ. ಭಾರತೀಯ ಪೈಲಟ್‌ಗಳಲ್ಲಿ ಯಾರೂ ಪಾಕಿಸ್ತಾನದ ವಶದಲ್ಲಿಲ್ಲ. ಇದು ಸುಳ್ಳು ಸುದ್ದಿಯಾಗಿದ್ದು, ಸಾಮಾಜಿಕ ಮಾಧ್ಯಮಗಳ ವರದಿಗಳನ್ನು ಆಧರಿಸಿವೆ ಎಂದರು.




## ವಿರಾಟ್ ಕೊಹ್ಲಿ ನಿವೃತ್ತಿ ಪತ್ರ



ಟೆಸ್ಟ್ ಕ್ರಿಕೆಟ್‌ನಲ್ಲಿ ಮೊದಲ ಬಾರಿಗೆ ಬ್ಯಾಗಿ ಬ್ಲೂ ಕ್ಯಾಪ್ ಧರಿಸಿ 14 ವರ್ಷಗಳು ಕಳೆದಿವೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಈ ಸ್ವರೂಪವು ನನ್ನನ್ನು ಈ ಪ್ರಯಾಣಕ್ಕೆ ಕರೆದೊಯ್ಯುತ್ತದೆ ಎಂದು ನಾನು ಎಂದಿಗೂ ಊಹಿಸಿರಲಿಲ್ಲ. ಇದು ನನ್ನನ್ನು ಪರೀಕ್ಷಿಸಿದೆ, ನನ್ನನ್ನು ರೂಪಿಸಿದೆ ಮತ್ತು ನಾನು ಜೀವನಪರ್ಯಂತ ಸಾಗಿಸುವ ಪಾಠಗಳನ್ನು ಕಲಿಸಿದೆ. ಬಿಳಿಯ ಉಡುಪಿನಲ್ಲಿ ಆಡುವುದರಲ್ಲಿ ಆಳವಾದ ವೈಯಕ್ತಿಕ ಅಂಶವಿದೆ. ಶಾಂತವಾದ ಜಂಜಾಟ, ದೀರ್ಘ ದಿನಗಳು, ಯಾರೂ ನೋಡದ ಸಣ್ಣ ಕ್ಷಣಗಳು. ಇವೆಲ್ಲವೂ ನಿಮ್ಮೊಂದಿಗೆ ಶಾಶ್ವತವಾಗಿ ಉಳಿಯುತ್ತವೆ. ನಾನು ಈ ಸ್ವರೂಪದಿಂದ ದೂರ ಸರಿಯುತ್ತಿರುವುದು ಸುಲಭದ ನಿರ್ಧಾರವಲ್ಲ. ಆದರೆ ಇದುವೇ ಸರಿ ಎಂದು ಅನಿಸುತ್ತದೆ. ನಾನು ಹೊಂದಿದ್ದ ಎಲ್ಲಾವನ್ನೂ ಟೆಸ್ಟ್ ಕ್ರಿಕೆಟ್‌ಗೆ ನೀಡಿದ್ದೇನೆ. ಅಲ್ಲದೆ ನಾನು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನದನ್ನು ಅದರಿಂದ ನನಗೆ ದಕ್ಕಿದೆ. ನನ್ನೊಂದಿಗೆ ಆಡಿದ ಪ್ರತಿಯೊಬ್ಬರಿಗೂ ಕೃತಜ್ಞತೆ ಅರ್ಪಿಸುತ್ತೇನೆ. ಅಲ್ಲದೆ ಯಾವತ್ತಿದ್ದರೂ ನಾನು ನನ್ನ ಟೆಸ್ಟ್ ವೃತ್ತಿಜೀವನವನ್ನು ನಗುವಿನೊಂದಿಗೆ ಹಿಂತಿರುಗಿ ನೋಡುತ್ತೇನೆ 269, ಸೈನ್ ಆಫ್. ಎಂದು ವಿರಾಟ್ ಕೊಹ್ಲಿ ತಮ್ಮ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಪೋಸ್ಟ್ ಹಂಚಿಕೊಳ್ಳುವ ಮೂಲಕ ನಿವೃತ್ತಿ ಘೋಷಿಸಿದ್ದಾರೆ.

# ಟೆಸ್ಟ್ ಕ್ರಿಕೆಟ್‌ಗೆ ವಿರಾಟ್ ಕೊಹ್ಲಿ ವಿದಾಯ




**ಕ್ರಿಕೆಟ್ ಲೋಕದ ಅನಭಿಷಿಕ್ತ ದೊರೆ**

ಟೀಮ್ ಇಂಡಿಯಾದ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಂಚಿಕೊಳ್ಳುವ ಮೂಲಕ ಕೊಹ್ಲಿ ಅಧಿಕೃತವಾಗ ನಿವೃತ್ತಿ ಘೋಷಿಸಿದ್ದಾರೆ. ಇದರೊಂದಿಗೆ ಕಿಂಗ್ ಕೊಹ್ಲಿಯ 14 ವರ್ಷದ ಟೆಸ್ಟ್ ಕೆರಿಯರ್ ಅಂತ್ಯಗೊಂಡಂತಾಗಿದೆ.

ಇದಕ್ಕೂ ಮುನ್ನ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಲಿದ್ದಾರೆ ಎಂಬ ಸುದ್ದಿಗಳು ಹರಿದಾಡಿದ್ದವು. ಹೀಗಾಗಿ ಬಿಸಿಸಿಐ ಅವರ ಮನವೊಲಿಸಲು ಮುಂದಾಗಿತ್ತು. ಆದರೆ ಈ ಮಾತುಕತೆ ಫಲಪ್ರದವಾಗಿಲ್ಲ. ಹೀಗಾಗಿಯೇ ಇದೀಗ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿರುವುದನ್ನು ಅಧಿಕೃತಗೊಳಿಸಿದ್ದಾರೆ. 2011 ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಕಣಕ್ಕಿಳಿಯುವ ಮೂಲಕ ಟೆಸ್ಟ್ ಕೆರಿಯರ್ ಆರಂಭಿಸಿದ್ದ ವಿರಾಟ್ ಕೊಹ್ಲಿ, 2014 ರಲ್ಲಿ ಭಾರತ ಟೆಸ್ಟ್ ತಂಡದ ನಾಯಕರಾಗಿ ಆಯ್ಕೆಯಾಗಿದ್ದರು. ಇದಾದ ಬಳಿಕ ಅವರು ಹಿಂತಿರುಗಿ ನೋಡಿಲ್ಲ ಎನ್ನಬಹುದು. ಅಲ್ಲದೆ ಟೀಮ್ ಇಂಡಿಯಾ ಪರ 123 ಟೆಸ್ಟ್ ಪಂದ್ಯಗಳಲ್ಲಿ ಕಣಕ್ಕಿಳಿದಿರುವ ಅವರು 210 ಇನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿದ್ದಾರೆ. ಈ ವೇಳೆ 16608 ಎಸೆತಗಳನ್ನು ಎದುರಿಸಿರುವ ಕೊಹ್ಲಿ ಒಟ್ಟು 9230 ರನ್ ಕಲೆಹಾಕಿದ್ದಾರೆ. ಇದರ ನಡುವೆ 30 ಶತಕ ಹಾಗೂ 31 ಅರ್ಧಶತಕಗಳನ್ನು ಬಾರಿಸಿದ್ದಾರೆ.

ಹಾಗೆಯೇ ಭಾರತ ಟೆಸ್ಟ್ ತಂಡವನ್ನು 68 ಪಂದ್ಯಗಳಲ್ಲಿ ಮುನ್ನಡೆಸಿದ್ದಾರೆ. ಕೊಹ್ಲಿ ನಾಯಕತ್ವದಲ್ಲಿ ಟೀಮ್ ಇಂಡಿಯಾ 40 ಪಂದ್ಯಗಳಲ್ಲಿ ಜಯ ಸಾಧಿಸಿದರೆ, ಕೇವಲ 17 ಮ್ಯಾಚ್‌ಗಳಲ್ಲಿ ಮಾತ್ರ ಸೋಲನುಭವಿಸಿದೆ. ಇನ್ನು 11 ಪಂದ್ಯಗಳಲ್ಲಿ ಭಾರತ ತಂಡವು ಡ್ರಾ ಸಾಧಿಸಿದೆ. ಈ ಮೂಲಕ ವಿರಾಟ್ ಕೊಹ್ಲಿ ಭಾರತ ಟೆಸ್ಟ್ ತಂಡದ ಅತ್ಯಂತ ಯಶಸ್ವಿ ನಾಯಕ ಎನಿಸಿಕೊಂಡಿದ್ದಾರೆ.


ಇದೀಗ 14 ವರ್ಷಗಳ ತಮ್ಮ ಟೆಸ್ಟ್ ಕೆರಿಯರ್‌ಗೆ ವಿರಾಮ ಇಟ್ಟಿರುವ ಕಿಂಗ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ ಮಾತ್ರ ಮುಂದುವರೆಯುವುದಾಗಿ ತಿಳಿಸಿದ್ದಾರೆ. ಇದಕ್ಕೂ ಮುನ್ನ 2024 ರಲ್ಲಿ ನಡೆದ ಟಿ20 ವಿಶ್ವಕಪ್‌ನ ಫೈನಲ್ ಪಂದ್ಯದ ಬೆನ್ನಲ್ಲೇ ಕೊಹ್ಲಿ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಇದೀಗ ದಿಢೀರ್ ಆಗಿ ಟೆಸ್ಟ್ ಕ್ರಿಕೆಟ್‌ಗೂ ನಿವೃತ್ತಿ ಘೋಷಿಸಿ ಅಚ್ಚರಿ ಮೂಡಿಸಿದ್ದಾರೆ.




## ಕೊಹ್ಲಿಯಂಥ ಮತ್ತೊಬ್ಬ ಬ್ಯಾಟರ್ ಸಿಗಲಾರ


ಸಾಂಪ್ರದಾಯಿಕ ಕ್ರಿಕೆಟ್ ಆವೃತ್ತಿಯಲ್ಲಿ ಇನ್ನು ವಿರಾಟ್ ಕೊಹ್ಲಿಯ ಬ್ಯಾಟಿಂಗ್ ಸೊಬಗು, ಅಗ್ರೆಷನ್, ಎದುರಾಳಿ ಶಿಬಿರವನ್ನು ನುಗ್ಗಿ ಆಕ್ರಮಣ ಮಾಡುವ ವೈಖರಿ, ಆಯಂಟಿಕ್ಸ್, ತಡವಿದರೆ ಸುಮ್ಮನೆ ಬಿಡಲ್ಲವೆಂಬ ಛಲಗಾರಿಕೆ ಕಾಣಸಿಗದು. ಕ್ರಿಕೆಟ್ ಮೈದಾನದಲ್ಲಿ ಅಕ್ಷರಶಃ ಕಿಂಗ್ ಆಗಿದ್ದ ಕೊಹ್ಲಿ, ರೋಹಿತ್ ಶರ್ಮಾ ನಂತರ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಭಾರತಕ್ಕೆ ಮತ್ತೊಬ್ಬ ಕೊಹ್ಲಿ ಸಿಗಲಾರ. ಅವರು ರಿಟೈರಾಗಲಿ ಅಂತ ಕೆಲವರು ಹೇಳುತ್ತಿದ್ದಿದ್ದು ನಿಜವಾದರೂ, ಮೊನ್ನೆಯಷ್ಟೇ ಇನ್ನೂ ಮೂರು ವರ್ಷಗಳ ಕಾಲ ಟೆಸ್ಟ್ ಕ್ರಿಕೆಟ್ ಆಡುತ್ತೇನೆಂದಿದ್ದ ಕೊಹ್ಲಿ ಅದ್ಯಾಕೆ ನಿವೃತ್ತಿ ಘೋಷಿಸಿದರೋ ಅವರ ಮತ್ತು ಕೋಚ್ ಗೌತಮ್ ಗಂಭೀರ್ ನಡುವೆ ಉತ್ತಮ ಬಾಂಧವ್ಯ ಇಲ್ಲದಿರೋದು ವಿದಾಯ ಹೇಳಲು ಕಾರಣವಾಯಿತೇ

## ವಿರಾಟ್ ನಿವೃತ್ತಿ ಬಗ್ಗೆ ರಾಜೀವ್ ಘಾಯ್ ಮಾತು



ಪರೇಷನ್ ಸಿಂಧೂರ್ ಕುರಿತು ಭಾರತದ ಮೂರು ಸೇನಾ ಅಧಿಕಾರಿಗಳು ಇಂದು ಜಂಟಿಯಾಗಿ ಸುದ್ದಿಗೋಷ್ಠಿ ನಡೆಸಿದರು. ಈ ವೇಳೆ ಮಾತು ಆರಂಭಿಸಿದ ಡಿಜಿಎಂಒ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಮೊದಲಿಗೆ ವಿರಾಟ್ ಕೊಹ್ಲಿಯ ಟೆಸ್ಟ್ ನಿವೃತ್ತಿಯ ಬಗ್ಗೆ ಮಾತನಾಡಿದರು. ಈ ವೇಳೆ ಅವರು, 'ನಾವು ಇಂದು ಕ್ರಿಕೆಟ್ ಬಗ್ಗೆ ಮಾತನಾಡಬಹುದು. ನಿಮಗೆಲ್ಲರಿಗೂ ತಿಳಿದಿರುವ ಹಾಗೆ ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಎಲ್ಲಾ ಭಾರತೀಯರಂತೆ ನನಗೂ ಕೂಡ ಕೊಹ್ಲಿ ನೆಚ್ಚಿನ ಕ್ರಿಕೆಟಿಗ ಎಂದಿದ್ದಾರೆ.

## ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್




'ನೀವು ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗುತ್ತಿದ್ದಂತೆ, 12 ವರ್ಷಗಳ ಹಿಂದೆ ನಾನು ನನ್ನ ಕೊನೆಯ ಟೆಸ್ಟ್ ಆಡಿದ ಆ ಸಮಯದ ಸುಂದರ ಘಟನೆಯೊಂದು ನನಗೆ ನೆನಪಾಗುತ್ತದೆ. ಆ ಸಮಯದಲ್ಲಿ ನೀವು ನಿಮ್ಮ ದಿವಂಗತ ತಂದೆಯ ನೆನಪಿಗಾಗಿ ನನಗೆ ಒಂದು ದಾರವನ್ನು (ಮಂತ್ರಿಸಿ ಕೊಡುವ ದಾರಗಳು ಕಷ್ಟ ನಿವಾರಿಸಿ ಹೊಸ ದಾರಿ ತೋರಿಸುತ್ತವೆ ಎಂಬ ನಂಬಿಕೆ ಬಹಳ ಜನರದ್ದು) ಉಡುಗೊರೆಯಾಗಿ ನೀಡಲು ಮುಂದಾದಿರಿ. ಅದು ತುಂಬಾ ವೈಯಕ್ತಿಕ ವಿಷಯವಾಗಿತ್ತು, ಆದ್ದರಿಂದ ಅದನ್ನು ತೆಗೆದುಕೊಳ್ಳುವುದು ಸರಿಯಲ್ಲ ಎಂದು ನಾನು ಭಾವಿಸಿದೆ. ಆದರೆ ನಿಮ್ಮ ಭಾವನೆಗಳು ಇನ್ನೂ ನನ್ನ ಹೃದಯವನ್ನು ಮುಟ್ಟುತ್ತವೆ. ಪ್ರತಿಯಾಗಿ ನೀಡಲು ನನ್ನ ಬಳಿ ಯಾವುದೇ ಥ್ರೆಡ್ ಇಲ್ಲದಿದ್ದರೂ, ನನಗೆ ನಿಮ್ಮ ಬಗ್ಗೆ ತುಂಬಾ ಗೌರವವಿದೆ. ನಿಮ್ಮ ನಿವೃತ್ತಿಗೆ ನಾನು ಹೃದಯಾಂತರಾಳದಿಂದ ಶುಭಾಶಯಗಳು. ವಿರಾಟ್, ನಿಮ್ಮ ನಿಜವಾದ ಪರಂಪರೆಯೆಂದರೆ ದೇಶದ ಅಸಂಖ್ಯಾತ ಯುವಕರನ್ನು ಕ್ರಿಕೆಟ್ ಆಡಲು ಪ್ರೇರೇಪಿಸಿದ್ದೀರಿ. ನಿಮ್ಮ ಟೆಸ್ಟ್ ವೃತ್ತಿಜೀವನವು ಅತ್ಯುತ್ತಮವಾಗಿದೆ. ನೀವು ಕೇವಲ ರನ್ ಮಾತ್ರ ಕಲೆಹಾಕಿಲ್ಲ, ಬದಲಿಗೆ ಭಾರತೀಯ ಕ್ರಿಕೆಟ್‌ಗೆ ಹೊಸ ಗುರುತು, ಹೊಸ ಶಕ್ತಿ ಮತ್ತು ಹೊಸ ಅಭಿಮಾನಿಗಳನ್ನು ನೀಡಿದ್ದೀರಿ. ನಿಮ್ಮ ಅದ್ಭುತ ಟೆಸ್ಟ್ ವೃತ್ತಿಜೀವನಕ್ಕೆ ಅಭಿನಂದನೆಗಳು ಎಂದು ಬರೆದುಕೊಂಡಿದ್ದಾರೆ.

## ವಿಡಿಯೋ ಹಂಚಿಕೊಂಡ ಆರ್‌ಸಿಬಿ



ಐಪಿಎಲ್ ಫ್ರಾಂಚೈಸಿ ಆರ್‌ಸಿಬಿ ಕೂಡ ಕೊಹ್ಲಿ ಕೊನೆಯದಾಗಿ ಶತಕ ಸಿಡಿಸಿದ ಪಂದ್ಯದ ಹೈಲೇಟ್ಸ್ ಹಂಚಿಕೊಳ್ಳುವ ಮೂಲಕ ರನ್ ಸಾಮ್ರಾಟನಿಗೆ ಭಾವಪೂರ್ಣ ಧನ್ಯವಾದ ತಿಳಿಸಿದೆ. ವಾಸ್ತವವಾಗಿ ಕಳೆದ ವರ್ಷ ಆಸ್ಟ್ರೇಲಿಯಾ ನೆಲದಲ್ಲಿ ನಡೆದಿದ್ದ ಬಾರ್ಡರ್ ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲೇ ಕೊಹ್ಲಿ ಅಜೇಯ ಶತಕ ಸಿಡಿಸಿದ್ದರು. ಪರ್ತ್‌ನಲ್ಲಿ ನಡೆದಿದ್ದ ಮೊದಲ ಟೆಸ್ಟ್ ಪಂದ್ಯದ ಎರಡನೇ ಇನ್ನಿಂಗ್ಸ್‌ನಲ್ಲಿ ಕೊಹ್ಲಿ 143 ಎಸೆತಗಳಲ್ಲಿ 8 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ 100 ರನ್ ಬಾರಿಸಿದರು. ಕೊಹ್ಲಿ, ಆಸೀಸ್ ನಾಯಕ ಪ್ಯಾಟ್ ಕಮ್ಮಿನ್ಸ್ ಸ್ಲಿಪ್‌ನಲ್ಲಿ ನೀಡಿದ ಕ್ಯಾಚ್ ಅನ್ನು ಕೊಹ್ಲಿ ಅದ್ಭುತವಾಗಿ ಹಿಡಿದಿದ್ದರು. ಇದೀಗ ಅದರ ವಿಡಿಯೋವನ್ನು ತನ್ನ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿರುವ ಆರ್‌ಸಿಬಿ, ಭಾರತ ಟೆಸ್ಟ್ ಕ್ರಿಕೆಟ್ ಅನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದ ಕೊಹ್ಲಿಗೆ ಧನ್ಯವಾದ ತಿಳಿಸಿದೆ.

ನಟಿಗೆ ಬಿಗ್ ಚಾನ್ಸ್



## ಉಪೇಂದ್ರಗೆ ಅಂಕಿತಾ ಅಮರ್ ನಾಯಕಿ

ನಮ್ಮನೆ ಯುವರಾಣಿ ಸೀರಿಯಲ್ ಮೂಲಕ ಬಣ್ಣದ ಬದುಕಿಗೆ ಕಾಲಿಟ್ಟ ಅಂಕಿತಾ ಅಮರ್ ಕನ್ನಡದ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಇದೀಗ ನಟಿಗೆ ಬಿಗ್ ಆಫರ್‌ವೊಂದು ಅರಸಿ ಬಂದಿದೆ. ರಿಯಲ್ ಸ್ಟಾರ್ ಉಪೇಂದ್ರಗೆ ಅಂಕಿತಾ ನಾಯಕಿಯಾಗಿ ನಟಿಸುತ್ತಿದ್ದಾರೆ. ನಾಗಣ್ಣ ನಿರ್ದೇಶನದ, ಸೂರಪ್ಪ ಬಾಬು ನಿರ್ಮಾಣದ 'ಭಾರ್ಗವ' ಚಿತ್ರಕ್ಕೆ ನಾಯಕಿಯಾಗಿ ಅಂಕಿತಾ ಸೆಲೆಕ್ಟ್ ಆಗಿದ್ದಾರೆ. ಈ ಸಿನಿಮಾದಲ್ಲಿ ನಟಿಗೆ ಉತ್ತಮ ಪಾತ್ರವೇ ಸಿಕ್ಕಿದೆ. ಉಪೇಂದ್ರ ಅವರು 'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರದಲ್ಲಿ ಅಂಕಿತಾ ನಟನೆ ನೋಡಿ 'ಭಾರ್ಗವ' ಚಿತ್ರಕ್ಕೆ ಇವರೇ ಸೂಕ್ತ ಎಂದು ಹೇಳಿದ್ದರು. ಹೀಗಾಗಿ ಅಂಕಿತಾಗೆ ಉಪೇಂದ್ರ ಜೊತೆ ನಟಿಸುವ ಒಂದೊಳ್ಳೆಯ ಅವಕಾಶ ಸಿಕ್ಕಿದೆ. ಶೈನ್ ಶೆಟ್ಟಿ 'ಜಸ್ಟ್ ಮ್ಯಾರೀಡ್', ಪೃಥ್ವಿ ಅಂಬರ್ ಜೊತೆ 'ಅಬ ಜಬ ದಬ' ಸಿನಿಮಾಗಳು ನಟಿಯ ಕೈಯಲ್ಲಿವೆ. ಕಳೆದ ವರ್ಷ ರಕ್ಷಿತ್ ಶೆಟ್ಟಿ ನಿರ್ಮಾಣದ 'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರದಲ್ಲಿ ವಿಹಾನ್‌ಗೆ ನಾಯಕಿಯಾಗಿ ನಟಿಸಿದ್ದರು ಅಂಕಿತಾ.



## ಕಾಮಿಡಿ ಕಿಲಾಡಿ-3 ವಿನ್ನರ್ ರಾಕೇಶ್ ನಿಧನ



ಕಾಮಿಡಿ ಕಿಲಾಡಿ ಸೀಸನ್ 3 ವಿನ್ನರ್, ಕನ್ನಡದ ಕಿರುತೆರೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಜನಪ್ರಿಯ ಹಾಸ್ಯ ಕಲಾವಿದ ರಾಕೇಶ್ ಪೂಜಾರಿ ನಿಧನರಾಗಿದ್ದಾರೆ.

ಉಡುಪಿ ಮೂಲದ ಜನಪ್ರಿಯ ಕಲಾವಿದ, ಕಿರುತೆರೆ, ಸಿನಿಮಾ ಲಭ್ಯ ಲೋಕದಲ್ಲಿ ಅಪಾರ ಖ್ಯಾತಿ ಗಳಿಸಿದ್ದ 34 ವರ್ಷದ ರಾಕೇಶ್ ಪೂಜಾರಿ ಸೋಮವಾರ ಬೆಳಗ್ಗಿನ ಜಾವ 3:30ರ ವೇಳೆಗೆ ಉಡುಪಿಯ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಕಳೆದ ರಾತ್ರಿ ಅವರು ಉಡುಪಿ ಜಿಲ್ಲೆಯ ಕಾರ್ಕಳದ ನಿಟ್ಟೆ ಸಮೀಪದ ಮೆಹಂದಿ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿ ಡ್ಯಾನ್ಸ್ ಮಾಡಿದ್ದರು. ನಿನ್ನೆಯಷ್ಟೇ ಕಾಂತಾರ ಪ್ರಿಕ್ವೆಲ್ ಶೂಟಿಂಗ್‌ನಲ್ಲಿ ಭಾಗಿಯಾಗಿದ್ದ ರಾಕೇಶ್, ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದರು. ಸ್ನೇಹಿತರ ಜೊತೆ ಇದ್ದಾಗ ಹೃದಯಘಾತ ಸಂಭವಿಸಿದೆ. ಲೋ ಬಿಪಿಯಿಂದ ಸಹ ಸಮಸ್ಯೆ ಕಾಣಿಸಿಕೊಂಡಿತ್ತು ಎಂದು ತಿಳಿದುಬಂದಿದೆ.

ಸುಸ್ತು ಅಂತ ಸ್ನೇಹಿತರ ಬಳಿ ಹೇಳಿದಾಗ ತಕ್ಷಣ ರಾಕೇಶ್ ಅವರನ್ನು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಯಿತಾದರೂ ಅಲ್ಲಿ ಅವರು ಚಿಕಿತ್ಸೆಗೆ ಸ್ಪಂದಿಸದೇ ನಿಧನರಾದರು. ರಾಕೇಶ್, ಕೊನೆಯದಾಗಿ ದಸ್ತಕ್ ಸಿನಿಮಾದ ಪ್ರೀಮಿಯರ್ ಶೋ ನಲ್ಲಿ ಭಾಗಿಯಾಗಿದ್ರು. ಅಲ್ಲದೇ ಇತ್ತೀಚೆಗಷ್ಟೇ ಆಕ್ಸಿಡೆಂಟ್ ಆಗಿತ್ತು, ಹೆಲ್ತ್ ಇಶ್ಯೂ ಇರಲಿಲ್ಲ ಎಂದು ತಿಳಿದುಬಂದಿದೆ.

ಸದ್ಯ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

ರಾಕೇಶ್ ನಿಧನಕ್ಕೆ ಕನ್ನಡ ಚಿತ್ರರಂಗ ಕಂಬನಿ ಮಿಡಿದಿದೆ. ನಟಿ ರಕ್ಷಿತಾ ಪ್ರೇಮ್ ಇನ್‌ಸ್ಟಾದಲ್ಲಿ ವಿಶೇಷ ಸಂದೇಶವೊಂದನ್ನು ಹಂಚಿಕೊಳ್ಳುವ ಮೂಲಕ ಸಂತಾಪ ಸೂಚಿಸಿದ್ದಾರೆ. ಜನಪ್ರಿಯ ಹಾಸ್ಯ ಕಾರ್ಯಕ್ರಮ 'ಕಾಮಿಡಿ ಕಿಲಾಡಿಗಳು ಸೀಸನ್ -3' ರ ಗ್ರ್ಯಾಂಡ್ ಫಿನಾಲೆಯಲ್ಲಿ ವಿನ್ನರ್ ಆಗಿದ್ದ ಉಡುಪಿ ನಿವಾಸಿ ರಾಕೇಶ್, ಹೂಡೆ ನಿವಾಸಿಗಳಾದ ದಿನಕರ್ ಪೂಜಾರಿ ಮತ್ತು ಶಾಂಭವಿ ದಂಪತಿಗಳ ಪುತ್ರ.

## ಲಂಡನ್‌ನಲ್ಲಿ ಸೆಲ್ಫಿಗಾಗಿ ಮುಗಿಬಿದ್ದ ಫ್ಯಾನ್ಸ್



'ಆರ್‌ಆರ್‌ಆರ್' ಚಿತ್ರದ ಲೈವ್ ಕಾನ್ಸರ್ಟ್ ಕಾರ್ಯಕ್ರಮ ಲಂಡನ್‌ನಲ್ಲಿ ಮೇ 11ರಂದು ಅದ್ದೂರಿಯಾಗಿ ಜರುಗಿದ್ದು, ಜ್ಯೂ.ಎನ್‌ಟಿಆರ್ ಕೂಡ ಭಾಗವಹಿಸಿದ್ದರು. ಈ ವೇಳೆ, ನಟನೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಫ್ಯಾನ್ಸ್ ಮುಗಿಬಿದ್ದಿದ್ದಾರೆ. ಅಭಿಮಾನಿಗಳ ಅತೀರೇಕದ ವರ್ತನೆಗೆ ಕಂಡು ನಟ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಲಂಡನ್‌ನ ರಾಯಲ್ ಆಲ್ಬರ್ಟ್ ಹಾಲ್‌ನಲ್ಲಿ 'ಆರ್‌ಆರ್ ಆರ್' ಚಿತ್ರದ ಲೈವ್ ಕಾನ್ಸರ್ಟ್ ನಡೆದಿದೆ. ಜ್ಯೂ.ಎನ್‌ಟಿಆರ್ ಕೂಡ ಭಾಗಿಯಾಗಿ ಎಂಜಾಯ್ ಮಾಡಿದ್ದಾರೆ. ಕಾರ್ಯಕ್ರಮದ ಬಳಿಕ ನಟನ ಜೊತೆಗೆ ಸೆಲ್ಫಿಗಾಗಿ ಫ್ಯಾನ್ಸ್ ಮುಗಿಬಿದ್ದಿದ್ದಾರೆ. ನಿಮ್ಮೆಲ್ಲರಿಗೂ ಫೋಟೋ ತೆಗೆದುಕೊಳ್ಳಲು ಅವಕಾಶ ಕೊಡುತ್ತೇನೆ ಆತುರಪಡಬೇಡಿ ಎಂದು ತಾಳ್ಮೆಯಿಂದಲೇ ಹೇಳಿದ್ದಾರೆ. ನಟನ ಮಾತಿಗೆ ಕ್ಯಾರೇ ಎನ್ನದೇ ನಟನತ್ತ ಗುಂಪು ಗುಂಪಾಗಿ ಕೆಲ ಅಭಿಮಾನಿಗಳು ಸೇರಿದ್ದಾರೆ. ಹೀಗಾಗಿ ಜ್ಯೂ.ಎನ್‌ಟಿಆರ್ ಕೋಪದಿಂದಲೇ ರಿಯಾಕ್ಟ್ ಮಾಡಿದ್ದಾರೆ. ಬಳಿಕ ಬಾಡಿಗಾರ್ಡ್ ಸಹಾಯದಿಂದ ಸ್ಥಳದಿಂದ ನಟ ತೆರಳಿದ್ದಾರೆ. ಈ ವಿಡಿಯೋ ಇದೀಗ ಸೋಷಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದೆ. 'ಆರ್‌ಆರ್‌ಆರ್' ಚಿತ್ರ 2022ರಲ್ಲಿ ಸಿನಿಮಾ ರಿಲೀಸ್ ಆಗಿತ್ತು. ರಾಜಮೌಳಿ ನಿರ್ದೇಶನದಲ್ಲಿ ರಾಮ್ ಚರಣ್, ಜ್ಯೂ.ಎನ್‌ಟಿಆರ್, ಆಲಿಯಾ ಭಟ್ ನಟಿಸಿದ್ದರು. ಪ್ರಸ್ತುತ ಪ್ರಶಾಂತ್ ನೀಲ್ ಜೊತೆಗಿನ ಹೊಸ ಸಿನಿಮಾದಲ್ಲಿ ತಾರಕ್ ಬ್ಯುಸಿಯಾಗಿದ್ದಾರೆ.

**ಅಭಿಮಾನಿಗಳ ಅತೀರೇಕದ ವರ್ತನೆ**

## ಬ್ಲಾಕ್ ಸೀರೆಯಲ್ಲಿ ಕಲರ್‌ಫುಲ್ ಆಗಿ ಮಿಂಚಿದ ನಭಾ!

ಸದಾ ಗ್ಲಾಮರ್ ಲುಕ್‌ನಲ್ಲಿ ಕಾಣಿಸಿಕೊಳ್ಳುವ 'ವಜ್ರಕಾಯ' ನಟಿ ನಭಾ ನಟೇಶ್ , ಈ ಬಾರಿ ಬ್ಲಾಕ್ ಸೀರೆಯಲ್ಲಿ ಕಲರ್‌ಫುಲ್ ಆಗಿ ಮಿಂಚಿದ್ದಾರೆ. ಸೀರೆಯಲ್ಲಿ ಮೈ ಕೈ ಕಾಣುವ ಹಾಗೆ ಬೆಚ್ಚಗೆ ಪೋಸ್ ಕೊಟ್ಟಿರುವ ನಟಿ, ಟ್ರೆಡಿಷನಲ್ ಆಗಿಯೂ ಕಣ್ಣುಕ್ಕುವಂತೆ ಕಾಣಿಸಿಕೊಂಡಿದ್ದಾರೆ. ಕ್ಯಾಮರಾ ಮುಂದೆ ಬೆಳ್ಳಿಗೆರೆಯಂತಹ ಸೊಂಟವನ್ನು ಪ್ರದರ್ಶಿಸಿರುವ ನಭಾ, ಆ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಸೀರೆಯಲ್ಲೂ ಗ್ಲಾಮರ್ ಆಗಿ ಮಿಂಚುತ್ತಿರುವ ನಟಿಗೆ, ಸಾಕಷ್ಟು ಕಾಮೆಂಟ್‌ಗಳು ಬಹುಮಾನವಾಗಿ ಸಿಕ್ಕಿವೆ.

'ನಾನು ದೋಚುಕುಂಡುವತೆ' ಚಿತ್ರದ ಮೂಲಕ ತೆಲುಗು ಪ್ರೇಕ್ಷಕರಿಗೆ ಪರಿಚಯವಾದ ನಭಾ ನಟೇಶ್, ಯುವ ಪ್ರೇಕ್ಷಕರ ಹೃದಯ ಗೆದ್ದಿದ್ದಾರೆ. ಅದಾದ ನಂತರ, 'ಇಸ್ಮಾರ್ಟ್ ಶಂಕರ್' ಚಿತ್ರದ ಮೂಲಕ ರಾತ್ರೋರಾತ್ರಿ ಕ್ರೇಜ್ ಸೃಷ್ಟಿಸಿದ್ದರು. ಪುರಿ ಜಗನ್ನಾಥ್ ನಿರ್ದೇಶನದ ಈ ಚಿತ್ರದಲ್ಲಿ ನಭಾ ಅವರ ಸೌಂದರ್ಯಕ್ಕೆ ಯುವ ಲೋಕ ಮಾರುಹೋಗಿದೆ.

ತೆಲುಗಿನಲ್ಲಿ ಸದ್ಯಕ್ಕೆ ಅವರಿಗೆ ಅವಕಾಶಗಳು ಕಡಿಮೆಯಾಗುತ್ತಿದ್ದು, ಸೋಷಿಯಲ್ ಮೀಡಿಯಾಗಳಲ್ಲಿ ಸೌಂದರ್ಯ ಲೋಕದ ಸೃಷ್ಟಿಗೆ ಮುಂದಾಗಿದ್ದಾರೆ. ಈ ಮೂಲಕ ನಿರಂತರ ಹಾಟ್ ಲುಕ್‌ನಲ್ಲಿ ಟ್ರೆಂಡಿಂಗ್ ಆಗುತ್ತಿದ್ದಾರೆ.

ಈ ಫೋಟೋಗಳನ್ನು ನೋಡಿದರೆ ನಭಾ ತಮ್ಮ ಸೌಂದರ್ಯದ ಮೇಲೆ ಸಂಪೂರ್ಣವಾಗಿ ಗಮನಹರಿಸಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

## ತೂಕ ಇಳಿಸಿದ ತಿವಾರಿ



44ನೇ ವಯಸ್ಸಿನಲ್ಲಿ 10 ಕಿಲೋಗ್ರಾಂಗಳಿಗಿಂತ ಹೆಚ್ಚು ತೂಕ ಇಳಿಸಿಕೊಂಡು ಅಭಿಮಾನಿಗಳನ್ನು ಬೆರಗುಗೊಳಿಸಿದ್ದಾರೆ! ಹೌದು! ಎರಡನೇ ಮಗುವಿನ ಜನನದ ನಂತರ ಶ್ವೇತಾ ತಿವಾರಿ ತೂಕ 73 ಕೆಜಿಗೆ ಏರಿತ್ತು. ಶ್ವೇತಾ ತಿವಾರಿ ದೂರದರ್ಶನದಲ್ಲಿ ಈಕೆ ಜನಪ್ರಿಯ ತಾರೆ. ಹಾಗೆಯೇ ಇವರು ಕಸೌಟಿ ಜಿಂದಗಿ ಕೆ ಧಾರಾವಾಹಿಯ ಪಾತ್ರಕ್ಕೆ ಹೆಸರುವಾಸಿಯಾದವರು. ಸದ್ಯ ಅವರು ತಮ್ಮ ಈಗ 10 ಕೆಜಿ ಇಳಿಸಿಕೊಂಡಿರುವ ಅವರು ಮತ್ತೆ ಫಿಟ್ ಆಗಿದ್ದಾರೆ. ವೃತ್ತಿಪರ ಬದ್ಧತೆಗಳೊಂದಿಗೆ ಆಹಾರ, ವ್ಯಾಯಾಮ ಮತ್ತು ಮಾನಸಿಕ ಗಮನಗಳನ್ನು ಒಳಗೊಂಡ ಶಿಸ್ತಿನ ದಿನಚರಿ ಅವರ ತೂಕ ನಷ್ಟ ಪ್ರಯಾಣಕ್ಕೆ ಸಹಕಾರಿಯಾದವು. 44 ವರ್ಷ ವಯಸ್ಸಿನ ಶ್ವೇತಾ, ಗರ್ಭಧಾರಣೆಯ ನಂತರ ಎದುರಿಸಿದ ಸವಾಲುಗಳ ಬಗ್ಗೆ ಮಾತನಾಡಿದ್ದಾರೆ. ಸಮಯದ ನಿರ್ಬಂಧಗಳ ಹೊರತಾಗಿಯೂ ಅವರು ಹೆಚ್ಚುವರಿ ತೂಕವನ್ನು ಕಳೆದುಕೊಳ್ಳಲು ದೃಢನಿಶ್ಚಯ ಮಾಡಿದ್ದರು. ಈಗ ಬಳಕುವ ಬಳ್ಳಿಯಂತೆ ಕಂಗೊಳಿಸುತ್ತಿರುವ ಶ್ವೇತಾ ತಿವಾರಿ, ಈಗಲೂ ಪಡ್ಡೆ ಹುಡುಗರ ಹಾಟ್ ಫೇವರಿಟ್ ಆಗಿದ್ದಾರೆ. ಶ್ವೇತಾ ತಿವಾರಿ ತಮ್ಮ ಮಾಟದಿಂದ ಯುವಕರ ಗಮನವನ್ನು ತನ್ನತ ಸೆಳೆಯುವುದರಲ್ಲಿ ಈಗ ಯಶಸ್ವಿಯಾಗಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966